ಆದರೆ ೧೯ ಗ್ರಾಮಗಳ ಬಡಪಾಯಿಗಳ ಪಾಲಿಗೆ ಇನ್ನೂ ಶೋಷಣೆ, ಅವರಿಗೂ ನ್ಯಾಯವಾಗಿ ದೊರೆಕಬೇಕಾದ ಹಸಿರುಕಾರ್ಡು ನೀಡಿ, ಬಡವರು ಬಯಸದ ಪ್ರಾಧಿಕಾರದ ವ್ಯಾಪ್ತಿಯ ಪ್ರಾರಬ್ಧದಿಂದಾಗಿ, ಬಡವರಿಗೆ ಕಾರ್ಡಿಲ್ಲದ ಪರಿತಾಪ ತಪ್ಪಿಸಿ ಇಲ್ಲವಾದರೆ ಈ ಅಧ್ವಾನಕ್ಕೆ ತಮಗೆ ಕಟ್ಟಿಟ್ಟದ್ದು ಬಡವರ ಕಡುಕೋಪದ ಉಗ್ರಶಾಪ ಎಂದು ಸರಕಾರದ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.— ನೀವು ಓದಿದ್ದುದು ಕವನ, ಪೊಯಿಟ್ರಿ.

ಶ್ರೀ ಅಬ್ದುಲ್ ನಜೀರ್ ಸಾಬ್.— ತಮ್ಮಲ್ಲಿ ಉತ್ತರ ತರಿಸಿಕೊಡುತ್ತೇನೆ.

ವಿತ್ತೀಯ ಕಾರ್ಯ ಕಲಾಪಗಳು

೧೯೮೮-೮೯ನೇ ಸಾಲಿಗೆ ಸಂಬಂಧಿಸಿದ ಅನುದಾನಗಳ ಬೇಡಿಕೆಗಳ ಮೇಲಿನ ಮುಂದುವರಿದ ಚರ್ಚೆ

ಅಧ್ಯಕ್ಷರು.— ಶ್ರೀ ಬಿ. ಬಸವಲಿಂಗಪ್ಪನವರು ತಮ್ಮ ಭಾಷಣವನ್ನು ಮುಂದುವರೆಸುವುದು.

ಶ್ರೀ ಬಿ. ಬಸವಲಿಂಗಪ್ಪ (ಯಲಂಕ).— ಮಾನ್ಯ ಅಧ್ಯಕ್ಷರೆ, ನಾನು ನಿನ್ನೆ ದಿವಸ ಮಾತನಾಡುತ್ತಾ ಇರುವಾಗ ಶ್ರೀಮಾನ್ ದೇವೇಗೌಡರು ಮಧ್ಯೆ ಪ್ರವೇಶ ಮಾಡಿ ೨೫ ಜನ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜನಿಯರ್ಸ್ ಅವರ ನೇಮಕಾತಿಗಳನ್ನು ನಮ್ಮ ಜನತಾ ಪಕ್ಷದ ಸರ್ಕಾರವು ಅಧಿಕಾರಕ್ಕೆ ಬಂದಮೇಲೆ ಮಾಡಿದ್ದೇವೆಂದು ಹೇಳಿದರು. ನಾನು ಹೇಳಿದೆ, ಇದು ಕಾಂಗ್ರೆಸ್ ಸರ್ಕಾರ ಇದ್ದಾಗ ತೀರ್ಮಾನ ತೆಗೆದುಕೊಂಡರು, ಅಲ್ಲಿಂದ ಹೈಕೋರ್ಟಿಗೆ ಹೋಗಿ.. ...

ಶ್ರೀ ಹೆಚ್. ಡಿ ದೇವೇಗೌಡ.— ನಿನ್ನೆ ಒಂದು ವಿಷಯ ಪ್ರಸ್ತಾಪ ಮಾಡಿದೆ. ೨೫ ಜನ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನೀಯರ್ಸ್ ಬ್ಯಾಕ್‌ಲಾಗ್‌ಗೋಸ್ಕರ ನಾವು ಆರ್ಡರ್ ಮಾಡಿದ್ದೇವೆಂದು ಹೇಳಿದ್ದೆ, ನನಗೆ ವಿಷಯ ಪೂರ್ತಿ ಗೊತ್ತಿರಲಿಲ್ಲ. ಮಾನ್ಯ ಮಂತ್ರಿಗಳು ಉತ್ತರ ಕೊಡತಕ್ಕ ಕಾಲದಲ್ಲಿ ಅವರ ಬಗ್ಗೆ ವಿವರಕೊಡುತ್ತಾರೆ. ಇದರ ಬಗ್ಗೆ ಉತ್ತರ ಕೊಡತಕ್ಕಂಥ ಕಾಲದಲ್ಲಿ ಮಂತ್ರಿಗಳು ಹೇಳುತ್ತಾರೆ. ೧೯೭೯ನೇ ಇಸವಿಯಲ್ಲಿ ಅಂದರೆ ದಿನಾಂಕ ೨೪-೩-೧೯೭೯ರಲ್ಲಿ ೨೫ ಜನ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜನೀಯರ್‌ಗಳನ್ನು ನೇರವಾಗಿ ನೇಮಕ ಮಾಡಿಕೊಳ್ಳಬೇಕೆಂದು ಹುಕುಂ ಮಾಡಿದ್ದೆವು. ಇದು ವಾಸ್ತವಾಂಶ. ಆದರೆ ಈ ವಿಷಯವನ್ನು ಹೈಕೋರ್ಟಿನಲ್ಲಿ ವಿಚಾರಣೆಗೆ ತೆಗೆದುಕೊಂಡು ಹೋದಮೇಲೆ ೧೯೮೨ನೇ ಇಸವಿಯಲ್ಲಿ ಅಂದರೆ ದಿನಾಂಕ ೧೭-೪-೧೯೮೨ರಂದು ನಾವು ಮಾಡಿದ ನಿರ್ಣಯವನ್ನು ಹೈಕೋರ್ಟ್ ರದ್ದು ಮಾಡಿತು. ಇದರ ಬಗ್ಗೆ ತಾವು ನಿನ್ನೆ ದಿವಸ ಮಾತನಾಡಿದಿರಿ. ಆದರೆ, ನನ್ನ ಹತ್ತಿರ ನಿನ್ನೆ ದಿವಸ ಮಾಹಿತಿ ಇಲ್ಲದೇ ಇದ್ದುದರಿಂದ ಅಧಿಕಾರಿಗಳಿಂದ ಮಾಹಿತಿಯನ್ನು ಪಡೆದು ಈಗ ತಮಗೆ ಹೇಳುತ್ತಿದ್ದೇನೆ. ನಾನು ಲೋಕೋಪಯೋಗಿ ಮಂತ್ರಿಯಾಗಿದ್ದು ೧೯೮೩ನೇ ಇಸವಿಯಲ್ಲಿ. ೧೯೭೯ನೇ ಇಸವಿಯಲ್ಲೇ ೨೫ ಜನ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜನೀಯರ್‌ಗಳನ್ನು ನೇರ ನೇಮಕ ಮಾಡಿಕೊಳ್ಳಬೇಕೆಂದು ತೀರ್ಮಾನವಾಗಿತ್ತು. ಆ ತೀರ್ಮಾನವನ್ನು ೧೯೮೨ನೇ ಇಸವಿಯಲ್ಲಿ ಹೈಕೋರ್ಟ್ ಸ್ಟ್ರಕ್‌ಡೌನ್ ಮಾಡಿತು ನಾನು ಅಧಿಕಾರಕ್ಕೆ ಬಂದ ಮೇಲೆ ಆಗಿದ್ದಲ್ಲ. ೨೫ ಜನ ಶೆಡ್ಯೂಲ್ ಕ್ಯಾಸ್ಟ್‌ನವರನ್ನು ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಲಾಗಿತ್ತು ಆದರೆ ಅದು ಆಗಲಿಲ್ಲ. It was struck down by the High Court in April, 1982.

ಶ್ರೀ ಬಿ. ಬಸವಲಿಂಗಪ್ಪ.— ನಾನು ನಿನ್ನೆ ದಿವಸ ಏಕೆ ಹೇಳಿದ್ದೆ ಎಂದರೆ, ಮಾನ್ಯ ದೇವೇಗೌಡರು ಬಹಳ ಧೈರ್ಯವಾಗಿ ಮತ್ತು ಸ್ಥಿರ ಮನಸ್ಸಿನಿಂದ ನಮ್ಮ ಜನತಾ ಸರ್ಕಾರ ಬಂದ ಮೇಲೆ ಆ ತರಹ ನಿರ್ಣಯ ಮಾಡಲಾಗಿತ್ತು ಎಂದು ಹೇಳಿದ್ದರು. ಈ ನಿರ್ಣಯ ೧೯೭೯ರಲ್ಲೇ ನಮ್ಮ ಸರ್ಕಾರವೇ ಮಾಡಿದ್ದು.

ಶ್ರೀ ಹೆಚ್ ಡಿ. ದೇವೇಗೌಡ.— ನಾನು ಯಾವಾಗಲೂ ಸಭೆಯನ್ನು ತಪ್ಪುದಾರಿಗೆಳೆಯುವುದಿಲ್ಲ. ಆ ಅಭ್ಯಾಸವು ನನಗಿಲ್ಲ. ೧೯೬೧ನೇ ಇಸವಿಯಲ್ಲೇ ಡೈರೆಕ್ಟ್ ರಿಕ್ರೂಟ್‌ಮೆಂಟ್ ನಿಂತು ಹೋಗಿತ್ತು. ೧೯೬೧ರಿಂದ ೧೯೮೩ರವರೆಗೆ ಡೈರೆಕ್ಟ್ ರಿಕ್ರೂಟ್‌ಮೆಂಟ್ ಆಗಲಿಲ್ಲ. So far as the direct recruitment in Public Works Department is concerned it was stopped

in 1961. Then Govt. took a decision for direct recruitment. ೨೫ ಪರ್ಸೆಂಟ್‌ನಷ್ಟು ಮಾತ್ರ ನೇಮಕ ಮಾಡಿಕೊಳ್ಳಬೇಕೆಂದು ತೀರ್ಮಾನ ಮಾಡಲಾಗಿತ್ತು. ಆದರೆ, ಅದರ ಬಗ್ಗೆ ಅಡ್ವರ್ಟೈಸ್‌ಮೆಂಟ್‌ನ್ನು ಸಹ ಕೊಟ್ಟಿರಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.— ತಾವು ಏನು ಹೇಳಿದಿರೋ ಅದನ್ನೇ ನಾನು ಹೇಳಿದೆ. ನಿನ್ನೆ ದಿವಸ ತಾವು ಅದನ್ನು ಹೇಳಿ, ಅದು ಸರಿಯಲ್ಲವೆಂದು ಹೇಳಿದ್ರಿ. ಅದು ನಿಜವಾಗಿದ್ದರೆ ಪಬ್ಲಿಕ್ ಆಗಿ ಅಪಾಲಜಿ ಕೇಳುತ್ತೇನೆಂದು ಸದನದಲ್ಲಿ ಹೇಳಿದಿರಿ. ಅದಕ್ಕೆ ನಾನು ಹೇಳಿದ್ದು ನಾನು ವಿಷಯಗಳನ್ನು ಚೆನ್ನಾಗಿ ತಿಳಿದುಕೊಂಡು ಮತ್ತು ಅಂಕಿ ಅಂಶಗಳ ಆಧಾರದ ಮೇಲೆ ಮಾತನಾಡುತ್ತೇನೆಯೇ ಹೊರತು ಸುಮ್ಮನೆ ಮಾತನಾಡುವುದಿಲ್ಲ. ಕೆಲವು ಸಾರಿ ತಪ್ಪಾಗಬಹುದು. ಆ ತಪ್ಪನ್ನು ಸರಿಪಡಿಸಿಕೊಳ್ಳತಕ್ಕ ದೊಡ್ಡಸ್ತಿಕೆ ತಮ್ಮಲ್ಲಿ ಇದೆ. ಅದಕ್ಕಾಗಿ ನಾನು ಸಂತೋಷಪಡುತ್ತೇನೆ.

ಶ್ರೀ ಹೆಚ್ ಡಿ. ದೇವೇಗೌಡ.— ನಿನ್ನೆ ದಿವಸ ಆ ವಿಷಯ ನನಗೆ ಗೊತ್ತಿರಲಿಲ್ಲ. ೧೯೮೨ನೇ ಇಸವಿಯಲ್ಲೇ ಆ ನಿರ್ಣಯವನ್ನು ಹೈಕೋರ್ಟ್ ಸ್ಟ್ರಕ್‌ಡೌನ್ ಮಾಡಿದೆ, ಅದರ ಮೇಲೆ ವಿಷಯವನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.— ಲೋಕೋಪಯೋಗಿ ಇಲಾಖೆಯಲ್ಲಿ ನೇರವಾಗಿ ನೇಮಕಾತಿಯನ್ನು ೧೯೬೧ನೇ ಇಸವಿಯಿಂದಲೂ ಆಗಿಲ್ಲವೆಂದು ನನಗೆ ಗೊತ್ತು. ಜನತಾ ಸರ್ಕಾರ ಬಂದ ಮೇಲೆ ನೇರ ನೇಮಕಾತಿ ಮಾಡಿಕೊಳ್ಳುವ ನಿರ್ಣಯವನ್ನು ಮಾಡಲಾಗಿತ್ತು ಎಂದು ತಾವು ಹೇಳಿದಿರಲ್ಲಾ ಅದಕ್ಕೆ ನಾನು ಹೇಳಿದೆ. ಆ ನಿರ್ಣಯವನ್ನು ಕಾಂಗ್ರೆಸ್ ಸರ್ಕಾರ ಇದ್ದಾಗಲೇ ಮಾಡಲಾಗಿತ್ತು. ಈ ನಿರ್ಣಯವನ್ನು ಕೋರ್ಟಿನವರು ರದ್ದು ಮಾಡಿದ್ದಾರೆ. ಕೋರ್ಟ್‌ನವರು ಸಮಾಜದ ನ್ಯಾಯ ಮಾಡು ವಾಗ ಕೆಲವು ಸಾರಿ ದಾರಿ ಬಿಟ್ಟು ಹೋಗುವುದು ಉಂಟು. ಆದರೆ, ಸಮಾಜ ನ್ಯಾಯ ಮಾಡುವಾಗ ಜನಗಳಿಗೆ ತೊಂದರೆ ಆಗದ ರೀತಿಯಲ್ಲಿ ನೋಡಿಕೊಂಡರೆ ಒಳ್ಳೆಯದು. ಸ್ವಾಮಿ, ನಾನು ಈಗ ಹೇಳುವುದಿಷ್ಟೇ, ಲೋಕೋಪಯೋಗಿ ಇಲಾಖೆಯಲ್ಲಿ ಬರೀ ಕಾಮಗಾರಿ ಮಾಡುವುದೇ ಉದ್ದೇಶ ಅಲ್ಲ. ಈ ಇಲಾಖೆಯಿಂದ ಲೋಕಕ್ಕೆಲ್ಲಾ ಉಪಯೋಗವಾಗಬೇಕು, ಎಲ್ಲಾ ವರ್ಗಕ್ಕೂ ಅನುಕೂಲವಾಗಬೇಕು.

ಶ್ರೀ ಹೆಚ್. ಡಿ. ದೇವೇಗೌಡ.— ಡೈರೆಕ್ಟ್ ರಿಕ್ರೂಟ್‌ಮೆಂಟ್ ಮಾಡಬೇಕೆಂಬ ಏನು ನಿರ್ಣಯ ಮಾಡಲಾಗಿತ್ತೋ ಆ ನಿರ್ಣಯದಂತೆ ಪ್ರತಿ ವರ್ಷವೂ ನೇಮಕ ಮಾಡಿಕೊಳ್ಳಬೇಕೆಂದು ತೀರ್ಮಾನ ಮಾಡಿದ್ದೆವು. ಅದರ ನೋಟಿಫಿಕೇಷನ್ ಬೇಕಾದರೆ ತಮಗೆ ಕಳುಹಿಸಿಕೊಡುತ್ತೇನೆ. ೨೫ ಪರ್‌ಸೆಂಟ್ ನಷ್ಟು ಡೈರೆಕ್ಟ್ ರಿಕ್ರೂಟ್ ಮಾಡಿಕೊಂಡು, ಪ್ರತಿ ವರ್ಷ ಏನು ವೇಕೆನ್ಸಿ ಬರುತ್ತದೋ ಅದರಲ್ಲಿ ೭೫ ಭಾಗ ಇನ್ ಸರ್‌ವೀಸ್‌ನಲ್ಲಿ ಇರುವವರಿಗೆ ಕೊಡಬೇಕೆಂದು ಮಾಡಿದ್ದೆವು.

ಅದರಲ್ಲಿ ೨೫ ಪರ್ಸೆಂಟ್ ಮಾತ್ರ ಡೈರೆಕ್ಟ್ ರಿಕ್ರೂಟ್‌ಮೆಂಟ್ ಮಾಡಬೇಕು, ಪ್ರತಿ ವರ್ಷ ಏನು ವೇಕೆನ್ಸೀಸ್ ಬರುತ್ತವೆ ಅದರಲ್ಲಿ ೭೫ ಪರ್ಸೆಂಟ್‌ನ್ನು ಇನ್‌ಸರ್‌ವೀಸ್‌ನಲ್ಲಿರುವವರಿಗೆ ಕೊಡಬೇಕು ೨೫ ಪರ್ಸೆಂಟ್‌ನ್ನು ನೇರವಾಗಿ ನೇಮಕ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅದರ ಆಧಾರದ ಮೇಲೆ ೬-೧-೮೦ ರಲ್ಲಿ ವೇಕೆನ್ಸಿಗಳನ್ನು ನೋಟಿಫೈ ಮಾಡಿದ್ದೇವೆ. ಕೆ. ಪಿ. ಎಸ್. ಸಿ. ಮೂಲಕ ತೆಗೆದುಕೊಳ್ಳಬೇಕೆಂದು ತೀರ್ಮಾನ ಆದ ಮೇಲೆ ಅದಕ್ಕೆ ಹೈಕೋರ್ಟ್‌ನವರು ಸ್ಟೇ ಕೊಟ್ಟರು. ಅವರು ಸ್ಟೇ ಕೊಟ್ಟ ಮೇಲೆ, ನಾವು ಲಾ ಡಿಪಾರ್ಟ್‌ಮೆಂಟ್‌ನವರಿಗೆ ನಮ್ಮ ಸೆಕ್ರೆಟರಿಯೇಟ್‌ನಿಂದ. ಹತ್ತಾರು ಬಾರಿ ರಿಮೈಂಡರ್ಸ್ ಕೊಟ್ಟಿದ್ದೇವೆ. ಅಡ್ವೋಕೇಟ್ ಜನರಲ್‌ರವರಿಗೆ ಹಲವಾರು ಬಾರಿ ರಿಮೈಂಡರ್ಸ್ ಕೊಟ್ಟಿದ್ದೇವೆ, ಸ್ಟೇ ವೆಕೇಟ್ ಮಾಡಿಕೊಡುವಂತೆ ಕೇಳಿ ಕೊಂಡಿದ್ದೇವೆ. ಸಿಂಗಲ್ ಜಡ್ಜ್ ಬೆಂಚ್‌ನಿಂದ ಡಬಲ್ ಬೆಂಚ್‌ಗೆ ಹೋಗಿದೆ. ಇವೊತ್ತು ಇರತಕ್ಕಂಥ ಪರಿಸ್ಥಿತಿಯು ನಮ್ಮ ಕಡೆಯಿಂದ ಅಲ್ಲ. ಲೋಕೋಪಯೋಗಿ ಇಲಾಖೆಯ ವತಿಯಿಂದ ಏನೇನು ಎಫರ್ಟ್ಸ್ ಮಾಡುವುದಕ್ಕೆ ಸಾಧ್ಯವೋ ಅದನ್ನೆಲ್ಲಾ ನಾವು ಮಾಡಿದ್ದೇವೆ. ಆದರೆ ನಾನು ಹೈಕೋರ್ಟ್‌ಗೆ ಇನ್‌ಫ್ಲೂಯೆನ್ಸ್ ಮಾಡಲಾರೆ. ಲಾ ಮಂತ್ರಿಯವರಿಗೆ ಮತ್ತು ಅಡ್ವೋಕೇಟ್ ಜನರಲ್ ರವರಿಗೆ ನೆನಪು ಮಾಡಿ ಕೊಟ್ಟಿದ್ದೇನೆ. ನನ್ನ ಕೈಯಲಾದ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.— ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ಸ್, ಗೆಜೆಟೆಡ್ ಹುದ್ದೆ ಯಿಂದ ಮೇಲ್ಪಟ್ಟು ನೇರವಾಗಿ ನೇಮಕಾತಿ ಮಾಡಲಿಕ್ಕೆ ಯಾರೂ ಪ್ರಯತ್ನ ಮಾಡಲಿಲ್ಲ. ನಾವು ಅದನ್ನು ಮಾಡಿದ್ದೇವೆ ಎಂದು ಹೇಳಿದ್ದೀರಿ. ಆದರೆ ಆವಾಗ ನಿರ್ಣಯವನ್ನು ತೆಗೆದುಕೊಂಡರೂ

ಕೂಡ ಇದುವರೆಗೆ ಜನರಿಗೆ ನ್ಯಾಯ ಸಿಗಲಿಲ್ಲ. ಎಂಬುದನ್ನು ನಾನು ಹೇಳಿದೆ. ೨೫ ಪರ್ಸೆಂಟ್ ನೇರವಾಗಿ ಮೀಸಲಾತಿ ಇಟ್ಟಿದ್ದೀರಿ ಎಂದು ಹೇಳಿದ್ದೀರಿ. ಜೂನಿಯರ್ ಇಂಜನೀಯರ್ಸ್ ಹುದ್ದೆಗಳಿಗೆ ರಿಕ್ರೂಟ್‌ಮೆಂಟ್ ಮಾಡಿದ್ದೀರಿ. ಮೇಲ್ದರ್ಜೆಯಲ್ಲಿ ಮಾಡಲಿಕ್ಕೆ ಆಗಲಿಲ್ಲ. ಅದನ್ನು ನಾನು ಹೇಳುತ್ತಿದ್ದೇನೆಯೇ ಹೊರತು ಬೇರೆ ಏನೂ ಅಲ್ಲ. ಇನ್ನೊಂದು ವಿಷಯವನ್ನು ಹೇಳುತ್ತಿದ್ದೇನೆ. ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ಸ್ ಹುದ್ದೆಗಳು ಇವೆ. ಅಲ್ಲಿ ಮೀಸಲಾತಿ ಪ್ರಾತಿನಿಧ್ಯ ಸರಿಯಾಗಿ ಇಲ್ಲದೇ ಹೋದರೆ ನೇರವಾಗಿ ರಿಕ್ರೂಟ್‌ಮೆಂಟ್ ಮಾಡತಕ್ಕಂಥದ್ದು ಎಂದು ಒಂದು ನಿರ್ದೇಶನ ಕೇಂದ್ರ ಸರಕಾರದವರಿಂದ ಬಂದಿದೆ. ಅದರ ಬಗ್ಗೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಕ್ಕೆ ನೀವು ಹೋಗಲಿಲ್ಲ. ಈಗಾದರೂ ಮನಸ್ಸಿಗೆ ಬಂದು ಮಾಡುತ್ತೀರೋ ಇಲ್ಲವೋ ಎಂದು ಕಾದು ನೋಡುತ್ತೇವೆ. ಯಾವ ಹುದ್ದೆಯಲ್ಲಿ ಈ ಜನಗಳಿಗೆ ಪ್ರಾತಿನಿಧ್ಯ ಇಲ್ಲ ಎಂದು ಹೇಳುತ್ತಾರೆ ಅದನ್ನು ಸರಿದೂಗಿಸಲಿಕ್ಕೆ ಪ್ರಯತ್ನ ಮಾಡುತ್ತೀರೋ ಹೇಗೋ ಎಂದು ಕಾದು ನೋಡುತ್ತೇವೆ,

ಈ ಲೋಕೋಪಯೋಗಿ ಇಲಾಖೆ ಎಂದು ಏನು ಹೇಳುತ್ತೇವೆ, ಅದು ಲೋಕಕ್ಕೆ ಉಪಯೋಗ ಆಗತಕ್ಕಂಥದ್ದಾಗಿರಬೇಕು. ಇವತ್ತು ಅದರಲ್ಲಿ ಮೂರು ವರ್ಗಗಳು ಇವೆ. ಅವರುಗಳು ಯಾರು ಅಂದರೆ, ಕಂಟ್ರಾಕ್ಟರ್ ರಾಜಕಾರಣಿ ಮತ್ತು ಇಂಜಿನಿಯರ್ಸ್ ಇವರ ಅನುಕೂಲಕ್ಕಾಗಿ ಆ ಇಲಾಖೆ ಇದೆ. ಜನರಿಗೆ ಅನುಕೂಲ ಮಾಡಿಕೊಡಲಿಕ್ಕೆ ಅದು ಇಲ್ಲ. ಯಾವ ಯಾವ ಪ್ರದೇಶಗಳಲ್ಲಿ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳುತ್ತಾರೋ ಅಲ್ಲಿರತಕ್ಕಂಥ ಬಡ ಜನರಿಗೆ, ಕಡು ಬಡ ಜನರಿಗೆ ಇದರಿಂದ ಅನುಕೂಲವಾಗಬೇಕು............

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯರು ಕೂಡ ಎಚ್. ಯು. ಡಿ. ಮಂತ್ರಿಗಳು ಆಗಿದ್ದವರು. ನೀವುಗಳು ಕಾವೇರಿ ನೀರನ್ನು ಬೆಂಗಳೂರಿಗೆ ತಂದಿದ್ದೀರಿ. ಅದನ್ನು ತಂದವರು ಅದರಲ್ಲಿ ಕೆಲಸ ಮಾಡಿದವರು ಯಾರು ? ನೀವು ಹೇಳಿದ ಈ ಮೂರು ವರ್ಗದವರು ಅಲ್ಲವೆ ? ಅದರಲ್ಲಿಯೂ ಇಂಜಿನಿಯರ್ಸ್ ಇರಲಿಲ್ಲವೇ ? ಇದನ್ನು ನೀವು ಒಪ್ಪಿಕೊಳ್ಳುತ್ತೀರಾ ? ಇವರೆಲ್ಲರೂ ಇಷ್ಟೆಷ್ಟು ತಿಂದು ಹಾಕಿದ್ದಾರೆ ಎಂದು ಹೇಳುತ್ತೀರಾ ? ಸುಮ್ಮನೆ ಹೀಗೆ ದಾವಾರು ಮಾಡುವುದರ ಬದಲಾಗಿ ಯಾವುದಾದರೂ ನಿರ್ದಿಷ್ಟವಾದ ಉದಾಹರಣೆಯನ್ನು ಹೆಸರಿಸಿರಿ. ಹಾಗೆ ತಿಂದು ಹಾಕಿದ ಅಧಿಕಾರಿ ಯಾರು ಎಂದು ಹೆಸರು ಹೇಳಿ. ಅನಂತರ ಸೂಕ್ತವಾದ ತನಿಖೆ ಮಾಡುವುದಕ್ಕೆ ಬರುತ್ತದೆ. ಡೆಲ್ಲಿಯಲ್ಲಿ ಯಾರೋ ಒಬ್ಬ ಇಂಜಿನಿಯರ್ ಫೈವ್‌ಸ್ಟಾರ್ ಹೋಟೆಲ್‌ನಲ್ಲಿ ಮಲಗಿದ್ದ, ಹಾಗೆಂದು ಹೇಳಿದರೆ ನಾನು ಏನು ಹೇಳಬಹುದು ? ನನಗೆ ಗೊತ್ತಿರುವ ಹಾಗೆ ನಾನು ಈ ಇಲಾಖೆಯನ್ನು ೫ ವರ್ಷಗಳ ಕಾಲ ನಡೆಸಿದ್ದೇನೆ ಎಂದು ಮಾತ್ರ ಅಲ್ಲ, ಇಂತಹ ವಿಷಯಗಳಲ್ಲಿ ಮೊದಲಿನಿಂದಲೂ ಆ ಕಡೆಯಲ್ಲಿ ಕುಳಿತುಕೊಂಡು ಸಹ ಇಲಾಖೆಯ ಬಗ್ಗೆ ಸಾಕಷ್ಟು ಕಟುವಾದ ಟೀಕೆಗಳನ್ನು ಮಾಡಿದ್ದೇನೆ. ಹೀಗೆ ಹೇಳತಕ್ಕಂಥ ಕಾಲದಲ್ಲಿ ನಿರ್ದಿಷ್ಟವಾದಂಥ ಆಪಾದನೆಗಳನ್ನು ಮಾಡಿದರೆ ಸೂಕ್ತ ಕ್ರಮವನ್ನು ಸಂಬಂಧಪಟ್ಟವರ ಮೇಲೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ, ಇಲ್ಲದಿದ್ದರೆ ಮಾಡಿದ ಆಪಾದನೆಯು ಪ್ರಯೋಜನವಾಗುವುದಿಲ್ಲ. ಇನ್ನು ತಾವು ಹೇಳಿದ ಹಾಗೆ ಫೈವ್‌ಸ್ಟಾರ್ ಹೋಟೆಲ್‌ಗಳಲ್ಲಿ ಕೆಲವು ಅಧಿಕಾರಿಗಳು ಇರುತ್ತಾರೆ. ಕೆಲವು ಐ. ಎ. ಎಸ್. ಅಧಿಕಾರಿಗಳು ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ಸ್ ಇರುತ್ತಾರೆ. ಅವರು ಹೋಗಿ ಅಲ್ಲಿ ತಂಗಿರಬಹುದು. ಇಂಜಿನಿಯರ್ಸ್‌ಗಳು ಸ್ವಂತ ದುಡ್ಡು ಕೊಟ್ಟು ಹೋಗಬೇಕಾಗಿರುತ್ತದೆ. ಅಧಿಕಾರಿಗಳು ಫೈವ್ ಸ್ಟಾರ್ ಹೋಟೆಲ್‌ಗಳಿಗೆ ಹೋಗುವುದಿಕ್ಕಾಗುವುದಿಲ್ಲ. ಯಾರು ಹಾಗೆ ಇರುತ್ತಾರೆಂದರೆ ಕಂಪನಿಗಳ ಚೇರ್ಮನ್ ಆಗಿಯೋ ಅಥವಾ ಎಂ. ಡಿ. ಯಾಗಿಯೋ ಐ.ಎ ಎಸ್. ಆಫೀಸರ್ಸ್ ಯಾರು ಇರುತ್ತಾರೆ ಅವರು ಹೋಟೆಲ್‌ನಲ್ಲಿರುತ್ತಾರೆ. ನೀವು ಆಪಾದನೆಯನ್ನು ನಿಖರವಾಗಿ ಮಾಡಿ. ಇಂಥವರು ಶನಿವಾರ, ಭಾನುವಾರ, ಸೋಮವಾರ ರೇಸ್‌ಗೆ ಹೋಗುತ್ತಾರೆ. ಇಂಥವರು, ಇಂಥವರು ಇಂಥ ಭೋಗ ಅನುಭವಿಸುತ್ತಿದ್ದಾರೆ ಎಂದು. ನಾನೂ ಕೂಡ ಐದು ವರ್ಷ ಇಲಾಖೆಯನ್ನು ಆಳಿದ್ದರಿಂದ ನನಗೂ ಇದನ್ನು ತಿಳಿದುಕೊಳ್ಳುವುದಕ್ಕೆ ಕುತೂಹಲವಿದೆ. ಸಂಬಂಧಪಟ್ಟ ಮಂತ್ರಿಗಳೂ ಇದನ್ನು ಪರಿಶೀಲಿಸುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ದೇವೇಗೌಡರು ಬಹಳ ಸ್ವಾರಸ್ಯವಾಗಿ ಮಾತಾಡುತ್ತಾರೆ, ಅವರನ್ನು ಕಂಡರೆ ನನಗೆ ಬಹಳ ಪ್ರೀತಿ. ಅವರು ಎಷ್ಟು ಸಾರಿ ಇಂಟರವೀನ್ ಮಾಡಿದರೂ ನಾನು ಕುಳಿತುಕೊಳ್ಳುತ್ತೇನೆ. ಅವರು ಹೇಳಿದಂತೆ ಹೋದ ಸಲ ನಾನು ಸ್ಪೆಸಿಫಿಕಾದ ವಿವರ ಕೊಟ್ಟಿದ್ದಾಗ ಅವರು ಏನೂ ಮಾಡಲಿಲ್ಲ. ದೇವೇಗೌಡರ ಮಾತಿನಂತೆ ಹೇಳುವುದಾದರೆ ಇಂಜಿನಿಯರ್‌ಗಳು.

ಅಧಿಕಾರಿಗಳೆಲ್ಲ ಸತ್ಯವಂತರು. ಕಾವೇರಿ ವಾಟರನ್ನು ಬೆಂಗಳೂರಿಗೆ ತಂದಾಗ ಸಂಬಂಧಪಟ್ಟ ಮಂತ್ರಿಯಾಗಿದ್ದ ನಾನು ಚಾವಟಿ ತಗೊಂಡು ಹೊಡೆದೆ, ಕೆಲಸ ಮಾಡಿಸಿದೆ, ನಗರಕ್ಕೆ ನೀರು ಬಂತು. ಆಗ ಬಹಳ ಟೆಂಡರುಗಳಿದ್ದುವು. ಯಾವ್ಯಾವ ಜನ ದುಡ್ಡು ತಿಂದರು ಅನ್ನುವುದು ನನ್ನ ಗಮನಕ್ಕೆ ಬಂದಿಲ್ಲ. ಅವರ ಹತ್ತಿರ ಇದ್ದರೆ ಹೇಳಲಿ. ನಾನೂ ಆಗ ದುಡ್ಡು ತೆಗೆದುಕೊಳ್ಳಬೇಕಾಗಿತ್ತು, ಇದುವರೆಗೂ ಅದಕ್ಕೆ ನಾನು ಮನಸ್ಸು ಮಾಡಲಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಇದೇ ಸದನದಲ್ಲಿ ನಾನು ಚರ್ಚೆ ಮಾಡಿದ್ದೆ. ಆಗ ಬಸವಲಿಂಗಪ್ಪನವರು ಈ ಕಡೆ ಕುಳಿತಿದ್ದು ನಾನು ಅವರ ಕಡೆ ಕುಳಿತಿದ್ದೆ. ಆಗ ನಾನು ಭ್ರಷ್ಟಾಚಾರದ ಬಗ್ಗೆ ಆಪಾದನೆಯನ್ನು ನಿಖರವಾಗಿ ಮಾಡಿದ್ದೆ. ಅವರು ಗುಪ್ತದಳದಿಂದ ತನಿಖೆ ಮಾಡಿಸುತ್ತೇನೆ ಎಂದಿದ್ದರು. ಇದೆಲ್ಲ ದಾಖಲೆಗೆ ಹೋಗಿದೆ. ನಾನು ಆ ವಿವರಗಳಿಗೆ ಹೋಗುವುದಿಲ್ಲ. ನಾನು ವೈಯುಕ್ತಿಕವಾಗಿ ಯಾರ ಮೇಲೆಯೂ ಆಪಾದನೆ ಮಾಡುತ್ತಿಲ್ಲ. ನಮ್ಮಲ್ಲಿ ಸತ್ಯವಂತರು ಅಸತ್ಯವಂತರು ಇಬ್ಬರೂ ಇದ್ದಾರೆ. ನಿಮ್ಮಲ್ಲಿ ನಿಖರ ಮಾಹಿತಿ ಇದ್ದರೆ ಅದಕ್ಕೆ ಪಿಎಸಿ ಇದೆ. ಈ ಘನತೆವೆತ್ತ ಸದನದ ಸದಸ್ಯರು ಅವರಾಗಿದ್ದಾರೆ, ಅವರಿಗೆ ಅದನ್ನು ಪ್ರಸ್ತಾಪಿಸಲು ಸರ್ವ ಹಕ್ಕೂ ಇದೆ.

ಶ್ರೀ ಬಿ. ಬಸವಲಿಂಗಪ್ಪ.—ಈ ಮಂತ್ರಿಗಳದು ಒಂದು ಅಭ್ಯಾಸ, ಏನಾದರೂ ಒಂದು ಹೇಳಿದರೆ ಸ್ಪೆಸಿಫಿಕ್ ಇನ್‌ಸ್ಟನ್ಸ್ ಕೊಡಿ ಎನ್ನುವುದು, ಕೊಟ್ಟಾಗ ಏನೂ ಕ್ರಮ ಇಲ್ಲ. ಅದಿರಲಿ. ಈಗ ನಾನು ಸರ್ವೇಸಾಧಾರಣವಾದ ಆಕ್ಷೇಪಣೆಗಳನ್ನು ಎತ್ತಿದ್ದೇನೆ. ನಿಮ್ಮ ಕಾಲದಲ್ಲಿ ಅಷ್ಟೆ ಅಲ್ಲ. ಕಳೆದ ೮ ವರ್ಷಗಳಿಂದಲೂ ಇದ್ದ ಬಗ್ಗೆಯನ್ನು ನಾನು ಹೇಳುತ್ತಿದ್ದೇನೆ. ನಾನು ಹೇಳುವುದೇನೆಂದರೆ ಈ ಲೋಕೋಪಯೋಗಿ ಕೆಲಸಗಳು ಏನು ನಡೆಯುತ್ತವೆ ಅಲ್ಲಿ ಕಡು ಬಡವರು ನಿರ್ಗತಿಕರು, ಸಮಾಜದ ಎಲ್ಲ ವರ್ಗಗಳ ದುರ್ಬಲರಿಗೆ ಅನುಕೂಲ ಆಗುವ ಕೆಲಸಗಳನ್ನು ಹಾಕಿಕೊಳ್ಳಬೇಕು, ಕಂಟ್ರಾಕ್ಟರ್‌ಗಳನ್ನು ಎಲ್ಲಿಂದಲೋ ಕರೆದುಕೊಂಡು ಬಂದು ಕಲಸ ಮಾಡಿ ಬಿಲ್ ಪಾಸ್ ಮಾಡಿಸುವುದಲ್ಲ, ಹಳ್ಳಿಗಳಲ್ಲಿ ಎಂಥೆಂಥ ನಿರ್ಗತಿಕ ಕೂಲಿಕಾರರಿದ್ದಾರೆ ಗೊತ್ತೇ ?

ಇವತ್ತು ಎಷ್ಟು ಜನ ಬೇರೆಯವರ ಹೊಟ್ಟೆ ಮೇಲೆ ಹೊಡೆದು ಅವರ ಹೊಟ್ಟೆ ತುಂಬಿಕೊಳ್ಳುತ್ತಿದ್ದಾರೆ ಅಂತಹವರ ಕಡೆಗೆ ಏನಾದರೂ ಗಮನ ಕೊಟ್ಟಿದ್ದೇವೆಯೇ, ಅಂತಹವರ ಕಡೆಗೆ ಗಮನ ಕೊಟ್ಟಿಲ್ಲ. ಲೋಕೋಪಯೋಗಿ ಅಂದರೆ ಲೋಕಕ್ಕೆಲ್ಲಾ ಉಪಯೋಗವಾಗಬೇಕು, ಕೆಲವು ವರ್ಗಕ್ಕೆ ಮಾತ್ರ ಇದು ಉಪಯೋಗವಾಗುವುದಲ್ಲ. ನಾನು ಈ ವಾದವನ್ನು ಹೇಳಿದ್ದು. ಸಿ.ಎ.ಜಿ. ಆಫ್ ಇಂಡಿಯಾ ಇವರು ಕೆಲವು ಆಕ್ಷೇಪಣೆಗಳನ್ನು ಎತ್ತಿದ್ದಾರೆ ಅದನ್ನು ತಾವು ನೋಡಬೇಕು. ನೋಡಿದ್ದೀರೋ ಇಲ್ಲವೋ ನನಗಂತೂ ಗೊತ್ತಿಲ್ಲ. ಅದರಲ್ಲಿ ಪುಟ ೧೧೬ರಲ್ಲಿ infructuous expenditure on daily rate workers. ಎಂದು ಇದೆ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇದು ಒಂದು ದೊಡ್ಡ ಸಮಸ್ಯೆಯಾಗಿ ನಮ್ಮ ಕರ್ನಾಟಕದ ಲೋಕೋಪಯೋಗಿ ಇಲಾಖೆಯಲ್ಲಿ ಕುಳಿತುಕೊಂಡಿದೆ. ಇದರ ಹಿನ್ನೆಲೆ ಏನು ಇದೆ ಎಂದರೆ ಯಾರ್ಯಾರು ಮುಖ್ಯ ಇಂಜಿನಿಯರ್ ಆಗಿದ್ದರು. ದೊಡ್ಡ ದೊಡ್ಡ ಅಧಿಕಾರಿಗಳಾಗಿದ್ದರು ಅವರು ಅವರವರ ಜಾತಿಯವರನ್ನು ಕ್ಲಾಸ್-೪, ಕ್ಲಾಸ್-೩ ಹುದ್ದೆಗಳಿಗೆ ಸಾವಿರಾರು ಜನಗಳನ್ನು ನೇಮಕ ಮಾಡಿದ್ದರು. ಇದು ಇದರ ಹಿನ್ನೆಲೆ. ಮಾನ್ಯ ದೇವೇಗೌಡರು ಅವರ ಚೇಂಬರ್‌ನಲ್ಲಿ ಸಭೆ ಕರೆದಾಗ ನಾನು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಇವರನ್ನು ಸಕ್ರಮಗೊಳಿಸತಕ್ಕಂತಹ ವಿಚಾರವನ್ನು ತಾವು ಮಾಡಿದಿರಿ. ೧೯೮೨ನೇ ಇಸವಿಯಲ್ಲಿ ದೂರು ಬಂದಾಗ ಈ ನೇಮಕಾತಿಗಳನ್ನು ನಿಲ್ಲಿಸಬೇಕೆಂದು ಸರಕಾರದವರು ಹುಕುಂ ಮಾಡಿದರು. ಆದರೂ ಕೂಡ ೮೨ ರಿಂದ ೮೫ರವರೆಗೆ ಸಾರೋದ್ಧಾರವಾಗಿ ನೇಮಕಾತಿ ನಡೆದೇ ಹೋಯಿತು. ಜವಾಬ್ದಾರಿಯಿರುವ ಚೀಫ್ ಇಂಜಿನಿಯರ್ ಆಗಲೀ ಇಲ್ಲವೇ ಬೇರೆ ಹಿರಿಯ ಅಧಿಕಾರಿಗಳಾಗಲೀ ಈ ಇಲಾಖೆಯಲ್ಲಿ ನೇಮಕಾತಿ ಮಾಡಿಕೊಳ್ಳುವುದನ್ನು ನಿಲ್ಲಿಸಲಿಲ್ಲ ಮಾಡಿಕೊಳ್ಳುತ್ತಲೇ ಹೋದರು. ಇವತ್ತಿನ ದಿವಸ ಸುಮಾರು ೫೮೩೩ ಜನಗಳನ್ನು ನೇಮಕಾತಿ ಮಾಡಿದ್ದಾರೆ ಯಾರ್ಯಾರು ಯೂನಿಟ್ ಆಫೀಸರ್ ಇದ್ದಾರೆ ಯಾರ್ಯಾರು ಜವಾಬ್ದಾರಿಯುಳ್ಳ ಅಧಿಕಾರಿಗಳಿದ್ದಾರೆ ಅಂದರೆ ಕೆಲಸಕ್ಕೆ ತೆಗೆದುಕೊಳ್ಳತಕ್ಕಂತಹ ಅಧಿಕಾರಿಗಳಿದ್ದಾರೆ ಅವರು ಅವರವರ ಜಾತಿಯವರನ್ನು ನೇಮಕಾತಿ ಮಾಡತಕ್ಕಂತಹ ಪ್ರವೃತ್ತಿ ಸರಾಗವಾಗಿ ನಡೆಯುತ್ತಲೇ ಇತ್ತು. ೧೯೮೫ರಲ್ಲಿ ಕೊಟ್ಟು ದೂರಿನ ಹಿನ್ನೆಲೆಯಲ್ಲಿ ಇದನ್ನು ಮಾಡಬಾರ

ದೆಂದು ಸರಕಾರ ಹುಕುಂ ಮಾಡಿದರೂ ಕೂಡ ೮೫ರವರೆಗೆ ನೇಮಕಾತಿಯನ್ನು ಮಾಡಿದ್ದಾರೆ. ಸುಪ್ರೀಂ ಕೋರ್ಟ್ ಆರ್ಡರ್ ಪ್ರಕಾರ ಇವರಿಗೆ ೨,೧೨,೭೮,೦೦೦ ರೂಪಾಯಿ ಹೆಚ್ಚುವರಿ ಸಂಬಳವನ್ನು ಕೊಡಬೇಕಾಯಿತು. ಧಾರವಾಡದ ಅಕ್ಷರಸ್ಥ ದಿನಗೂಲಿ ನೌಕರರ ಸಂಘದವರು ನಿಮ್ಮ ಮೇಲೆ ಸುಪ್ರೀಂ ಕೋರ್ಟಿನಲ್ಲಿ ಕೇಸ್ ಹಾಕಿದರು. ಆ ತೀರ್ಪಿನ ಪ್ರಕಾರ ತಾವು ಇಷ್ಟು ಹಣವನ್ನು ಕೊಡಬೇಕಾಯಿತು. ಯಾರು ಸರಕಾರಕ್ಕೆ ತಲೆಬಾಗದೇ ಸರಕಾರದ ವಿರುದ್ಧವಾಗಿ ಕೆಲಸ ಮಾಡಿದ್ದಾರೆ ನೇಮಕಾತಿಯನ್ನು ಮಾಡಿದ್ದಾರೆ, ಅವರು ನಿಮ್ಮ ಕಡೆ ಅಂದರೆ ನಿಮ್ಮನ್ನು ಲೆಕ್ಕಿಸದೇ ಕೆಲಸ ಮಾಡಿದ್ದಾರೆ ಇದರಿಂದಾಗಿ ಏನು ಸರಕಾರಕ್ಕೆ ೨ ಕೋಟಿಯಷ್ಟು ಲಾಸ್ ಆಗಿದೆ ಇದಕ್ಕೆ ಯಾರು ಜವಾಬ್ದಾರರು ಅವರ ಪಟ್ಟಿಯನ್ನು ಕಳಿಸಿ ಕೊಡಿ ಎಂದು ಕೇಳಿದರೆ ಇವತ್ತಿನವರೆಗೂ ಕಳಿಸಿಲ್ಲ. ಅಧಿಕಾರಿಗಳೇ ಆ ಪಟ್ಟಿಯನ್ನು ಕೊಡಬೇಕು ಅಧಿಕಾರಿಗಳೆಲ್ಲರೂ ತಪ್ಪು ಮಾಡಿದ್ದರಿಂದ ಅವರು ಪಟ್ಟಿಯನ್ನು ಕೊಟ್ಟಿಲ್ಲ. ಇದರಿಂದಾಗಿ ಅವರಿಗೆ ಶಿಕ್ಷೆ ಕೊಡತಕ್ಕಂತಹ ಪ್ರಮೇಯ ಇದುವರೆಗೂ ಬಂದಿಲ್ಲ. ಇದಕ್ಕೆ ಎ. ಜಿ. ಯವರು ಆಕ್ಷೇಪಣೆಯನ್ನು ಎತ್ತಿದ್ದಾರೆ. ತಾವು ಅವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಹೆಚ್. ಡಿ. ದೇವೇಗೌಡ.--ನಾವು ಏನು ಹುಕುಂ ಜಾರಿ ಮಾಡಿದೆವು ಅದನ್ನು ಅಧಿಕಾರಿಗಳು ಪಾಲಿಸಲಿಲ್ಲವೆಂದು ಮಾನ್ಯ ಬಸವಲಿಂಗಪ್ಪನವರು ಹೇಳುತ್ತಿದ್ದಾರೆ, ೧೯೮೨ರಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದೆವು ಅವರು ಅಲ್ಲಿಂದೀಚೆಗೆ ನೇಮಕ ಮಾಡುವುದು ಬೇಡವೆಂದು ವರದಿಯನ್ನು ಕೊಟ್ಟರು. ಆ ಪರ್ಟಿಕ್ಯುಲರ್ ಕಟ್ ಆಫ್ ಡೇಟ್ ಇದೆ. ಅಲ್ಲಿಯವರೆಗೆ ಇರತಕ್ಕಂತಹವರನ್ನು ಹೇಗೆ ರೆಗ್ಯುಲರೈಸ್ ಮಾಡಬೇಕೆಂದು ಕಮಿಟಿಯವರು ವರದಿ ಕೊಟ್ಟರು. ಅಲ್ಲಿಂದೀಚೆಗೆ ಏನು ನೇಮಕಾತಿಗಳಾಗಿದೆ ಅದನ್ನು ಚೀಫ್ ಇಂಜಿನಿಯರ್‌ರವರು ಮಾಡಲಿಲ್ಲ. ಆದರೆ ಎಕ್ಸಿಕ್ಯುಟೀವ್ ಇಂಜಿನಿಯರ್‌ಗಳು ಕೆಲವು ಕಡೆ ಮಾಡಿದ್ದಾರೆ. ಇದಕ್ಕೆ ಕಾರಣ ಬರೀ ಅಧಿಕಾರಿಗಳ ಮೇಲೆ ದೋಷ ಕೊಡುವುದರಲ್ಲಿ ಅರ್ಥ ಇಲ್ಲ. ಇದಕ್ಕೆ ಕಾರಣವೇನೆಂದರೆ ನೇಮಕಾತಿಗಳನ್ನು ಮಾಡತಕ್ಕಂಥದ್ದು ನಾನಾ ಕಾರಣದಿಂದ ಬ್ಯಾನ್ ಮಾಡಿದರು. ಸರ್ಕಾರದ ಎಮರ್ಜೆನ್ಸಿ, ಎಕನಾಮಿ ಆರ್ಡರ್ ಇರಬಹುದು, ಮತ್ತೊಂದು ಇರಬಹುದು. ಕೆಲವು ಆಫೀಸ್‌ಗಳಲ್ಲಿ ಕಸ ತೋಡಲಿಕ್ಕೂ ಜನ ಇಲ್ಲದೇ ಇರತಕ್ಕಂಥ ಪರಿಸ್ಥಿತಿ ಬಂತು. ಇವೊತ್ತು ಕೆಲವು ಕಡೆ ಟೈಪಿಸ್ಟ್ ಕೂಡಾ ಇಲ್ಲ, ಅಟೆಂಡರ್ಸ್ ಇಲ್ಲ, ಟ್ರೇಸರ್ಸ್ ಇಲ್ಲ. ಎಕಾನಮಿ ಆರ್ಡರ್ಸ್‌ನಿಂದ ಈ ಪರಿಸ್ಥಿತಿ ಬಂತು. ಅದು ಸರ್ಕಾರದ ಜವಾಬ್ದಾರಿ, ಇದು ಬೇರೆ ಜವಾಬ್ದಾರಿ ಅಲ್ಲ. ೮೦ರ ಸರ್ಕಾರ ಇರಬಹುದು. ೮೫ರ ಸರ್ಕಾರ ಇರಬಹುದು. ಅಂಥ ಕಡೆ ಏನು ಮಾಡುತ್ತಾರೆ ಎಂದರೆ ವಿಧಿ ಇಲ್ಲದೇ ದಿನಗೂಲಿ ಮೇಲೆ ಅಪಾಯಿಂಟ್ ಮಾಡಿಕೊಂಡರು. ಅದು ಕಂಟ್ರಾಕ್ಟ್ ಬೇಸಿಸ್ ಇರಬಹುದು ಆ ರೀತಿ ಮಾಡಿದ್ದಾರೆ. ಇವತ್ತು ಇದನ್ನೆಲ್ಲಾ ಹೇಳಿಕೊಳ್ಳುತ್ತಾ ಕುಳಿತುಕೊಳ್ಳುವುದು ಅರ್ಥ ಇಲ್ಲ. ಸುಪ್ರೀಂ ಕೋರ್ಟ್‌ನವರು ಸ್ಟೇ ಕೊಟ್ಟಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.--ಮಾನ್ಯ ದೇವೇಗೌಡರು ಇನ್ನೂ ಮಂತ್ರಿಗಳಾಗಿದ್ದಾರೆಯೋ ಎಂದು ನಮಗೆ ಅವಮಾನ ಬರುತ್ತದೆ. ಅದಕ್ಕೆ ಆನ್ಸರ್ ಮಾಡುವವರು ಬೇರೆ ಇದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ.--ನನ್ನ ಹೆಸರು ತೆಗೆದು ಹೇಳಿದರು. ನೀವು ಕುಳಿತುಕೊಂಡರೆ ಹೇಳುತ್ತೇನೆ.

ಶ್ರೀ ಯು. ಭೂಪತಿ.--ಲೋಕೋಪಯೋಗಿ ಡಿಮ್ಯಾಂಡ್ ಮೇಲೆ ನೀವೇ ಉತ್ತರವನ್ನು ಕೊಡಿ.

(ಗೊಂದಲ)

ಉಪಾಧ್ಯಕ್ಷರು.--ಮಾನ್ಯ ಭೂಪತಿಯವರೇ ದಯವಿಟ್ಟು ಕುಳಿತುಕೊಳ್ಳಿ. ಕ್ಲಾರಿಫಿಕೇಷನ್ ಕೊಟ್ಟರೆ ತಪ್ಪಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.--ಅವರು ನನ್ನ ಹೆಸರು ತೆಗೆದು ನನ್ನ ಆರ್ಡರ್‌ಗೆ ಬೆಲೆ ಇಲ್ಲ ಎಂದು ಹೇಳಿದರು, ಅದಕ್ಕೆ ಸ್ಪಷ್ಟೀಕರಣ ನೀಡಿದೆ. ನಾನು ಉತ್ತರ ಕೊಡುವುದಕ್ಕೆ ಯಾರು? ಅವರು ಕೊಡುತ್ತಾರೆ. ಸುಪ್ರೀಂ ಕೋರ್ಟ್‌ನಲ್ಲಿ ಸ್ಟೇ ಆಗಿರುವುದು ನಿಮಗೆ ಗೊತ್ತಿದೆ. ರೇಡಿಯೋ ದಲ್ಲಿ ಪ್ರಚಾರ ಆಯಿತು. ಅವರನ್ನು ವಾಪಸ್ಸು ತೆಗೆದುಕೊಳ್ಳದೇ ಹೋದರೆ ಕಂಟೆಮ್ಟ್ ಕೇಸು ಆಗುತ್ತದೆಂದು ಕರ್ನಾಟಕದ ಮುಖ್ಯಕಾರ್ಯದರ್ಶಿಯವರೇ ಹೋಗಿ ಕ್ಷಮಾಪಣೆ ಕೇಳಬೇಕಾಗಿ ಬಂತು. ಯಾರನ್ನು ತೆಗೆಯಬೇಕು ಎಂದು ನಿರ್ಣಯ ಮಾಡಿದ್ದೇವೆ ಅದಕ್ಕೆ ಸುಪ್ರೀಂ ಕೋರ್ಟ್‌ನವರು ಸ್ಟೇ

ಕೊಟ್ಟು ವಾಪಸ್ಸು ತೆಗೆದುಕೊಳ್ಳದಿದ್ದರೆ ಕಂಟೆಂಪ್ಟ್ ಆಫ್ ಕೇಸ್ ಆಗುತ್ತದೆಂದು ರೇಡಿಯೋದಲ್ಲಿ ಪತ್ರಿಕೆಗಳಲ್ಲಿ ಬಿತ್ತರಿಸಿದರು. ನಾವು ಏನು ಮಾಡುವುದು. ? You and I, have to be guided by the Courts.

ಶ್ರೀ ಬಿ. ಬಸವಲಿಂಗಪ್ಪ.—ಇದು ನಂತರದ ವಿಷಯ. ಮಾನ್ಯ ದೇವೇಗೌಡರಿಗೆ ಏತಕ್ಕೆ ಸಿಟ್ಟು ಬರುತ್ತದೆಯೋ ಗೊತ್ತಿಲ್ಲ, ಬರಲಿ. ಬರುವುದು ಒಳ್ಳೆಯದು. ನನ್ನ ವಿಷಯ ಇಷ್ಟೇ. ೧೯೭೬ನೇ ಇಸವಿಯಲ್ಲಿ ಯಾರಿಗೂ ನೇಮಕ ಮಾಡಬಾರದು ಎಂದು ನಿರ್ದೇಶನ ಕೊಟ್ಟಿದ್ದರೂ ಕೂಡಾ ೭೭ ರಿಂದ ೭೮ ರವರೆಗೂ ಐದು ಸಾವಿರ ಜನರನ್ನು ನೇಮಕ ಮಾಡಿಬಿಟ್ಟು ಸರ್ಕಾರಕ್ಕೆ ೨ ಕೋಟಿ ೧೭ ಲಕ್ಷ ೭೮ ಸಾವಿರ ರೂಪಾಯಿಗಳನ್ನು ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಕೊಟ್ಟರು. ಈ ರೀತಿ ಯಾರು ಮಾಡಿದ್ದಾರೆ, ಅಂಥ ಅಧಿಕಾರಿಗಳ ಬಗ್ಗೆ ಇನ್ನು ಏತಕ್ಕೆ ಕ್ರಮ ತೆಗೆದುಕೊಂಡಿಲ್ಲ ಎಂದು ಹೇಳುತ್ತೇನೆ. ಇದನ್ನು ನಾನು ಹೇಳುತ್ತಿಲ್ಲ. ಅಕೌಂಟೆಂಟ್ ಜನರಲ್‌ರವರು ಪಾಯಿಂಟ್ ಔಟ್ ಮಾಡುತ್ತಿದ್ದಾರೆ. ಅವರಿಗೆ ಶಿಕ್ಷೆ ಮಾಡಿಲ್ಲ, ಕ್ರಮ ತೆಗೆದುಕೊಂಡಿಲ್ಲ ಎಂದು ಅವರು ಹೇಳುತ್ತಿದ್ದಾರೆ. ಇದನ್ನು ಶ್ರೀಮಾನ್ ದೇವೇಗೌಡರು ನೋಡಿಲ್ಲ ಎಂದು ಕಾಣುತ್ತದೆ. ಇನ್ನೊಂದನ್ನು ಅಕೌಂಟೆಂಟ್ ಜನರಲ್ ಅವರು ಆರೋಪ ಮಾಡಿದ್ದಾರೆ. ಒಂದು ಹೆಲಿಕಾಪ್ಟರನ್ನು ೮೬ ಲಕ್ಷ ೩೨ ಸಾವಿರ ರೂಪಾಯಿಗಳಿಗೆ ಖರೀದಿ ಮಾಡಿದರು. ಅದನ್ನು ಖರೀದಿ ಮಾಡಿದ ಮೇಲೆ ಅದಕ್ಕೆ ಚಾಲನೆ ಮಾಡತಕ್ಕಂಥದ್ದು ಹೇಗೆ? ಅದನ್ನು ನಡೆಸತಕ್ಕಂಥ ಪೈಲಟ್‌ಗಳ ಅಪಾಯಿಂಟ್‌ಮೆಂಟ್ ಹೇಗೆ? ಇದರ ಬಗ್ಗೆ ಯಾರೂ ಕೂಡಾ ಯೋಚನೆ ಮಾಡಿಲ್ಲ. ಅದನ್ನು ತಂದು ಹಾಗೆಯೇ ಇಟ್ಟರು. ಅದನ್ನು ಒಂದು ವರ್ಷ ಉಪಯೋಗಿಸಲಿಲ್ಲ. ಆದರೂ ಅದಕ್ಕೆ ಎಷ್ಟು ಖರ್ಚಾಗಿದೆ ಎಂದರೆ ಹತ್ತು ಲಕ್ಷ ಐವತ್ತೇಳು ಸಾವಿರ ರೂಪಾಯಿಯನ್ನು ಇನ್ಸೂರೆನ್ಸ್‌ಗೋಸ್ಕರ ಕೊಟ್ಟಿದ್ದೀರಿ, ಆರು ಲಕ್ಷದ ಎಂಬತ್ತಾರು ಸಾವಿರ ರೂಪಾಯಿಗಳನ್ನು ಸರ್ವೀಸ್ ಛಾರ್ಜಸ್ ಎಂದು ಖರ್ಚು ಮಾಡಿದ್ದೀರಿ. ಸಂಬಳದ ಖರ್ಚು ಎಂದು ಎರಡು ಲಕ್ಷ ಹನ್ನೊಂದು ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೀರಿ. ಒಟ್ಟು ಹತ್ತೊಂಭತ್ತು ಲಕ್ಷ ಐವತ್ತಾರು ಸಾವಿರ ರೂಪಾಯಿಗಳನ್ನು ಹೆಲಿಕಾಪ್ಟರ್ ಉಪಯೋಗಿಸದೇ ಖರ್ಚು ಮಾಡಿದ್ದೀರಿ, ಇದು ಸರಿಯಲ್ಲ. ಇದಕ್ಕೆ ಆಕ್ಷೇಪಣಾರ್ಹರಾಗಿರತಕ್ಕಂಥವರು ಯಾರು? ಯಾರು ಅಧಿಕಾರಿಗಳು ತಪ್ಪು ಮಾಡಿದ್ದಾರೆ, ಅವರ ಕಡೆ ಗಮನ ಕೊಟ್ಟಿಲ್ಲ. ಅಂಥವರಿಗೆ ಶಿಕ್ಷೆ ಮಾಡಬೇಕು ಎಂದು ಅಕೌಂಟೆಂಟ್ ಜನರಲ್‌ರವರು ಹೇಳಿದ್ದಾರೆ. ಇದು ನಾನು ಹೇಳುತ್ತಿಲ್ಲ. ಅದಕ್ಕೆ ನೀವು ಸಮಜಾಯಿಷಿ ಕೊಡಬೇಕು. ನನ್ನ ಉದ್ದೇಶ ಏನೆಂದರೆ ಯಾವ ಯಾವ ಅಧಿಕಾರಿ ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಣೆ ಮಾಡುವುದಿಲ್ಲ, ಈ ಸರ್ಕಾರಕ್ಕೆ ಇಷ್ಟೊಂದು ಹಣ ನಷ್ಟವಾಗುವ ಹಾಗೆ ಮಾಡುವುದಕ್ಕೆ ಯಾರು ಪ್ರಯತ್ನ ಮಾಡುತ್ತಿದ್ದಾರೆ, ಅಂಥವರ ಬಗ್ಗೆ ನೀವು ಕನಿಕರವನ್ನು ಇಟ್ಟುಕೊಳ್ಳಬಾರದು. ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ನಾನು ಹೇಳುತ್ತಿದ್ದೇನೆ.

ನಂತರ ಮೂರನೇ ವಿಚಾರ ಎಂದರೆ, ಕಾಳಿ ನದಿ ಸೇತುವೆ ಕಟ್ಟುವ ವಿಚಾರದಲ್ಲಿ ಏನು ಆಕ್ಷೇಪಣೆ ಎತ್ತಿದ್ದಾರೆಂದರೆ, ಅಲ್ಲಿನ ಜಾಗವನ್ನು ಯಾವ ಇಂಜಿನಿಯರ್‌ಗಳು ಪರೀಕ್ಷೆ ಮಾಡಬೇಕಾಗಿತ್ತು, ಯಾರು ಪ್ಲಾನ್ ಮತ್ತು ಎಸ್ಟಿಮೇಟ್ ತಯಾರು ಮಾಡಬೇಕಾಗಿತ್ತು, ಯಾರು ಡಿಜೈನ್ ತಯಾರು ಮಾಡಬೇಕಾಗಿತ್ತು, ಅಂತಹವರು ಸರಿಯಾಗಿ ಮಾಡದಿದ್ದ ಕಾರಣ ಹಾಗೂ ಎಲ್ಲಿ ಮೆದು ಬಂಡೆ ಇದೆ, ಎಲ್ಲಿ ಗಟ್ಟಿ ಬಂಡೆ ಇದೆ ಎಂಬುದನ್ನು ನೋಡದೆ ಕಂಟ್ರಾಕ್ಟ್ ಕೊಟ್ಟ ಕಾರಣ, ಕಂಟ್ರಾಕ್ಟರ್‌ಗಳು ಇದೇ ಆಧಾರದ ಮೇಲೆ ಕೆಲಸ ಮಾಡುವುದಕ್ಕಾಗುವುದಿಲ್ಲ, ಮೆದುವಾದ ಬಂಡೆ ಸಿಕ್ಕಿರುವ ಕಾರಣ ಹೆಚ್ಚು ಹಣ ಕೊಡಬೇಕು ಎಂದು ಒತ್ತಾಯ ಮಾಡುವುದರಲ್ಲಿ ತಪ್ಪಿಲ್ಲ. ಆದರೆ ಸರಿಯಾಗಿ ಜಾಗದ ಪರೀಕ್ಷೆ ಮಾಡದ ಇಂಜಿನಿಯರ್‌ಗಳ ಮೇಲೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ? ಈ ಬಗ್ಗೆ ಅಕೌಂಟೆಂಟ್ ಜನರಲ್ ಅವರು ಏನು ಆಕ್ಷೇಪಣೆ ಎತ್ತಿದ್ದಾರೆ, ಅದಕ್ಕೆ ತಾವು ಉತ್ತರ ಕೊಡಬೇಕು. ತಪ್ಪು ಮಾಡಿದ ಇಂಜಿನಿಯರ್‌ಗಳ ಮೇಲೆ ಕ್ರಮ ತೆಗೆದುಕೊಳ್ಳದಿದ್ದರೆ, ಈ ಬಗ್ಗೆ ಸರ್ಕಾರ ಅಲಕ್ಷ್ಯ ಮನೋಭಾವನೆಯನ್ನು ತೋರಿಸಿದೆ, ಸಾರ್ವಜನಿಕ ಹಣ ದುರುಪಯೋಗವಾಗುತ್ತಿದೆ, ಈ ಬಗ್ಗೆ ಸರ್ಕಾರ ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲವೆಂದು ಜನರು ತಿಳಿದುಕೊಳ್ಳಬಹುದು. ಆದ್ದರಿಂದ ಇದಕ್ಕೆ ಅವಕಾಶ ಕೊಡದೆ ತಪ್ಪು ಮಾಡಿದವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರೆಂಬುದನ್ನು ಹೇಳಬೇಕು. ಮತ್ತೆ ಮಲ್ಟಿ ಸ್ಟೋರೀಡ್ ಬಿಲ್ಡಿಂಗ್ ಕಟ್ಟಿಸಿರುವ ಬಗ್ಗೆ ಏನು ಹೇಳಿದ್ದಾರೆಂದರೆ, ಪಶ್ಚಿಮದ ಬಡಾವಣೆಯಲ್ಲಿ ಮತ್ತು ಪೂರ್ವದ ಬಡಾವಣೆಯಲ್ಲಿ ಕೆಲಸ ಮಾಡಿದ ಕಂಟ್ರಾಕ್ಟರ್‌ಗಳಿಗೆ ಸಿಮೆಂಟ್ ಮತ್ತು ಕಬ್ಬಿಣದ

ಸರಬರಾಜನ್ನು ಮಾಡಿದ್ದರೂ ಸಹ ಅವರು ಕೆಲಸ ಮಾಡದೆ ನಿಲ್ಲಿಸಿದ ಕಾರಣ ಪಶ್ಚಿಮ ಬಡಾವಣೆ ಕೆಲಸದ ಕಂಟ್ರಾಕ್ಟರ್ ೪ ಲಕ್ಷದ ೭೪ ಸಾವಿರ ಹಾಗೂ ಪೂರ್ವ ಬಡಾವಣೆಯ ಕೆಲಸದ ಕಂಟ್ರಾಕ್ಟರ್ ೪ ಲಕ್ಷದ ೧೨ ಸಾವಿರ ರೂಪಾಯಿಗಳನ್ನು ಬಾಕಿ ಕೊಡಬೇಕಾಗಿದೆ ಎಂದು ಅಕೌಂಟೆಂಟ್ ಜನರಲ್ ಅವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಇಂಜಿನಿಯರ್‌ಗಳು ಚೆನ್ನಾಗಿ ಕೆಲಸ ಮಾಡುತ್ತಾರೆಂದು ಮಾನ್ಯ ದೇವೇಗೌಡರು ಹೇಳುತ್ತಾರೆ. ಆದರೆ ಈ ನ್ಯೂನತೆಗಳು ಇವರ ಕಾಲದಲ್ಲಿಯೇ ಆಗಿದ್ದರೂ ಸಹ ಸಂಬಂಧಪಟ್ಟ ಕಂಟ್ರಾಕ್ಟರ್‌ಗಳ ಮೇಲೆ ಇವರು ಯಾವುದೇ ಕ್ರಮ ಕೈಕೊಳ್ಳದಿದ್ದರೆ ನಮಗೆ ಏನು ಅರಿವಾಗುತ್ತದೆ ? ಇದರಲ್ಲಿ ರಾಜಕಾರಣಿಗಳು ಮತ್ತು ಕಂಟ್ರಾಕ್ಟರ್‌ಗಳು ಶಾಮೀಲಾಗಿದ್ದಾರೆಂದು ನಾವು ಸಂಶಯ ಪಡಲು ನೀವೇ ಅವಕಾಶ ಮಾಡಿಕೊಟ್ಟಂತೆ ಆಗುವುದಿಲ್ಲವೇ ? ಆದ್ದರಿಂದ ಇಂಥಾದಕ್ಕೆ ಅವಕಾಶ ಮಾಡಿಕೊಡಬೇಡಿ ಎಂದು ತಮಗೆ ಹೇಳುತ್ತಿದ್ದೇನೆ. ಮತ್ತೆ ಮಹಾಪುರ ಸೇತುವೆ ಸಂಬಂಧದಲ್ಲಿ ಸಹ ಸರಿಯಾದ ರೀತಿಯಲ್ಲಿ ಪರೀಕ್ಷೆ ಮಾಡಿಲ್ಲ. ಡಿಜೈನ್, ಪ್ಲಾನ್ ಮತ್ತು ಎಸ್ಟಿಮೇಟ್ ಸರಿಯಾಗಿ ತಯಾರು ಮಾಡಿಲ್ಲವೆಂದು ಹೇಳಿದ್ದಾರೆ. ಇದರಿಂದ ಸರ್ಕಾರಕ್ಕೆ ಸಾಕಷ್ಟು ಲುಕ್ಸಾನಾಗಿದೆ. ಇದಕ್ಕೆಲ್ಲಾ ಇಂಜಿನಿಯರ್‌ಗಳೇ ಕಾರಣ ಎಂದು ಅಕೌಂಟೆಂಟ್ ಜನರಲ್ ಅವರು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಕಂಟ್ರೋಲರ್ ಅಂಡ್ ಆಡಿಟರ್ ಜನರಲ್ ಆಫ್ ಇಂಡಿಯಾ ಅವರು ತಮ್ಮ ಸಿವಿಲ್ ರಿಪೋರ್ಟ್‌ನಲ್ಲಿ ವ್ಯಕ್ತ ಮಾಡಿರುವ ಆಕ್ಷೇಪಣೆಗಳನ್ನು ನೀವು ನಿವಾರಣೆ ಮಾಡದಿದ್ದರೆ, ಯಾರು ಅಕೌಂಟೆಂಟ್ ಜನರಲ್ ಇದ್ದಾರೆ, ಅವರಿಗೆ ಗೌರವ ಬರುವುದಿಲ್ಲ. ಅಷ್ಟೇ ಅಲ್ಲ, ಈ ಸರ್ಕಾರದವರು ನಿಸ್ಪೃಹತೆಯಿಂದ ಕೆಲಸ ಮಾಡುತ್ತಿಲ್ಲವೆಂಬ ಸಂಶಯ ನಮಗೆ ಬರುತ್ತದೆ. ಇದೇ ವಿಚಾರದಲ್ಲಿ ಸಾರ್ವಜನಿಕ ಲೆಕ್ಕಪತ್ರ ಸಮಿತಿಯವರು ಸಹ ಹಲವಾರು ಸಲಹೆಗಳನ್ನು ತಮ್ಮ ವರದಿಗಳಲ್ಲಿ ಮಾಡಿದ್ದಾರೆ. ನಾನು ಈ ಸಮಿತಿಯ ಅಧ್ಯಕ್ಷನಾಗಿದ್ದಾಗ ಸಹ ಹಲವಾರು ಶಿಫಾರಸ್‌ಗಳನ್ನು ಮಾಡಿದ್ದೇನೆ. ನಾವು ಕೊಟ್ಟ ವರದಿಗಳನ್ನು ಮಾನ್ಯ ದೇವೇಗೌಡರು ಏನಾದರೂ ಓದಿದ್ದಾರೆಯೇ ? ಓದಿದ್ದರೆ ಅದರ ಮೇಲೆ ಏನೇನು ಕ್ರಮಗಳನ್ನು ಕೈಕೊಂಡಿದ್ದಾರೆ ? ಇವರು ಕ್ರಮ ಕೈಕೊಂಡ ಬಗ್ಗೆ ಏಳ್ಳಷ್ಟು ಆಧಾರವಿಲ್ಲ. ಇವರು ನಾವು ಕೊಟ್ಟ ವರದಿಗಳನ್ನು ಓದಿದ್ದಾರೆಂದು ನನಗೆ ಮನವರಿಕೆ ಆಗಿಲ್ಲ. ಇವರು ಯಾವ ಯಾವ ಕಂಟ್ರಾಕ್ಟರ್‌ಗಳಿಗೆ ಕೆಲಸ ಕೊಟ್ಟಿದ್ದಾರೆ, ಅವರಿಗೆಲ್ಲಾ ೧೦ ಲಕ್ಷ, ೧೫ ಲಕ್ಷ ಹೀಗೆ ಮುಂಗಡವಾಗಿ ಸುಮಾರು ಒಂದು ಕೋಟಿ ೨೫ ಲಕ್ಷದಷ್ಟು ಹಣವನ್ನು ಮುಂಗಡವಾಗಿ ಕೊಟ್ಟಿದ್ದಾರೆ. ಇಷ್ಟೊಂದು ಹಣವನ್ನು ಅವರ ಮೇಲೆ ಬಿಟ್ಟರೆ ಜನರು ಏನು ತಿಳಿದುಕೊಳ್ಳುತ್ತಾರೆಂಬುದನ್ನು ತಾವು ಯೋಜನೆ ಮಾಡಬೇಕು ?

೧೧-೩೦ ಎ.ಎಂ.

ಮತ್ತೆ ಹಲವಾರು ಸಲಹೆಗಳನ್ನು ಮಾಡಬಹುದು. ಆದರೆ ನಾನು ಜಾಸ್ತಿ ಹೊತ್ತು ಸಮಯ ತೆಗೆದುಕೊಂಡಿದ್ದೇನೆ ಎಂದು ನನಗೆ ಅನ್ನಿಸುತ್ತದೆ.

ಉಪಾಧ್ಯಕ್ಷರು.—ಒಂದೂವರೆ ಗಂಟೆ ಆಯಿತು ತಾವು ಬೇಗ ಮುಗಿಸಿ.

ಶ್ರೀ ಬಿ. ಬಸವಲಿಂಗಪ್ಪ.—ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಸಂಸ್ಥೆ ಏನಿದೆ ಈ ಸಂಸ್ಥೆಗೆ ಇದುವರೆಗೆ ಸರ್ಕಾರ ೭ ಕೋಟಿ ೬೦ ಲಕ್ಷ ರೂಪಾಯಿಗಳ ಬಂಡವಾಳವನ್ನು ಕೊಟ್ಟಿದೆ, ಈ ಬಂಡವಾಳವನ್ನು ತೀರಿಸಿದ್ದಕ್ಕೆ ಯಾವುದೇ ಪುರಾವೆಗಳಿಲ್ಲ. ವರ್ಷಂಪ್ರತಿ ಹೀಗೆಯೇ ಸರ್ಕಾರದಿಂದ ಹಣ ಪಡೆದು ಕೆಲಸ ಮಾಡುತ್ತಾ ಇದ್ದಾರೆ. ಈ ಬಗ್ಗೆ ಏನು ಬಡ್ಡಿ ಹಾಕಿದ್ದೀರಿ ಆ ಬಡ್ಡಿ ಕೊಟ್ಟಿದ್ದಕ್ಕೂ ಪುರಾವೆಗಳಿಲ್ಲ. ಆದುದರಿಂದ ಅದರ ಕಡೆ ಗಮನ ಕೊಡಬೇಕು ಎಂದು ಹೇಳುತ್ತೇನೆ.

ಇನ್ನು ರಸ್ತೆ ವಿಚಾರದಲ್ಲಿ ಹೇಳುವುದಾದರೆ, ಈ ರಸ್ತೆ ವಿಚಾರದಲ್ಲಿ ಏನು ಕ್ರಮ ತೆಗೆದುಕೊಳ್ಳುತ್ತೀರಿ. ಇದಕ್ಕಾಗಿ ಬಜೆಟ್‌ನಲ್ಲಿ ೩೯ ಕೋಟಿ ೪೪ ಲಕ್ಷ ರೂಪಾಯಿಗಳನ್ನು ಒದಗಿಸಿದ್ದೀರಿ. ನೀವು ಇಷ್ಟು ಕಿಲೋಮೀಟರ್ ರಸ್ತೆಗಳನ್ನು ಮಾಡಬೇಕು ಎಂದು ಇದ್ದೀರಿ ಇದನ್ನು ಭಾಗ ಮಾಡಿದರೆ ೩ ಸಾವಿರ ರೂಪಾಯಿಗೆ ಒಂದೊಂದು ಕಿಲೋಮೀಟರ್‌ಗೆ ಬರುತ್ತದೆ. ಇದರಲ್ಲಿ ಯಾವ ರಸ್ತೆ ಮಾಡುವುದಕ್ಕಾಗುತ್ತದೆ ? ಅಸ್ಫಾಲ್ಟ್, ಟಾರ್ ಹಾಕಿ ರಸ್ತೆ ಮಾಡುವುದಕ್ಕೆ ಆಗುತ್ತದೆಯೇ ? ರಸ್ತೆಗಳನ್ನು ಮಾಡಬೇಕಾದರೆ ಅಸ್ಫಾಲ್ಟ್ ಮಾಡದೇ ಹೋದರೆ ಆಗುವುದಿಲ್ಲ ನಾನು ವಿನಯಪೂರ್ವಕವಾಗಿ ಹೇಳುತ್ತೇನೆ. ಇದನ್ನೆಲ್ಲಾ ತಾವು ವಿಚಾರ ಮಾಡಬೇಕು ಜಾಸ್ತಿ ಹಣ ಒದಗಿಸಬೇಕು. ಈ ಸಾರಿಗೆ ಸುಗಮವಾಗಿ ಆದರೆ ಇದರಿಂದ ರೈತನಿಗೂ ಅನುಕೂಲವಾಗುತ್ತದೆ ; ಬೇರೆಯವರಿಗೂ ಅನುಕೂಲವಾಗುತ್ತದೆ. ಆದ್ದ

ರಿಂದ ಅದಕ್ಕೆ ನೀವು ಜಾಸ್ತಿ ಹಣ ಒದಗಿಸಬೇಕು, ಶೀಘ್ರವಾಗಿ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನು ವಸತಿ ಖಾತೆಯ ಮಂತ್ರಿಗಳು ಬಂದಿದ್ದಾರೋ ಇಲ್ಲವೋ ಗೊತ್ತಿಲ್ಲ ವಸತಿ ಮತ್ತು ನಗರಾಭಿವೃದ್ಧಿ ವಿಚಾರದಲ್ಲಿ ಹೇಳುವುದಾದರೆ, ನಿವೇಶನಗಳನ್ನು ಹಂಚಿಕೆಮಾಡುವುದರ ಬಗ್ಗೆ ಕಾಂಗ್ರೆಸ್ ಸರ್ಕಾರ ಇದ್ದಾಗ ೯ ಲಕ್ಷ ಫಲಾನುಭವಿಗಳನ್ನು ನಾವು ಗುರುತಿಸಿದ್ದೆವು. ಅದರ ಪೈಕಿ ಸುಮಾರು ೬-೭ ಲಕ್ಷ ನಿವೇಶನಗಳನ್ನು ಅವರಿಗೆ ಕೊಡಲಾಗಿದೆ. ಈಗ ಇವರ ಗಣತಿ ಪ್ರಕಾರ ೧೪ ಲಕ್ಷ ೪೯ ಸಾವಿರ ಫಲಾನುಭವಿಗಳಿದ್ದಾರೆ. ಅವರಿಗೆ ನಿವೇಶನಗಳನ್ನು ಒದಗಿಸಬೇಕು ಎಂದು ಇದ್ದೀರಿ. ಇನ್ನೂ ೫ ಲಕ್ಷ ನಿವೇಶನಗಳನ್ನು ಕೊಡಬೇಕು ಎಂದು ಇದೆ. ಮತ್ತೆ ಈ ೫ ಲಕ್ಷ ನಿವೇಶನಗಳನ್ನು ಕೊಡಬೇಕಾದರೆ ನೀವು ಯಾವಾಗ ಕೊಡುತ್ತೀರಿ, ಯಾವಾಗ ಮುಗಿಸುತ್ತೀರಿ ಎನ್ನುವುದು ನಿಮ್ಮ ಬಜೆಟ್‌ನಲ್ಲಿಲ್ಲ ಹಿಂದೆ ಅಂದರೆ ೧೯೬೭-೬೮ ರಲ್ಲಿ ೪೦ ಸಾವಿರ ನಿವೇಶನಗಳನ್ನು ಕೊಟ್ಟಿದ್ದೀರಿ. ಈ ರೀತಿ ಕೊಡುತ್ತಾ ಹೋದರೆ ಎಷ್ಟು ವರ್ಷ ಹಿಡಿಯುತ್ತದೆ, ಅದಕ್ಕೋಸ್ಕರ ಜನ ಎಷ್ಟು ವರ್ಷ ಕಾಯಬೇಕಾಗುತ್ತದೆ ಎನ್ನುವುದನ್ನು ತಾವು ಯೋಚನೆ ಮಾಡಬೇಕು. ೧೯೭೩-೭೪ ರಿಂದ ೧೯೭೮ರ ವರೆಗೆ ೧ ಲಕ್ಷ ೭೯ ಸಾವಿರ ಮನೆಗಳನ್ನು ಕಟ್ಟಿದ್ದೆವು. ೧೯೮೩-೮೪ ರಿಂದ ಬರೀ ೨ ಲಕ್ಷದ ೫೫೫ ಮನೆಗಳನ್ನು ನೀವು ಪೂರೈಸಿದ್ದೀರಿ ಅಂದರೆ ವರ್ಷಕ್ಕೆ ಸುಮಾರು ೪೦-೪೧ ಸಾವಿರ ಮನೆಗಳನ್ನು ಕಟ್ಟುತ್ತಾ ಇದ್ದೀರಿ. ಕಟ್ಟಲಿಕ್ಕೆ ಯೋಚನೆ ಮಾಡಿದ್ದೀರಿ. ನಾನು ಬಹಳ ವಿಷಾದದಿಂದ ಹೇಳುತ್ತಾ ಇದ್ದೇನೆ. ೧೯೫೭-೫೭ ರಿಂದ ಪೂರೈಸದೆ ಇರತಕ್ಕಂಥ ಮನೆಗಳು ಜಾಸ್ತಿ ಇವೆ. ಅವುಗಳನ್ನು ಪೂರೈಸತಕ್ಕಂಥ ವಿವೇಚನೆ ಇಲ್ಲ. ಅವುಗಳನ್ನು ಪೂರೈಸಿಬಿಟ್ಟು ಹೊಸ ಮನೆಗಳನ್ನು ತೆಗೆದುಕೊಳ್ಳಬೇಕೆ ವಿನಹ ವರ್ಷಂಪ್ರತಿ ಇಷ್ಟು ಮನೆಗಳನ್ನು ಕಟ್ಟುತ್ತಾ ಇದ್ದೇವೆ ಎಂದು ಹೇಳುತ್ತಾ ಹೋದರೆ ಅರ್ಧಂಬರ್ಧ ಆಗಿರತಕ್ಕ ಮನೆಗಳು ಹಾಗೆಯೇ ಉಳಿಯುತ್ತವೆ, ಹೊಸ ಮನೆಗಳನ್ನು ಕಟ್ಟಲಿಕ್ಕೆ ಆಗುವುದಿಲ್ಲ. ವಿಶೇಷ ಘಟಕ ಯೋಜನೆಯಲ್ಲಿ ಒಂದು ಉದಾಹರಣೆಗೆ ಹೇಳುವುದಾದರೆ ಮನೆ ಕಟ್ಟಿ ಕೊಡತಕ್ಕ ಒಂದು ಯೋಜನೆ ಇದೆ. ಹೋದ ವರ್ಷ ಜುಲೈ ತಿಂಗಳಲ್ಲಿ ಹಣ ಬಂದಿದ್ದರೂ, ಕೂಡ, ಡಿಸೆಂಬರ್, ಜನವರಿ ಫೆಬ್ರವರಿ, ಮಾರ್ಚಿ ತಿಂಗಳವರೆಗೆ, ಅದನ್ನೂ ರಿಲೀಸ್ ಮಾಡಿಲ್ಲ ಕೇಂದ್ರ ಸರ್ಕಾರ ಕೊಟ್ಟರತಕ್ಕ ಹಣವನ್ನು ಹಾಗೆ ಇಟ್ಟುಕೊಂಡು ಮಾರ್ಚಿ ತಿಂಗಳಿನಲ್ಲಿ ಬಿಡುಗಡೆ ಮಾಡಿದರೆ, ಯಾರಿಗೆ ಅನುಕೂಲವಾಗುತ್ತದೆ ? ಏತಕ್ಕೋಸ್ಕರ ಹೀಗೆ ಮಾಡುತ್ತಾರೆ ? ಬೆಂಗಳೂರು ಜಿಲ್ಲೆಯಲ್ಲಿ ೭೯ ಲಕ್ಷ ರೂಪಾಯಿಗಳನ್ನು ವಿಶೇಷ ಘಟಕ ಯೋಜನೆಗಾಗಿ ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ. ಅದರಲ್ಲಿ ವಿಶೇಷವಾಗಿ ಮನೆ ಕಟ್ಟತಕ್ಕ ಯೋಜನೆಗಳಿಗೆ ಒಂದೊಂದು ತಾಲ್ಲೂಕಿನಲ್ಲಿ ೪-೫ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಈ ಹಣ ಫೆಬ್ರವರಿ ತಿಂಗಳಲ್ಲಿ ಖರ್ಚಾಗಿಲ್ಲ ಮಾರ್ಚಿ ತಿಂಗಳ ೨೦ನೇ ತಾರೀಖು ಆದ ನಂತರ ಎಲ್ಲಾ ಖರ್ಚಾಗಿದೆಯೆಂದು ಹೇಳಿಬಿಟ್ಟಿದ್ದಾರೆ ನೀವೇ, ತಾವೇ ಅಧ್ಯಕ್ಷರಾಗಿರತಕ್ಕ ಸಭೆಯಲ್ಲಿ ಇದನ್ನು ತೀರ್ಮಾನ ಮಾಡಿದ್ದೀರಿ. ಮಾರ್ಚಿ ತಿಂಗಳಲ್ಲಿ ೭೯ ಲಕ್ಷ ರೂಪಾಯಿಗಳು ಖರ್ಚಾಗಿವೆಯೆಂದು ತಿಳಿದು ಬಂತು. ಕೇಂದ್ರ ಸರ್ಕಾರ ಇದಕ್ಕೆ ಯಾವಾಗ ಮಂಜೂರಾತಿ ಕೊಟ್ಟಿತು ? ಜುಲೈ ತಿಂಗಳಲ್ಲಿ ಆದ್ದದ್ದೂ, ಮಾರ್ಚಿ ತಿಂಗಳಾದರೂ ಖರ್ಚುಮಾಡದೆ ಹೋದರೆ, ಅಧಿಕಾರಿಗಳ ಮೇಲೆ ನಿಮಗೆ ಹತೋಟಿ ಇದೆಯೋ ಎನ್ನುವ ಸಂಶಯ ಬರುತ್ತದೆ. ತಾವು ಮನಸ್ಸಿಟ್ಟು ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ತಮಗೆ ಇನ್ನು ಎಷ್ಟು ಸಮಯ ಬೇಕು ?

ಶ್ರೀ ಬಿ. ಬಸವಲಿಂಗಪ್ಪ.—ಇನ್ನು ೧೫ ನಿಮಿಷದಲ್ಲಿ ಮುಗಿಸುತ್ತೇನೆ.

ಉಪಾಧ್ಯಕ್ಷರು.— ಬೇಗ ಮುಗಿಸಿ

ಶ್ರೀ ಬಿ. ಬಸವಲಿಂಗಪ್ಪ.—ನಾನು ಹೌಸಿಂಗ್ ಬೋರ್ಡ್ ಮಂತ್ರಿಯಾಗಿದ್ದಾಗ ಲೆಕ್ಕಪತ್ರಗಳನ್ನು ತನಿಖೆ ಮಾಡಬೇಕೆಂದು ಸಮಿತಿ ಮಾಡಿದ್ದೆ, ಸಮಿತಿ ಮಾಡಿದ ಮೇಲೆ ಅದರ ರಿಪೋರ್ಟ್ ಕೂಡ ಬಂತು. ಆ ರಿಪೋರ್ಟನ್ನು ೧೯೭೩ರಲ್ಲಿ ಸರ್ಕಾರಕ್ಕೆ ಸಲ್ಲಿಸಿದ್ದಾರೆ. ಅದರ ಪ್ರಕಾರ ಹೌಸಿಂಗ್ ಬೋರ್ಡಿಗೆ ಸಂಬಂಧಪಟ್ಟಂತೆ ಹಲವಾರು ಸಲಹೆಗಳನ್ನು ಮಾಡಿದ್ದಾರೆ. ಅದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಅದರಲ್ಲಿ ಒಂದೆರಡು ಅಂಶಗಳನ್ನು ಮಾತ್ರ ನಾನು ಓದುತ್ತೇನೆ. This is a report submitted by the specially appointed officer who was appointed to go into the details of the working of the Housing Board.

"The above observations have been made from the general review of the records on important items of the concerned sections of the Mysore Housing Board, as it was not possible and also necessary to go into greater details since regular audit is conducted by the Controller, State Accounts Department, as per Section 54/55 J of the Act. The Controller of State Accounts Department, does not seem to have however brought important irregularities relating to works and other allied financial matters to the notice of the Board by special letters."

"(1) The Chairman of the Board is vested with so many powers."

Then the summary :

"The Board has constructed houses without making judicious selection of sites with reference to the public demand. Consequently, several houses of Lower Income Group and Middle Income Group, costing Rs. 1451-720/- have remained unutilised. Then the rent due from the tenants is not regularly collected and registers are not maintained."

ನನಗೆ ಆಗ ಏನು ಸಂಕಟವಾಗಿತ್ತು ಅದೇ ಸಂಕಟ ಇವೊತ್ತಿಗೂ ಕೂಡ ಹಾಗೆಯೇ ಉಳಿದಿದೆ. ೧೨೭ ಕೋಟಿ ರೂಪಾಯಿಗಳ ಬಂಡವಾಳದಲ್ಲಿ ಕಟ್ಟಿರತಕ್ಕ ಮನೆಗಳಿಗೆ ಸಂಬಂಧಪಟ್ಟಂತೆ ಯಾವ ಲೆಕ್ಕ ಪತ್ರಗಳೂ ಕೂಡ ಇಲ್ಲ. ಅವರು ಸರಿಯಾಗಿ ರಿಜಿಸ್ಟರ್‌ನ್ನು ಮೆಂಟೇನ್ ಮಾಡಿಲ್ಲ. ಒಂದು ವೇಳೆ ರಿಜಿಸ್ಟರ್‌ನ್ನು ಮೆಂಟೇನ್ ಮಾಡಿದ್ದರೂ ಕೂಡ ಅಸಂಬದ್ಧವಾಗಿ ಮಾಡಿದ್ದಾರೆ. ಈ ಕಟ್ಟಡಗಳನ್ನು ಯಾರ್ಯಾರಿಗೆ ಕೊಟ್ಟಿದ್ದಾರೆ, ಕಮರ್ಷಿಯಲ್ ಬಿಲ್ಡಿಂಗ್‌ಗಳನ್ನು ಯಾರ್ಯಾರಿಗೆ ಕೊಟ್ಟಿದ್ದಾರೆ, ಇನ್‌ಸ್ಟಾಲ್‌ಮೆಂಟ್ ಬೇಸಿಸ್ ಮೇಲೆ ಯಾರ್ಯಾರಿಗೆ ಕೊಟ್ಟಿದ್ದಾರೆ ಅಂದರೆ ಅಲಾಟ್‌ಮೆಂಟ್ ಮಾಡಿದ್ದಾರೆ ಎಂಬುದಕ್ಕೆ ಯಾವುದಕ್ಕೂ ಕೂಡ ಅವರಲ್ಲಿ ಸೂಕ್ತ ರೆಕಾರ್ಡ್ಸ್‌ನ್ನು ಇಟ್ಟುಕೊಂಡಿಲ್ಲ. ಅವರಲ್ಲಿ ಯಾವ ಲೆಕ್ಕಪತ್ರಗಳೂ ಇಲ್ಲ. ರಿಜಿಸ್ಟರೂ ಇಲ್ಲ. ಆದ್ದರಿಂದ ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಹೇಳುತ್ತಿದ್ದೇನೆ. ಈಗ ಈ ಹೌಸಿಂಗ್ ಬೋರ್ಡ್‌ನಲ್ಲಿರತಕ್ಕ ಅವ್ಯವಸ್ಥೆಯನ್ನು ಮೊದಲು ಸರಿಪಡಿಸಬೇಕು. ನಮ್ಮ ಮಾನ್ಯ ಮಂತ್ರಿಯವರು ಬಹಳ ಸಾಹಸಿಗಳಾಗಿದ್ದಾರೆ, ದೊಡ್ಡ ಉತ್ಸಾಹಿಗಳಾಗಿದ್ದಾರೆ, ಅವರು ಇದರ ಬಗ್ಗೆ ಗಮನಹರಿಸಿ ಇದನ್ನೆಲ್ಲಾ ಪರಿಶೀಲಿಸಬೇಕು. ನಿಮಗೆ ಯಾವ ಸಹಾಯ ಬೇಕೋ ಅದನ್ನು ತೆಗೆದುಕೊಳ್ಳಿ. ಈ ರೀತಿ ಮಾಡಿದಗೆ ಮಾತ್ರ ಸಾರ್ವಜನಿಕ ಸ್ವತ್ತನ್ನು ಸಾರ್ವಜನಿಕ ಆಸ್ತಿಯನ್ನು ತಾವು ಕಾಪಾಡುವುದಕ್ಕೆ ಸಾಧ್ಯ. ಇಲ್ಲದೇ ಹೋದರೆ ಈಗಿರತಕ್ಕ ಅವ್ಯವಸ್ಥೆಯೇ ಮುಂದುವರಿಯುತ್ತಾ ಹೋದರೆ ಈ ಹೌಸಿಂಗ್ ಬೋರ್ಡ್‌ನ ಮೇಲೆ ನಿಮಗೆ ಯಾವ ರೀತಿಯಲ್ಲೂ ಹತೋಟಿಯೇ ಇರುವುದಿಲ್ಲ. ಆದ್ದರಿಂದ, ತಾವು ತಕ್ಷಣ ಇದರ ಬಗ್ಗೆ ತೀವ್ರ ಗಮನಹರಿಸಿ ತಕ್ಷಣ ಪ್ರತಿಯೊಂದು ವಿಚಾರಕ್ಕೂ ಸಂಬಂಧಪಟ್ಟಂತೆ ರಿಜಿಸ್ಟರ್‌ಗಳನ್ನು ಓಪನ್ ಮಾಡಿಸಬೇಕು.

ಮಾನ್ಯ ಅಧ್ಯಕ್ಷರೆ, ಇನ್ನು ನಾನು ಪುರಸಭೆಗಳ ವಿಚಾರಕ್ಕೆ ಬರುತ್ತೇನೆ. ನಮ್ಮ ರಾಜ್ಯದಲ್ಲಿ ೬ ಮಹಾ ನಗರಪಾಲಿಕೆಗಳಿವೆ. ೨೧ ನಗರಸಭೆಗಳಿವೆ, ೧೯೭ ಮುನಿಸಿಪಾಲಿಟಿಗಳಿವೆ. ಈ ಪ್ರದೇಶಗಳ ವ್ಯಾಪ್ತಿಯಲ್ಲಿ ವಾಸಮಾಡುತ್ತಿರುವ ಜನರಿಗೆ ಯಾವ ಯಾವ ಸೌಲಭ್ಯಗಳನ್ನು ಒದಗಿಸಬೇಕೆಂಬುದಕ್ಕೆ ಯಾವುದೇ ರೀತಿಯ ನಿರ್ದೇಶನವಾಗಲಿ, ಅಥವಾ ಹಣವಾಗಲಿ ಇಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಈ ಸಂದರ್ಭದಲ್ಲಿ ಆಕ್ಟ್ರಾಯ್ ಬಗ್ಗೆ ಒಂದು ಮಾತನ್ನು ಹೇಳುವುದಾದರೆ ಸ್ಥಳೀಯ ಸಂಸ್ಥೆಗಳಿಗೆ ಆಕ್ಟ್ರಾಯ್ ಬಾಬಿನಿಂದ ಬರುತ್ತಿದ್ದ

ಪರವಾನವನ್ನು ನಾವು ರದ್ದು ಮಾಡಿದ್ದೇವೆ. ಇವೊತ್ತು ಸುಮಾರು ೬೭ ಕೋಟಿ ರೂಪಾಯಿಂಗಳಷ್ಟು ಹಣವನ್ನು ಅಕ್ವೈಯರ್ ಪದ್ಧತಿಯ ಬಗ್ಗೆ ಕೊಟ್ಟಿದ್ದೇವೆ. ಸ್ವಾಮಿ, ನಾನು ತಮಗೆ ಹೇಳುತ್ತೇನೆ.

ಈ ಹಣವನ್ನು ಕೊಡಬೇಕಾದರೆ ಒಂದು, ಎರಡು, ಮೂರು ಇನ್‌ಸ್ಟಾಲ್‌ಮೆಂಟ್‌ಸ ಪ್ರಕಾರ ಕೊಡುತ್ತಾ ಬಂದಿದ್ದೀರಿ. ಆದರೆ ಒಂದೇ ಇನ್‌ಸ್ಟಾಲ್‌ಮೆಂಟ್‌ನ್ನು ಮಾತ್ರ ಇದುವರೆಗೂ ನೀವು ಕೊಟ್ಟೇ ಇಲ್ಲ. ಇದುವರೆಗೆ ನೀವು ಕೊಟ್ಟಿರತಕ್ಕ ಈ ಹಣದಿಂದ ಏನಾದರೂ ಉಪಯೋಗವಾಗಿದೆಯೋ ಎಂಬುದನ್ನು ತಾವು ನೋಡಬೇಕು. ನನ್ನ ಸ್ಪಷ್ಟವಾದ ಅಭಿಪ್ರಾಯದಲ್ಲಿ ಹೇಳುವುದಾದರೆ, ಈ ಅಕ್ವೈಯರ್ ಪದ್ಧತಿಯನ್ನು ತಾವು ಪುನಃ ಜಾರಿಗೆ ತರಬೇಕು. ಈ ವಿಚಾರವನ್ನು ತಾವು ಕೂಲಂಕಷವಾಗಿ ಪರಿಶೀಲಿಸಬೇಕು. ಈ ಅಕ್ವೈಯರ್ ಪದ್ಧತಿಯನ್ನು ಪುನಃ ಜಾರಿಗೆ ತರುವುದಕ್ಕಾಗುವುದಿಲ್ಲವೆಂದು ಹಿಂದೆ ಒಂದು ಸಾರಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದರು. ಈಗ ನಮ್ಮಲ್ಲಿ ೫೦ ಕೋಟಿ ರೂಪಾಯಿಗಳಿದ್ದರೆ ಅದೇ ಹಣವನ್ನು ನಾವು ಬೇರೆ ಬೇರೆ ಯೋಜನೆಗಳಿಗೆ ಉಪಯೋಗಿಸಬಹುದು. ಸಾರ್ವಜನಿಕರು ಕೊಡತಕ್ಕ ಹಣವನ್ನು ನೀವು ಕೊಡಬೇಡಿ ಎಂದು ಹೇಳುವುದು ಸರಿಯಲ್ಲ. ಏಕೆಂದರೆ ಯಾರೋ ಕೆಲವರಿಂದ ದೂರುಗಳು ಬಂದಿತೆಂದು ಅದನ್ನು ನೀವು ನಿಲ್ಲಿಸಿದ್ದೀರಿ. ಇದು ಕೇಂದ್ರ ಸರ್ಕಾರದ ಪಾಲಿಸಿ ಇರಬಹುದು, ನಮ್ಮ ರಾಜ್ಯ ಸರ್ಕಾರದ ಪಾಲಿಸಿ ಇರಬಹುದು. ಇದು ಯಾವ ಸರ್ಕಾರದ ಪಾಲಿಸಿಯೋ ಇರಲಿ. ಈಗ ಇದನ್ನು ಕೂಲಂಕಷವಾಗಿ ಪರಿಶೀಲಿಸಿ ಪುನಃ ಅಕ್ವೈಯರ್ ಪದ್ಧತಿಯನ್ನು ಜಾರಿಗೆ ತರುವುದಕ್ಕೆ ಕೃಪೆ ಕೈಗೊಳ್ಳಬೇಕು.

ಮಾನ್ಯ ಅಧ್ಯಕ್ಷರೆ, ಇನ್ನು ಕೊನೆಯದಾಗಿ ನಾನು ಬಿ.ಡಿ.ಎ. ವಿಚಾರದಲ್ಲಿ ಹೇಳುವುದಾದರೆ, ಇಲ್ಲಿರತಕ್ಕ ಛೇರ್ಮನ್‌ಗಳು ಸರ್ವಾಧಿಕಾರಿಗಳು. ನಾನು ಮಂತ್ರಿಯಾಗಿದ್ದಾಗ ಅಲ್ಲಿರತಕ್ಕ ಕಮಿಷನರ್‌ರವರಿಗೆ ಸರ್ವಾಧಿಕಾರವನ್ನು ಕೊಟ್ಟಿದ್ದೆ. ನಂತರ ಅದರ ಪರಿಣಾಮವನ್ನು ಗಮನಿಸಿ ಅದಕ್ಕೆ ಅಮೆಂಡ್‌ಮೆಂಟನ್ನು ತಂದು ಕ್ಯಾನ್ಸಲ್ ಮಾಡಿದೆ. ಅವರಿಗೆ ಅಧಿಕಾರವನ್ನು ಕೊಟ್ಟ ಕೂಡಲೇ ಅವರು ತಮ್ಮ ತಲೆಯನ್ನೇ ಕೆಡಿಸಿಕೊಳ್ಳುತ್ತಾರೆ. ಅದೇ ರೀತಿ ಛೇರ್ಮನ್‌ಗಳೂ ಅಷ್ಟೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಈಗಿರತಕ್ಕ ಬಿ.ಡಿ.ಎ. ಛೇರ್ಮನ್‌ರವರಿಗೆ ನಾನು ಟೆಲಿಫೋನ್ ಮಾಡಿ ನಾನು ನಿಮ್ಮ ಜೊತೆ ಮಾತನಾಡಬೇಕಾಗಿದೆ, ನನಗೆ ಒಂದು ಇಂಟರ್‌ವ್ಯೂ ಕೊಡಿ ಎಂದು ತಿಳಿಸಿದೆ. ಆದರೆ ಆ ಛೇರ್ಮನ್‌ರವರು ಇವತ್ತಿನವರೆಗೂ ಇಂಥ ದಿವಸ ನೀವು ಬಂದು ನೋಡಬಹುದೆಂದು ಒಂದು ಜವಾಬನ್ನು ಕೊಟ್ಟಿಲ್ಲ.

ಅವರಿಗೆ ಫಾರಿನ್‌ಗೆ ಹೋಗಲಿಕ್ಕೆ ಅವಕಾಶವಿದೆ. ಅವರಿಗೆ ಇಂಗ್ಲೇಂಡ್‌ಗೆ ಹೋಗಲಿಕ್ಕೆ ಅವಕಾಶವಿದೆ. ಬಿ.ಡಿ.ಎ. ಕೆಲಸ ಮಾಡಲಿಕ್ಕೆ ಅಧ್ಯಕ್ಷರಿಗೆ ಅಲ್ಲಿ ಹೋಗಿ ಹಣವನ್ನು ಖರ್ಚುಮಾಡುವ ಉದ್ದೇಶವೇನು ಇದೆ, ಅವರು ಮಾಡತಕ್ಕಂಥ ಕೆಲಸ ಏನು ? ಯಾರು ಯಾರಿಗೆ ಸೈಟುಗಳನ್ನು ಕೊಡುವುದು ಅವರ ಉದ್ದೇಶವೇ ? ಇವತ್ತಿನ ದಿವಸ ಸಾವಿರಾರು ಎಕರೆ ಜಮೀನನ್ನು ಅಕ್ವಯರ್ ಮಾಡಿ ಸೈಟುಗಳನ್ನಾಗಿ ಮಾಡಿ ಹಂಚುತ್ತೇವೆಂದು ನೋಟಿಫೈ ಮಾಡಿದ್ದಾರೆ. ಸೈಟುಗಳನ್ನು ಮಾಡಿ ಕೊಡಬೇಕು ನಿಜ. ಕನ್ನಡ ನಾಡಿನವರಿಗೆ ಕೊಡಬೇಕು.

ಶ್ರೀ ಎಂ. ಚಂದ್ರಶೇಖರ್.—ಈ ಖಾತೆ ಮಾನ್ಯ ಸಚಿವರಾದ ಎಂ. ಪಿ. ಪ್ರಕಾಶ್‌ರವರಿಗೆ ಸಂಬಂಧಪಟ್ಟಿದ್ದು, ಡಿಮ್ಯಾಂಡ್ ೩೯ರಲ್ಲಿ ಬರುತ್ತದೆ. ಅದರ ಬಗ್ಗೆ ಮಾತನಾಡುವಾಗ ತಾವು ಮಾತನಾಡಿ.

ಶ್ರೀ ಬಿ. ಬಸವಲಿಂಗಪ್ಪ.—ಆಯಿತು ಆ ಸಮಯದಲ್ಲಿಯೇ ಮಾತನಾಡುತ್ತೇನೆ. ಈಗ ಮುನಿಸಿಪಲ್ ವ್ಯವಸ್ಥೆಯನ್ನು ತೆಗೆದುಕೊಂಡರೆ ಅಲ್ಲಿಯೂ ಕೂಡ ೧೮ ಪರ್ಸೆಂಟ್ ಷೆಡ್ಯೂಲ್ ಕ್ಯಾಸ್ಟ್‌ನವರಿಗೆ ಕೊಡಬೇಕೆಂದು ಏನು ಹಣವನ್ನು ಇಟ್ಟಿರುತ್ತೀರಿ ಅದನ್ನು ಸರಿಯಾಗಿ ಉಪಯೋಗಿಸಿಕೊಳ್ಳಬೇಕು. ಸರಿಯಾಗಿ ಎಂದರೆ ಜನಾಂಗಕ್ಕೆ ಉಪಯೋಗಿಸಬೇಕು ಎನ್ನುವ ಬಗ್ಗೆ ಕೆಲವು ವಿಷಯಗಳನ್ನು ಬರೆದಿದ್ದೀರಿ. ಕೆಲವರು ಆ ಜನಗಳಿಗೋಸ್ಕರವಾಗಿ ೧೮ ಪರ್ಸೆಂಟ್ ಖರ್ಚುಮಾಡಿಲ್ಲ ಸಾರ್ವಜನಿಕ ಅಭಿವೃದ್ಧಿಗೋಸ್ಕರ ಬಹುಭಾಗ ಹಣವನ್ನು ಖರ್ಚುಮಾಡಿದ್ದೀರಿ. ನಗರ ಜಿಲ್ಲೆಗಳಲ್ಲಿ ಎಂ.ಎಲ್.ಎ.ಗಳು ಇರುತ್ತಾರೆ. ಅಂಥವರ ಒಂದು ಸಮಿತಿಯನ್ನು ಮಾಡಿ, ಅವರ ಸಲಹೆಯನ್ನು ತೆಗೆದುಕೊಂಡು, ಯಾವ ಕೆಲಸಕ್ಕಾಗಿ ೧೮ ಪರ್ಸೆಂಟ್ ಖರ್ಚುಮಾಡಬೇಕೆಂದು ಇರುತ್ತದೋ ಅದರ ಪ್ರಕಾರವಾಗಿ ನಿರ್ಣಯ ತೆಗೆದುಕೊಂಡು ಕಾರ್ಪೊರೇಷನ್‌ಗಳು ಖರ್ಚನ್ನು ಮಾಡುವ ಪ್ರಯತ್ನವನ್ನು ಮಾಡಬೇಕೆಂದು ನಾನು ತಮಗೆ ಸಲಹೆ ಮಾಡುತ್ತಿದ್ದೇನೆ.

ಇನ್ನು ಹಲವಾರು ವಿಷಯಗಳು ಇತ್ತು. ಇವೆಲ್ಲವನ್ನು ನುಡಿಸಲಿಕ್ಕೆ ಹೋಗುವುದಿಲ್ಲ ಟೈಮ್ ಆಯಿತು. ಒಂದು ವಿಚಾರವನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಮುನಿಸಿಪಾಲಿಟಿಗಳ ಬಗ್ಗೆ ಮತ್ತು ಪಿ.ಡಬ್ಲ್ಯೂ.ಡಿ. ಡಿಪಾರ್ಟ್‌ಮೆಂಟ್ ಬಗ್ಗೆ ಏನೇನು ಟೀಕೆಗಳನ್ನು ಮಾಡಿದ್ದೇವೆ ಅವೆಲ್ಲವೂ ವಾಸ್ತವವಾಗಿರುವ ಟೀಕೆಗಳಾಗಿವೆ. ಸರ್ಕಾರ ಅವುಗಳ ಬಗ್ಗೆ ಗಮನವನ್ನು ಕೊಟ್ಟು ಜಾರಿಗೆ ತರಬೇಕು, ಎಲ್ಲೆಲ್ಲಿ ಪ್ರಯತ್ನ ಮಾಡಿ ಸರಿಯಾಗಿ ಮಾಡಿದ್ದೀರಿ ಅವುಗಳ ಬಗ್ಗೆ ನಮ್ಮ ಟೀಕೆ ಏನೂ ಇಲ್ಲ ಸರಿಯಿಲ್ಲದ ಕಡೆ, ಸಮರ್ಪಕವಾಗಿಲ್ಲದ ಕಡೆ ನಾವು ಟೀಕೆಮಾಡಿದ್ದೇವೆ ಅದನ್ನು ಸರಿಮಾಡಿ ಎಂದು ಹೇಳಿ ನಾನು ಈ ಬಜೆಟ್‌ನ್ನು ವಿರೋಧಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI J. A. FERNANDEZ (Nominated).—Mr. Speaker Sir, in endorsing the Government's sanction for the various demands, one cannot help but remark that it is a quite comprehensive subject and the time at our disposal is very limited both for study as well as to speak and it is very difficuit to do justice to the demands. Never the less, we will take up the development of Bangalore City. There has been so much talk about the Bangalore. Metropolitan Development Authority and the establishment of Truck Terminal If one goes through the city today, one cannot help feeling that this particular division of Government wing is not doing its job because there is no street in Bangalore, which is not free of the menace of heavy goods vehicle and the accident rate in Bangalore go on increasing. If it has been kept in a low level it is only because of Providence. To-day every road is having all types of vehicles and heavy goods vehicles which run through the city at all times of the day, pose considerable danger to the life of the citizens of the City. I do not know when it will be possible to ensure that goods vehicles are not allowed into the city under any circumstances. But at least for the time being they should not be allowed during the peak hours, from 8 in the moring to 12 noon and again from 4 to 8 in the evening. Otherwise the citizens of Bangalore are exposed to unnecessary dangers on the road. There has been tremendous talk of ring roads ring railway, Rapid Transport System and other such facilities. But when these will see the light of the day will depend largely on the manner in which the subject are tackled by the powers that be. Planning is a very essential part of that particular exercise but we are not very happy because there seems to be very little planning that is going on at the moment.

We hear of the green belt but from our experience we find green belt keeps shifting. If the green belt is to be successful, it should be capable of sucking out of the city a tremendous amount of the population that has gathered here, which congests the city to the extent that it is impossible to cater to and understand how the services can keep up with this population growth.

In London the Green Belt has succeeded in decongesting the city. But, in Bangalore we still have to have evidence of such an

exercise being really fruitful. The idea of having a green belt is to be able to take out the wealthier people from the city and move them say 10 or 15 Kms. out and in between to have what is known as the green belt which will help to provide some type of services and infra-structural facilities to those people who are removed out of the city so that they heed only come to the city for their work. They should live outside and only commute to and from the city, To-day the haphazard growth and development of Bangalore makes the people stay in the city, work in the city and congest the city further as the purpose of the green belt is hardly being served. As a mattar of fact, there is no green belt to-day. The physical segregation must come between the Low Income Groups and the High Income Groups. It is necessary that the Low Income Group should be in the city. They have to work here. But, the High Income Group can afford to remain out of the city. There should be some consideration shown for the Low Income Group to be able to live a little more peacefully and happily in Bangalore. This brings us the need to have a better zoning system here in the first place. In we look at the Cubbon Park, it does provide a little bit of our idea of the green belt, let us say, for those living in Indira Nagar. They have to come to the city for work. They go bock again and from Brigade Road ouwards they have infrastructural facilities to be able to live peacefully with all daily requirements in Indira Nagara. This is the sort of a small example of what the green belt should be and the Government must be serious in implementing this green belt concept.

We also have talk of arterial high speed roads and mass transport system. Now, in Bombay, I think, to some extent they have been able to solve problems which are at the moment, much more complicated in Bangalore. We do not have the eletric train service to cater to sub-urban traffic. Therefore, our sub-urbs are not developed. We do not have a mass transport system as they have in Bombay and to some extent in Calutta which is just coming up. We have, therefore, to think in terms of combining our electricity service and the Bangalore transport service to form a type of organisation on the parallel line of the BEST in Bombay to be able to solve to some extent the problems of transit and commuting.

We also have a tremendous traffic problem in Bangalore I think our environment is not sufficienty vocal enough to be able to insist upon a greater attention being paid to keeping Bangalore clean and free of pollustion. When we come from Mysore, for instance we have to close our nostrils because of the bad smell, that greets us as we enter. Bangalore which is supposed to be the jewel of Karnataka in many ways is now becoming the garbage city. A garden city is being

converted into a garbage city. Everyday one finds that the corporations job is not being properly done. I do not know what the Corporation is doing, and what the corporation's officials are doing. Building laws are being flouted with impunity. There is practically no parking space provided for multi-storeyed buildings. High rise buildings have sprung up in Bangalore in a haphazard fashion. It is mentioned very clearly on the board outside the high rise buildings that 'Visitor's vehicles not allowed which means these builders are using the Bangalore roads already congested on the one hand to park the vehicles of visitors who come to high rise buildings on the other. How can such a situation be allowed to develop and that too under the very nose of the corporation officials and corporators ? Have not they get a sense of responsiblity and duty to the Government and to the people ? This type of haphazard building growth should be nipped in the bud immediately and no further high rise building should be permitted without proper study of the situation as it is.

I think we should involve the Police officials also in the planning and licensing of such buildings. In many ways we find the police are helpless to control the traffic and to be able to stop this ugly growth of the city. If you look at the congestion on the signal points one can understand the difficulties that the police are facing to be able to control the traffic in Bangalore. To-day Bangalore needs not only fly-overs and under-bridges to clear the traffic, but also needs to expedite and speed up the projects that have already been undertaken. The Miller's Road under-bridge, still after 5 years, has not been completed for 5 years the citizens of that particular area have had to undergo untold difficulties. Similarly in the areas like Chickpet, Richmond Circle and other points of the city, unless fly-overs are provided or under ground systems introduced, it will be impossible to cope with the problems of Bangalore Recently, there was an article in the Deccan Hearld with photograph which shows a shopping complex with its parking areas also converted into shops. I am told that these offences are compoundable. Such compundable offences should not be compoundable any more. Deterrent punishment should be meted out to these people which have flouted the law. That is why, I think, where provision for parking space has to be made. police authorities shall also be consulted before licences are given and qualified engineers should help the traffic engineering cells of the various bodies that are concerned with these buildings. In some countries, I am personally aware that high-rise buildings have built-in facilities not only for parking, but also for shopping, and recreation facilities, etc. These are totaly excluded from the high-rise

buildings coming up in Bangalore, and greater pressure is there for placed on the existing over-loaded services that we have.

When we come to the Housing Board and the BDA, I find that both of them are building houses under various categories and possibly onelapping each other. Similarly the Slum Clearance Board is catering to the economically weaker sections. Each of them are autonmous on their own rights. Perhaps the Slum Clearance Board will confine itself to building of economically weaker section houses and provide necessary amenities in those areas. But, in the process as slums keep developing in Bangalore, they are being removed out of the city to the periphery, there are other areas contiguous to these newly developed slum areas which are not provided with the corporation facilities. Again, some pay tax to the corporation, but do not get the civic amenities that go with the corporation tax. Here again a great deal of planning is required.

೧೨-೦೦ ಮಧ್ಯಾಹ್ನ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ದೇವೇಗೌಡರು ಅವರನ್ನೆಲ್ಲಾ ಹೊರಗಡೆ ಕರೆದುಕೊಂಡು ಹೋದರೆ ಸರಿ ಹೋಗುತ್ತದೆ. ಒಂದೇ ಕಡೆ ಸಿಗ್ನೇಚರ್ ಮಾಡಿರುವುದಕ್ಕಿಂತ ಹೊರಗಡೆ ಹೋಗಿ ಮಾಡಿಸಿದರೆ ಚೆನ್ನಾಗಿರುತ್ತದೆ. ಕನ್‌ಸಲ್ಟೇಷನ್ ಕೂಡ ಒಳಗಡೆಗಿಂತ ಹೊರಗಡೆ ಚೆನ್ನಾಗಿರುತ್ತದೆ.

ಶ್ರೀ ಜಿ. ಎಸ್. ಬಾಗಲಕೋಟ್.—ಅದು ಸ್ಪೀಟ್ ಅಲಾಟ್‌ಮೆಂಟ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ಪೀಟ್ ಅಲಾಟ್‌ಮೆಂಟ್ ಆದರೂ ಕೂಡ ಅದನ್ನೂ ಸಹ ಹೊರಗಡೆ ಮಾಡಿಕೊಂಡರೆ ಒಳ್ಳೆಯದು.

ಶ್ರೀ ಪಂಪಾಪತಿ.—ಡಿಮಾಂಡ್ ಮೇಲೆ ಮಾತನಾಡುವುದಕ್ಕೆ ಪಾರ್ಟಿ ಪ್ರಕಾರ ಅವಕಾಶ ಮಾಡಿಕೊಡಬೇಕಾಗುತ್ತದೆ. ನಮ್ಮನ್ನು ಕರೆಯುತ್ತೀರೆಂದು ಕಾಳಿತುಕೊಂಡಿದ್ದೇವೆ. ನಮ್ಮ ಕಡೆಯಲ್ಲಿ ಕರೆಯುವುದಾದರೆ ನಮ್ಮ ಪಾರ್ಟಿಗೆ ಅಗೌರವ ಮಾಡಿದ ಹಾಗೆ ಆಗುತ್ತದೆ.

ಉಪಾಧ್ಯಕ್ಷರು.—ಆಯಿತು ತಾವು ಕುಳಿತುಕೊಳ್ಳಿ

SRI J. A. FERNANDEZ.—Mr, Speaker Sir. the Karnataka Housing Board is a autonomous body yet its functions are considerably hampered by interference from the Government inman ymany aspectsin its operations-for instance, in the planning of its housing colonies, there are guidelines which are set out by them yet at every stage they have to consult and get the approval from the department concerned or the general planning department, from the Water supply division or the Sewerage Board, KEB etc Similarly, when the Houses are completed, water and sewarge connection are not provided for example in Bijapur nearly 800 houses have been completed over a year back but still they are yet to get the civic amenities in the colony. I would like to suggest that the representatives from other service should also be included on the Housing Board so that

when the Hovses are completed necessary civic facilities can be given to the Houses that are completed and allotted to the applicants for whom they were built and free them paying unnecessary interest. The point here is, why should the situation be allowed to continue if the Housing Board is to be autonomous and independent body in its operations. It should be given full freedom and held responsible for its mistakes. Let there be a kind of management by objectives introduced into the autonomous bodies not only for the Housing Board but other bodies like Slum Clearance Board and others. I said earlier we need to lay greater emphasis on the planning aspects and particularly with reference to Bangalore Development Authority and the Housing Board.

I would also like to stress one little aspect on the discretionary allocations that are being made by the Housing Board I believe there is a provision for 20% discretionary quota in the Housing Board and 5% in BDA. I think we should remove this discretionary allotment from the Members of the Board as it could be mistaken for corrupt practices. The guidelines as

(Mr. Speaker in the Chair)

are laid down for the distribution of Houses and house sits should be followed scruplously. I would therefore suggest the discretionary allo ment should be made by the Cabinet and thereby remove the doubts from the minds of the people that there is corrupt practice in the matter of allotment of discreticnary quota by various Boards.

Sir, it is interesting to note the Karnataka Water Supply and Sewerage Board have submitted their accounts and Audit Report but no effort has been made by the Chairman or the Commissioner concerned to review or to answer these audit paras. This report therefore is incompete and it not really helpful to us. is We don't know what co rective steps have been taken to answer the audit paras concerned. I therefore urge upon the Government to give us the comp ete info mation so that we would also get to know what is happening in these Boards We are also anxiousto know what steps are being tak n to reduce the mosquito menace it. Bangalore ime has come for this is to be tackled very seriously because everywhere we f nd new ext nsions are com ng up, but nobody seems to have taken any measure to prevent mosquito menace.

Then, Sir. Bangalore is now in the International Map but still there is no move on the part of the Government to have an International Airport in Bangalore. I think our Members of Parliment as well as the Government should take up this matter very seri usly and urge upon the Government of India to sanction the International Airport at Bangalore. When a small State like

Kerala Trivandrum can have an International Airport at Trivandrum why not we ? What is wrong in that. We should have a International Airport considering the traffic potential that is being carried out presently in Bangalore City Airport. I think an International Airport must be provided to Bangalore without much delay and possibly in the current plan itself.

Well, with these few words I conclude and thank the Chair for the time given to me.

SMT MUKTHARUNNISA (Narasimharaja).—Mr. Speaker, Sir. in the report of the Department of Housing and Urban Development for the year 1987-88 at page 17, it is mentioned that the Bangalore City Corporation had supplied textbooks and notebook materials to SC/ST students. This is a very good programme. I request the Government that this scheme should be extended in all the Corporations like Mysore, Hubli. Mangalore etc., why this is implemented only in Bangalore City Corporation? Why not this scheme be made applicable in all the Corporations of the State so that thestudentsare benefitted.

Secondly, regarding Octroi. At page 11. it is mentioned that Octroi will be abolished with effect from 1st of April 1979 and the Goverment will sanction grants to the Corporations. Since, 1979, they have not received Octroi compensation to Mysore Corporation. On account of non-payment of compensation all important works like roads, drainage, market complex, drinking water etc., are not taken up. When we write to the concerned Minister, they promise they will release the amount shortly. In fact, we have also met the Hon'ble Chief Minister in this regard and the Hon'ble Chief Minister promised that 50% of Octroi compensation to Mysore City will be released shortly. That is about 52 lakhs rupees but unfortunately, it is a surprise to note that only 8 lakhs rupees is sanctioned uptill now. Out of 1.4 crores it is only 8 lakhs just sanctioned but that too it is not released. Now, 50 lakhs worth of bills of contractors are pending. 20 lakhs for Karnataka Underground Drainage and Water Supply and Sewerage Board. Then. about 30 lakhs for the contractors who have taken to repair the roads about 30 kms. The Contractors are walking every day to the Corporation to see whether the bills are settled and awaiting sanction but to their dismay no money is available with the Corporation. Their complaint is that they had to pay interest to the banks to the amounts they have spent on various works. This is the position that is prevailing in Mysore City. Recently, there was a short of threatening call from the KUWSSB that water supply will be stoped to the Mysore City if its dues are not cleared by the Mysore City Corporation. Then, the

Corporation has paid about 14 lakhs to the KUWSSB. This money they have not taken up for the implementation of the water supply scheme but they had taken that money for the maintenance of drinking water in Mysore. Sir, I am sorry to say that though the Cauvery river is close by Mysore the people of Mysore are facing acute water shortage and problem is yet to be solved.

Sir, secondly, it is mentioned at page 23, Corporation of the City of Mysore propose to construct Mayura Shoping Complex. This was announced 2 years back and the foundation stone was laid by the then President of India Sri Zail Singh. But unfortunately, uptill now they have not taken up this work. I would like to ask whether it was only proposition to take up the work or whether the Government would complete the work honestly because it is mentioned here so many lakhs of rupees will be spent to build such a complex. Another thing, it is surprise to note that a complex in Subbarayanakere would be taken up. I would like to ask the concerned Minister whether the Government have received any proposal from the Mysore City Corporation and because you have mentioned here that 715 lakhs has been spent. When you have not received the proposal from the Mysore City Corporation how can you mention that you have spent the money when there is no proposal. I fail to understand this. We don't have the clear picture as to what is going on. Similarly. about the Housing Board. We don't know how many Houses have been constructed, how many they are going to construct etc.. I therefore, urge upon the concerned Minister to give us the details of works and houses taken up by various authorities to the MLAS, especially concerned area MLAS. Further I would also like the Government to put the concerned MLA as the Member of the Board of the Department concerned so that we can have full idea about the activities that are taken place by the different Boards and Corporations. I have spoken about the Mayura complex and Subbarayanakere complex. Though the tenders have been accepted till now work has not been started.

There is another thing. The Corporation has granted 392 EWS Houses, 1?2 LIG Houses, 281 BIG Houses, 29 MIL. Most of them are half constructed due to lack of financial assistance from the Government. So people applied for the allotment of Houses, as they are facing hardship due to delay in handing them the houses. Some of them wanted to take back the money. So, I request the Government to see that amounts due to the Corporation particularly the Octroi compensation should be released immediately.

Sir, I will come to the City Improvement Trust Board. In the last Assembly I congratulated the Government for having taken up

a scheme called 'Asha Mandir' in Mysore to mark International Housing for Shelter. I requested the Government to give approval for the Asha Mandir scheme. For that scheme nearly 45,000 applications were received and we were happy to note that the public response was very good. The Chairman, CITB, said after the scrutiny the number has been reduced to 35,000 and sanction has been given. In this connection I would like to state one thing. When such a scheme is taken first thing is you must form a lay-out, then you should take up road works, electricity and water facilities. After completing all these things you should distribute the sites to the persons.

12-30 P. M.

Unforunately, they have occpied some villages nearby Mysore for Ashamandir scheme. Any way, needy persons will be happy to get sites anywhere. The authorities say that they have received 55 000 applications and they have collected the deposit money. They have not done underground drainage works water supply works etc., Therefore I am of the opinion that we are creating slums, instead of creating houses. After three years areas without basic amenities, will become slums. I would like to ask the Minister as to what measures he has taken to form lay-out under the Ashamandira Scheme I can proudly say that the State Government has received 18 crores from the Central Government through HUDCO under the Ashamandira scheme exclusively for Mysore city, out of which they have constructed only 6 500 houses. Itis mentioned in the Annual Report of the Department in page 33 that with the assistance of HUDCO 6,500 houses are being constructed in various lay-outs. I would request the Hon'ble Minister to enlighten me as to whether the construction work has started. Becaus , though my constituency is Mysore, I myself don't know where it is constructed and nobody knows about it. That is why I have stated that we should b the Member of the Depart ment to know about these things. I would also like to state that the Chairman who started the work of constructing the houses is being dismissed now As such the newincumbent should complete the work. But no M.L A. or nobody knows as to what is happening in Mysore trust Board and nobody knows nothing about it. Now with the dismissal of the Chairman, what happens to those 35,000 applicants who have been sanctioned houses? Those people are in real trouble and they are doubtful as to whether they would get the houses at all Further the deposit money has not been refunded to 10,000 applicants, whose applications have been rejected. People are moving here and there in the Trust Board to

get the refund. But money has not been refunded to them. Some applicants have paid Rs. 500 and some have paid Rs. 2000 according to the income groups. What happened to their Deposit money? The 35,000 applicants who have received an allotment letter, have not been given possession at all, since lay-outs have not been formed. I would urge the Hon'ble Minister to take immediate steps in this regard to refund the money to the rejected applicants and also to take steps to form lay-outs and give possession to the successful applicants. nother point I would like to ask the Hon'ble Minister is that what happened to 24 un-authorised lay-outs which wer demolished in 1985 by bringing buldozars? At that time Hon'ble Chief Minister promised to regularise these un- authorised lay-outs. But till now, these lay-outs have not been regularised. on account of which there is no water supply, no supply of power and there is no sanitation People are residing here since more than 15 years and you have not regularised these lay-outs till now. I would request the Hon'ble Minister to take immediate action in this regard.

Sir, while going through the Annual Report it is mentioned about free sites to the siteless people. I would like to ask the Hon'ble Minister as to how many persons are benefitted under this scheme? I have not heard anything about free sites to siteless people since the last three to four years. Please furnish as to how many persons have been given free sites in Mysore City? As I have already stated, the Mysore Trust Board is areating slums after three years, because there is no drainage, no water supply and no sanitation facilities. It is not in accordance with the rules. I would suggest that you should got the advise of a Senior Engineer and then form lay-outs and distribute the sites.

Today some groups of the members were sitting and discussing about the distribution of sites to the Legislators and they were collecting the signatures. Is it a fac? How many legislators have been given sistes or houses? I request the Government to furnish this information I learn that no legislator has received any site for the construction of house in Bangalore. Therefore, I once again request that the information as to how many legislators have been given sites many be placed before the Houce. Out of 21,934 sites created by C,I T.B, Mysore, 16.598 sites are distributed, but lay-outs are not formed. They have given the figures relating to number of sites distributed excluding Asha-Mandira. Whether they have formed lay-outs, I don't know. They have simply said that 16,598 sites have been distributed. I would like to know whether action has been taken to form lay-outs,

formation of roads providing water supply, drainage facilities etc.,

Sir, in Mysore, there are 21 unauthorised lay outs. The life of the poor people living in these layouts is miserable. During summer, they are facing with drinking water problem. You are not fixing pipes and giving them water connection because they are unauthorised lay outs. You are telling that you cannot provide them water supply and other facilities according to rules. We have to consider the problems of these poor people seriously. I request the Government to immediately take action to provide drinking water supply and to take up underground drainage works etc., in these layouts. Sir, in and around Mysore, there are no street lights. I request the Hon'ble Minister to see that street lights are provided immediately. It should not be vertical growth like slums. They should take up maetlling works.

Before conclding my speech, I would like to say some thing which is not connected with these demands. I convey my hearty greetings to all the Members & people of Karnataka on the eve of Ramzan. Every year, for Ramzan feast, they used to issue 2-3 Kgs of sugar extra to celebrate it. But this year, uptill now, they have not issued extra quota of sugar for Ramzan eve. I request the concerned Minister to immediately issue orders to give extra sugar to poor people to celebrate Ramzan festival. I once again convey my hearty greetings to all the people. With these words, I thank you very much for giving me this opportunity to speak and conclude.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಾನ್ಯ ಅಧ್ಯಕ್ಷರೇ ನಾನು ಮಾತನಾಡುವುದಿಲ್ಲ.

ಶ್ರೀ ಪಂಪಾಪತಿ.—ಸನ್ಮಾನ್ಯ ಅಧ್ಯಕ್ಷರೇ ಈ ದಿವಸ ಲೋಕೋಪಯೋಗಿ, ನಗರಾಭಿವೃದ್ಧಿ ಮತ್ತು ಗೃಹ ನಿರ್ಮಾಣ ಈ ಮೂರು ಇಲಾಖೆ ಮುಂಗಡ ಮೇಲೆ ನಾನು ಒಂದೆರಡು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೇ ನಗರಾಭಿವೃದ್ಧಿ ಸಚಿವರು ಇಲ್ಲಿ ಇದ್ದಾರೆ. ನಾನು ಅವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ನಗರಸಭೆಗಳ ಆದಾಯ ಮತ್ತು ಸಂಪನ್ಮೂಲಗಳು ಯಾವ ಮಟ್ಟದಲ್ಲಿ ಇವೆ ಎನ್ನುವುದನ್ನು ಅವರು ಸ್ವಲ್ಪ ವಿಚಾರ ಮಾಡಬೇಕಾಗಿದೆ. ಸುಮಾರು ವರ್ಷಗಳಿಂದ ಆಕ್ಟ್ರಾಯ್ ರದ್ದಾದ್ದರಿಂದ ಹಣಸಂಗ್ರಹ ಈ ಪುರಸಭೆಗಳಲ್ಲಿ ಇಲ್ಲ, ಇದರಿಂದ ಎಲ್ಲಾ ನಗರಸಭೆಗಳ ಅಭಿವೃದ್ಧಿಗೆ ಮತ್ತು ಇತರೆ ಸಾರ್ವಜನಿಕ ಅಭಿವೃದ್ಧಿ ಕೆಲಸಕಾರ್ಯಗಳಿಗೆ ತೊಂದರೆಯಾಗಿದೆ. ಹಲವಾರು ನಗರಗಳಲ್ಲಿ ಅಲ್ಲಿನ ಜನ ಪೌರ ಸೌಭಾಗ್ಯಗಳಿಂದ ವಂಚಿತರಾಗಿದ್ದಾರೆ. ಸರ್ಕಾರ ಬೆಂಗಳೂರು ನಗರವನ್ನು ಮಾತ್ರ ಚೆನ್ನಾಗಿ ನೋಡಿಕೊಂಡು ಹಣ ಒದಗಿಸಿಕೊಟ್ಟರೆ ಎಲ್ಲಾ ಇತರೆ ಪಟ್ಟಣಗಳ ಜನರಿಗೆ ಆ ಸೌಭಾಗ್ಯಗಳು ಸಿಕ್ಕಿದಂತಾಗುವುದಿಲ್ಲ.

ಆದರೆ, ಈಗಿರತಕ್ಕಂಥ ಪರಿಸ್ಥಿತಿಯಲ್ಲೇ ನಗರಸಭೆಗಳ ಆದಾಯ ಇದ್ದರೆ ಮುಂದಕ್ಕೆ ಕಷ್ಟವಾಗುತ್ತದೆ. ಅಭಿವೃದ್ಧಿ ಕೆಲಸಗಳನ್ನು ಮಾಡುವುದಿರಲಿ ನಗರ ಸಭೆಗಳಲ್ಲಿರುವ ಸಿಬ್ಬಂದಿವರ್ಗದವರಿಗೇ ಸಂಬಳ ಕೊಡುವುದಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿ ಇರುವುದು ಮಾನ್ಯ ಸಚಿವರಿಗೂ ಗೊತ್ತಿದೆ. ಈಗ ನಗರಸಭೆಗಳಿಗೆ ಇರತಕ್ಕ ಆದಾಯ ಎಂದರೆ, ಬಹಳ ಮುಖ್ಯವಾಗಿ ಮನೆಗಂದಾಯ, ಮನರಂಜನಾ ತೆರಿಗೆ ಮತ್ತು ಸರ್ಕಾರದಿಂದ ಬರತಕ್ಕ ಆಕ್ಟ್ರಾಯ್ ಅನುದಾನ ಈ ಮೂರು ಬಹಳ ಮುಖ್ಯವಾದ ಆದಾಯವಾಗಿರುತ್ತವೆ. ಇದರ ಜೊತೆಗೆ ಸ್ವಲ್ಪಮಟ್ಟಿಗೆ ಲೈಸನ್ಸ್ ಫೀ ಬರುತ್ತದೆ. ಆದರೆ ಇದಂ

ದೊಡ್ಡ ಮೊತ್ತ ಆಗಲಿಕ್ಕಿಲ್ಲ. ಮೇಲೆ ಹೇಳಿರುವ ಮೂರು ಬಾಬುಗಳಿಂದ ಬರುವ ಆದಾಯವನ್ನು ಸರಿಯಾದಂಥ ರೀತಿಯಲ್ಲಿ ಉಪಯೋಗಿಸಿಕೊಂಡರೆ ಸಾರ್ವಜನಿಕ ಅವಶ್ಯಕತೆಗಳನ್ನು ಪೂರೈಸುವುದಕ್ಕೆ ನಗರಸಭೆಗಳಿಗೆ ಸಾಧ್ಯವಾಗುತ್ತದೆ. ಮಾನ್ಯ ಅಧ್ಯಕ್ಷರೇ, ಬಹಳ ವಿಷಾದವಾಗಿ ಈ ಸಂದರ್ಭದಲ್ಲಿ ಒಂದು ವಿಷಯವನ್ನು ಹೇಳಬೇಕಾದರೆ, ಮನೆಗಂದಾಯವನ್ನು ಪುನರ್‌ವಿಮರ್ಶೆ ಮಾಡುವುದಕ್ಕೆ ೫ ವರ್ಷಗಳಿಗೆ ಒಂದು ಸಲ ಅಧಿಕಾರಿಗಳನ್ನು ನೇಮಕ ಮಾಡುತ್ತಾರೆ. ಹೀಗೆ ನೇಮಕ ಮಾಡುವ ನಾಲ್ಕೈದು ಅಧಿಕಾರಿಗಳು ತಪ್ಪು ಮಾಡಿದರೆ ನಗರದಲ್ಲಿರತಕ್ಕ ಲಕ್ಷಾಂತರ ಜನರು ತೊಂದರೆಗೆ ಒಳಗಾಗಬೇಕಾಗುತ್ತದೆ ಯಾರೋ ಅಧಿಕಾರಿಗಳು ಮಾಡುವ ತಪ್ಪಿಗೆ ನಗರದ ಜನರು ತೊಂದರೆಗೆ ಈಡಾಗುತ್ತಾರೆಂದು ನಾನು ಹೇಳಬೇಕಾಗುತ್ತದೆ. ತಾವು ಇದರ ಬಗ್ಗೆ ವಿಚಾರಣೆ ಮಾಡಬೇಕು. ಉದಾಹರಣೆಗೆ ದಾವಣಗೆರೆಯಲ್ಲಿ ಮನೆಗಂದಾಯವನ್ನು ಪುನರ್‌ವಿಮರ್ಶೆ ಮಾಡುವುದಕ್ಕೆ ಒಬ್ಬ ಅಸೆಸ್‌ಮೆಂಟ್ ಆಫೀಸರ್ ಬಂದಿದ್ದಾರೆ. ನಮ್ಮ ಸರ್ಕಾರ ಇನ್ನು ಮುಂದೆ ಲಂಚಗುಳಿತನವನ್ನು ನಿರ್ಮೂಲನ ಮಾಡುತ್ತೇವೆ. ಲಂಚ ಎನ್ನುವ ಪದವನ್ನು ಕಿತ್ತುಹಾಕುತ್ತೇವೆಂದು ಹೇಳುತ್ತಾರೆ. ಕೆಲವು ಕಡೆ ನಿಷ್ಠಾವಂತ ಅಧಿಕಾರಿಗಳೂ ಇರಬಹುದು. ಯಾರಾದರೂ ಒಬ್ಬ ಅಧಿಕಾರಿಗಳು ಕರ್ತವ್ಯ ನಿಷ್ಠೆಯನ್ನು ಗಮನದಲ್ಲಿಟ್ಟುಕೊಂಡು ಯಾರ ಮುಲಾಜಿಗೂ ಒಳಗಾಗದೇ ಇದ್ದರೆ ಅಂಥವರನ್ನು ಕಿತ್ತುಹಾಕುವುದಕ್ಕೆ ಪ್ರಯತ್ನ ಮಾಡುತ್ತಾರೆ. ಈ ಮನುಷ್ಯ ಉಪಯೋಗವಾಗುವುದಿಲ್ಲವಾದ್ದರಿಂದ ಇವನು ಇಲ್ಲಿ ಇರುವುದು ಸರಿಯಲ್ಲವೆಂದು ಹೇಳಿ ಯಾರಾದರೂ ಒಬ್ಬ ಪೋಲೀಸಿನವರ ಕೈಗೆ ಹಣ ಕೊಟ್ಟು ಆ ಅಧಿಕಾರಿ ಹತ್ತಿರ ಕಳುಹಿಸಿ ಲಂಚ ಕೊಡುವ ರೀತಿ ಮಾಡಿ ಕರಪ್ಷನ್ ಮಾಡಿದ್ದಾನೆಂದು ಸಸ್ಪೆಂಡ್ ಮಾಡಿ ಹೊರಗೆ ಹಾಕುತ್ತಾರೆ. ಪ್ರಾಮಾಣಿಕರಿದ್ದರೆ ಈ ರೀತಿ ಮಾಡುತ್ತಾರೆ. ನಿಜವಾಗಿ ಈ ಅಸೆಸ್‌ಮೆಂಟ್ ಆಫೀಸರ್‌ಗಳು ಬಹಳ ಲಂಚವನ್ನು ತೆಗೆದುಕೊಳ್ಳುತ್ತಾರೆ. ಈ ಅಸೆಸ್‌ಮೆಂಟ್ಆಫೀಸರ್‌ಗಳು ಆಫೀಸಿಗಿಂತ ಹೆಚ್ಚಿಗೆ ಹೋಟೆಲ್‌ಗಳಲ್ಲಿ ತಮ್ಮ ವ್ಯವಹಾರಗಳನ್ನು ಮಾಡುತ್ತಾರೆ. ಇವರುಗಳು ಹೇಗೆ ಕೆಲಸ ಮಾಡುತ್ತಾರೆ ಎಂದರೆ, ಮನೆ ಮಾಲೀಕ ಈ ಅಸೆಸ್‌ಮೆಂಟ್ ಆಫೀಸರ್ ಹತ್ತಿರ ಬಂದಾಗ, ನೀನು ಮನೆಯನ್ನು ಎಷ್ಟು ಬಾಡಿಗೆಗೆ ಕೊಟ್ಟಿದ್ದೀಯಾ ಎಂದು ಕೇಳುತ್ತಾರೆ. ಒಂದು ಸಾವಿರ ರೂಪಾಯಿಗಳಿಗೆ ಮನೆಯನ್ನು ಬಾಡಿಗೆಗೆ ಕೊಟ್ಟಿದ್ದೇನೆಂದು ಮನೆ ಮಾಲೀಕ ಹೇಳಿದರೆ, ಒಂದು ವರ್ಷಕ್ಕೆ ಎರಡು ತಿಂಗಳ ಮನೆ ಬಾಡಿಗೆಯನ್ನು ಕಂದಾಯ ರೂಪದಲ್ಲಿ ಕೊಡಬೇಕಾಗುತ್ತದೆ. ಅಂದರೆ ಒಂದು ಸಾವಿರ ರೂಪಾಯಿಗಳು ಮನೆ ಬಾಡಿಗೆ ಬರುವ ಹಾಗಿದ್ದರೆ ೫ ವರ್ಷಕ್ಕೆ ೧೦ ಸಾವಿರ ರೂಪಾಯಿಗಳು ಮನೆಗಂದಾಯ ರೂಪದಲ್ಲಿ ನೀನು ಕೊಡಬೇಕಾಗುತ್ತದೆ. ಆದ್ದರಿಂದ, ಈಗ ನಾನು ೨೦೦ ರೂಪಾಯಿ ಮಾತ್ರ ಬಾಡಿಗೆ ಬರುತ್ತದೆಂದು ಬರೆಯುತ್ತೇನೆ. ಇದರಿಂದ ನೀನು ೫ ವರ್ಷಕ್ಕೆ ಕೇವಲ ೨೦೦೦ ರೂಪಾಯಿಗಳನ್ನು ಮಾತ್ರ ಕಟ್ಟಬೇಕಾಗುತ್ತದೆ. ಇದಕ್ಕಾಗಿ ನನಗೆ ೩೦೦೦ ರೂಪಾಯಿಗಳನ್ನು ಕೊಡಬೇಕು. ನನಗೆ ಮೂರು ಸಾವಿರ ರೂಪಾಯಿಗಳನ್ನು ಕೊಟ್ಟರೂ ನಿನಗೆ ೫೦೦೦ ರೂಪಾಯಿ ವರ್ಷಕ್ಕೆ ಉಳಿತಾಯವಾಗುತ್ತದೆಂದು ಅಧಿಕಾರಿಗಳು ಹೇಳುತ್ತಾರೆ. ಈ ವಿಷಯವನ್ನು ನಾನು ಜವಾಬ್ದಾರಿಯಿಂದ ನಿಜ ಹೇಳುತ್ತಿದ್ದೇನೆ. ಯಾವ ಅಧಿಕಾರಿ ಈ ರೀತಿ ಮಾಡುತ್ತಿದ್ದಾನೆಂದು ಹೇಳುವುದಕ್ಕೆ ನಾನು ಅವರನ್ನು ನೋಡಿಲ್ಲ. ಈ ವಿಷಯವನ್ನು ನಗರಸಭೆಗಳ ಸದಸ್ಯರುಗಳ ಮತ್ತು ಅಧ್ಯಕ್ಷರುಗಳ ಆದಿಯಾಗಿ ಈ ಮಾತನ್ನು ಹೇಳುತ್ತಾರೆ. ಈ ಅಧಿಕಾರಿಗಳು ಯಾರಿಗೆ ಎಷ್ಟು ಲಾಭವಾಗುತ್ತದೆಂದು ಲೆಕ್ಕ ಹಾಕಿ ಹೇಳಿ ಹಣವನ್ನು ಸಂಪಾದನೆ ಮಾಡುತ್ತಾರೆ. ಲಂಚ ತೆಗೆದ ಕೊಳ್ಳುವ ಅಧಿಕಾರಿಗಳನ್ನು ಹಿಡಿಯುವವರು ಎಲ್ಲಿದ್ದಾರೋ ಗೊತ್ತಿಲ್ಲ. ಲಂಚವನ್ನು ಮಾತ್ರ ಅಧಿಕಾರಿಗಳು ಬಹಿರಂಗವಾಗಿ ತೆಗೆದುಕೊಳ್ಳುತ್ತಾರೆ. ಇದರ ಬಗ್ಗೆ ಬಹಿರಂಗವಾಗಿ ನಗರಸಭೆಗಳಲ್ಲಿ ಸದಸ್ಯರುಗಳು ಮಾತನಾಡಿದ್ದಾರೆ. ಅಂದರೆ ನಗರ ಸಭೆಗಳ ಅಧಿವೇಶನದಲ್ಲೇ ಮಾತನಾಡಿದ್ದಾರೆ.

ಪತ್ರಿಕೆಗಳಲ್ಲಿಯೂ ಇದು ಬಂದೆ. ಆದರೆ ಯಾರನ್ನು ಹಿಡಿದಿದ್ದಾಗೆ ? ನಿಮ್ಮ ಇಲಾಖೆ ಏನು ಮಾಡುತ್ತಾ ಇದೆ ? ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ನಾನು ಮಾನ್ಯ ಸಚಿವರಲ್ಲಿ ಇಷ್ಟನ್ನು ಹೇಳಬಯಸುತ್ತೇನೆ. ಈ ನಗರಸಭೆಗಳಿಗೆ ಆದಾಯ ಇಲ್ಲ. ಕಂದಾಯ, ಆಕ್ಟ್ರಾಯ್ ಮತ್ತು ಮನರಂಜನ ತೆರಿಗೆ ಈ ಮೂರನ್ನು ಬಿಟ್ಟರೆ ಬೇರೆ ಯಾವ ಆದಾಯದ ಮೂಲಗಳೂ ಇಲ್ಲ. ಒಂದು ವೇಳೆ ಕಂದಾಯವನ್ನು ನೀವೇನಾದರೂ ಹೆಚ್ಚಿಗೆ ಮಾಡಿದರೆ, ಈಗಿರತಕ್ಕಂಥ ೫೦ ಲಕ್ಷ ರೂಪಾಯಿಗಳ ಮನೆಗಂದಾಯ ವಿಸಿದೆ ಅದನ್ನೇ ಸರಿಯಾಗಿ ಅಸೆಸ್ ಮಾಡಿದರೆ ಒಂದೂವರೆ ಕೋಟಿ ರೂಪಾಯಿಗಳಷ್ಟು ಬರಬಹುದು. ಇಷ್ಟು ಹಣ ಬಂದರೆ ಅದನ್ನು ಸಂಬಳ

ಸಾರಿಗೆ ಮತ್ತು ಇತರ ಖರ್ಚುಗಳಿಗೆ ಉಪಯೋಗಿಸಿ ಉಳಿದ ಹಣಕ್ಕೆ ತಮ್ಮಿಂದ ಬಂದ ಅನುದಾನವನ್ನು ಸೇರಿಸಿ ರಸ್ತೆಗಳಿಗೆ ಮತ್ತಿತರ ನಾಗರೀಕ ಸೌಲಭ್ಯಗಳನ್ನು ಒದಗಿಸುವುದಕ್ಕೆ ಅನುಕೂಲವಾಗುತ್ತದೆ ಮತ್ತು ಹೀಗೆ ಆ ದಿಸೆಯಲ್ಲಿ ತಾವು ಪ್ರಯತ್ನ ಮಾಡಬೇಕು. ಆದರೆ ದಾವಣಗೆರೆಯಲ್ಲಿ ಈ ವ್ಯವಸ್ಥೆಯು ಹದಗೆಟ್ಟಿದೆ. ನಗರದ ಜನತೆಗೆ ಯಾವುದೇ ಸೌಲಭ್ಯಗಳನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲದಂಥ ಒಂದು ಪರಿಸ್ಥಿತಿಯು ಅಲ್ಲಿ ನಿರ್ಮಾಣವಾಗಿದೆ. ಹೀಗೆ ಈಗ ಇರುವಂಥ ಒಂದು ಪರಿಸ್ಥಿತಿಯನ್ನು ಸರಿಪಡಿಸ ತಕ್ಕಂಥಾದ್ದು ಇಲಾಖೆಯ ಮತ್ತು ಅಧಿಕಾರಿಗಳ ಆದ್ಯಕರ್ತವ್ಯ ಎಂದು ನಾನು ಹೇಳಬಯಸುತ್ತೇನೆ.

ದಾವಣಗೆರೆಯಲ್ಲಿ ನೀರಿನ ತೊಂದರೆ ಬಹಳಷ್ಟು ಇದೆ. ಅಲ್ಲಿನ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಈ ಬಗ್ಗೆ ಸೂಕ್ತ ಕಾರ್ಯವನ್ನು ನಿರ್ವಹಿಸುತ್ತಾ ಇಲ್ಲ. ದಾವಣಗೆರೆ ನಗರವು ದಿನೇ ದಿನೇ ಬೆಳೆಯುತ್ತಾ ಹೋಗುತ್ತಿದೆ. ನೀರು ಸರಬರಾಜು ಮಂಡಳಿಯವರು ೧೫ ವರ್ಷಗಳ ಹಿಂದೆ ಒಂದು ಯೋಜನೆಯನ್ನು ತಯಾರು ಮಾಡಿದರು, ಅದು ಭದ್ರಾ ಕಾಲುವೆಯಿಂದ ನೀರನ್ನು ದಾವಣಗೆರೆಗೆ ಒದಗಿಸತಕ್ಕಂಥ ಒಂದು ಯೋಜನೆ ಆದಾಗಿತ್ತು. ಆದರೆ ಈ ೧೫ ವರ್ಷಗಳಲ್ಲಿ ದಾವಣಗೆರೆಯು ಅತೀ ತೀವ್ರಗತಿಯಲ್ಲಿ ಬೆಳೆಯುತ್ತಾ ಬಂದಿದೆ. ಅದಕ್ಕೆ ಕೆಲವಾರು ಕಾರಣಗಳನ್ನು ಕೊಡಬಹುದಾಗಿದೆ. ನಗರವು. ಕೈಗಾರಿಕಾ ಕ್ಷೇತ್ರದಲ್ಲಿ ವಾಣಿಜ್ಯ ಕ್ಷೇತ್ರದಲ್ಲಿ, ಹಾಗೂ ವಿದ್ಯಾಕ್ಷೇತ್ರದಲ್ಲಿ ಮತ್ತು ವ್ಯವಸಾಯ ಕ್ಷೇತ್ರದಲ್ಲಿಯೂ ಮುಂದಿರುವುದು ಇದಕ್ಕೆ ಕಾರಣವಿರಬಹುದು. ಒಟ್ಟಿನಲ್ಲಿ ಹೆಚ್ಚುತ್ತಿರುವ ಮತ್ತು ತೀವ್ರಗತಿಯಲ್ಲಿ ಬೆಳೆಯುತ್ತಿರುವ ನಗರಕ್ಕೆ ನೀರನ್ನು ಒದಗಿಸುವ ಗುರುತರವಾದ ಜವಾಬ್ದಾರಿ ಸರಕಾರಕ್ಕೆ ಇದೆ. ಭದ್ರಾ ನಾಲೆಯಿಂದ ಈಗ ನೀರು ತೆಗೆದುಕೊಳ್ಳತಕ್ಕಂಥ ಸಂದರ್ಭಗಳಲ್ಲಿ ಒಂದೊಂದು ಸಲ ನೀರು ನಿಂತು ಹೋಗುತ್ತದೆ. ಡ್ಯಾಮ್‌ನಲ್ಲಿ ನೀರು ಇಲ್ಲದಿದ್ದರೆ ನಾಲೆಯಲ್ಲಿ ಕೂಡ ನೀರು ಇರುವುದಿಲ್ಲ. ಅಂತಹ ಸಂದರ್ಭಗಳಲ್ಲಿ ದಾವಣಗೆರೆಗೆ ನೀರು ಸರಬರಾಜು ನಿಂತು ಅಭಾವ ಉಂಟಾಗುತ್ತದೆ. ಈ ಬಗ್ಗೆ ನಾನು ಸಚಿವರ ಹತ್ತಿರವೂ ಮಾತನಾಡಿದ್ದೇನೆ. ತತ್‌ಕ್ಷಣ ಕೊಳವೆ ಬಾವಿಗಳನ್ನು ಹಾಕುವುದರ ಮೂಲಕ ನಾಗರೀಕರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಂಡಿದ್ದೇನೆ. ಹಾಗೆ ವ್ಯವಸ್ಥೆ ಮಾಡಿದ್ದಾರೆ ಆದರೆ ಇದು ತಾತ್ಕಾಲಿಕ ವ್ಯವಸ್ಥೆಯಾಯಿತು. ಈ ನಗರಕ್ಕೆ ಖಾಯಂ ಆಗಿ ನೀರು ಒದಗಿಸುವ ಒಂದು ಅವಕಾಶ ಇದೆ. ನೀವು ಬೆಂಗಳೂರು ನಗರಕ್ಕೆ ಕಾವೇರಿ ನದಿ ನೀರನ್ನು ತರುತ್ತೀರಿ, ಹುಬ್ಬಳ್ಳಿಗೆ ಮಲಪ್ರಭಾ ನದಿ ನೀರನ್ನು ತರುತ್ತೀರಿ. ಇಂತಹ ಕಡೆಗಳಲ್ಲಿ ಸುಮಾರು ೬೦ ಕಿ.ಮೀ. ದೂರದಿಂದ ನೀರನ್ನು ತರುವಂಥ ಒಂದು ಪ್ರಯಾಸವನ್ನು ಮಾಡಬೇಕಾಗಿತ್ತು. ಆದರೆ ನಮ್ಮ ನಗರದಲ್ಲಿ ಆ ಪರಿಸ್ಥಿತಿಯು ಇಲ್ಲ. ನಮ್ಮ ಪಕ್ಕದಲ್ಲಿಯೂ ತುಂಗಭದ್ರಾ ನದಿ ಇದೆ, ಸುಮಾರು ೧೫ ಕಿ ಮೀ ಗಳ ಅಂತರದಲ್ಲಿ ಈ ನದಿ ಇದೆ. ಆದರಿಂದ ನೀರನ್ನು ತೆಗೆದುಕೊಂಡು ಅದನ್ನು ಸ್ವಚ್ಛಗೊಳಿಸಿ ಜನರಿಗೆ ಒದಗಿಸುವುದಕ್ಕೆ ಸಾಧ್ಯತೆ ಇದೆ. ಆ ಯೋಜನೆಯನ್ನು ನೀರು ಸರಬರಾಜು ಮಂಡಳಿಯವರು ಮಾಡಬೇಕಾಗಿದೆ. ಅವರು ದಾವಣಗೆರೆ ನಗರಕ್ಕೆ ನೀರು ಸರಬರಾಜು ಮಾಡುವ ಈ ಯೋಜನೆಯನ್ನು ತಯಾರು ಮಾಡಿ ಸರ್ಕಾರಕ್ಕೆ ತಿಳಿಯ ಪಡಿಸಿ, ಅವರ ಒಪ್ಪಿಗೆಯನ್ನು ಪಡೆದು ಕೆಲಸವನ್ನು ಪ್ರಾರಂಭ ಮಾಡಬೇಕು. ಹೀಗೆ ನೀರು ನಗರಕ್ಕೆ ಇಲ್ಲದಿದ್ದಾಗ ಅನೇಕ ರೀತಿಯ ರೋಗರುಜಿನಗಳು ಬರುವುದಕ್ಕೆ ಸಾಧ್ಯವಿದೆ. ಹೊರಗಡೆಯಿಂದ ಬರತಕ್ಕಂಥ ಜನರಿಗೆ ನೀರಿಲ್ಲದಿದ್ದರೆ ತೊಂದರೆಯಾಗುತ್ತದೆ. ಆದುದರಿಂದ ಯೋಜನಾ ಮಂಡಳಿಯವರಿಗೆ ಈಗಲಾದರೂ ಹೇಳಿ, ದಾವಣಗೆರೆ ಹರಿಹರ ಒಳಭಾಗದಲ್ಲಿ ಹೋಗತಕ್ಕಂಥ ಬೈಪಾಸ್ ರಸ್ತೆಯಲ್ಲಿ ನೀರು ತರುವುದಕ್ಕೆ ಬೇಕಾದ ಅನುಕೂಲತೆಗಳು ಇವೆ. ಈಗ ಇರತಕ್ಕಂಥ ವ್ಯವಸ್ಥೆ ಸರಿಯಾಗಿ ಇಲ್ಲ. ಏಕೆಂದರೆ ತುಂಗಭದ್ರಾ ನೀರು ತೆಗೆದುಕೊಳ್ಳತಕ್ಕಂಥ ಸ್ಥಳದಲ್ಲಿಯೇ ಹರಿಹರದ ಕೊಳಚೆ ನೀರು ಬಂದು ಬೀಳುತ್ತದೆ. ಅಲ್ಲಿಂದ ಸುಮಾರು ೫೦ ಅಡಿ ದೂರದಲ್ಲಿ ನಮ್ಮ ನಗರಕ್ಕೆ ನೀರು ಒದಗಿಸುವಂಥ ಒಂದು ಡ್ಯಾಮ್ ಇದೆ. ನಿಜವಾಗಿಯೂ ನಾವು ದಾವಣಗೆರೆ ನಗರದಲ್ಲಿ ಕೊಳಚೆ ನೀರನ್ನು ಸ್ವಚ್ಛ ಮಾಡಿಕೊಂಡು ಕುಡಿಯುತ್ತಿದ್ದೇವೆಂದರೆ ತಪ್ಪಾಗುವುದಿಲ್ಲ. ಆದರೆ ಆ ಪರಿಸ್ಥಿತಿಯನ್ನು ಸರಿಪಡಿಸುವುದಕ್ಕೆ ನೀರು ಸರಬರಾಜು ಮಂಡಲಿ ಏನಿದೆ ಅದರ ಅಧಿಕಾರಿಗಳು ಪ್ರಯತ್ನ ಮಾಡಬೇಕಾಗಿತ್ತು. ಆದರೆ ಅವರು ಆ ಕಡೆ ಗಮನಹರಿಸಿಲ್ಲ. ಅಲ್ಲಿ ಗಲೀಜು ನೀರು ಕುಡಿಯುವ ಮೂಲಕ ಜನರ ಆರೋಗ್ಯ ಕೆಟ್ಟುಹೋಗುತ್ತಿದೆ. ಜನರಿಗೆ ಅನೇಕ ಖಾಯಿಲೆಗಳು ಬರುತ್ತಿವೆ. ಜಾಂಡೀಸ್ ಮುಂತಾದವು ಬರುತ್ತವೆ. ಆದ್ದರಿಂದ ಇವನ್ನು ತಪ್ಪಿಸುವುದಕ್ಕೆ ಪ್ರಯತ್ನಿಸಬೇಕು. ನಗರದ ಹೊರಗಡೆ ಹೋಗುವ ರಸ್ತೆ ಬಳಿ ಹೊಸ ಯೋಜನೆಯನ್ನು ಶುರು ಮಾಡಬಹುದು. ಏಕೆಂದರೆ ಗಲೀಜು ನೀರು ಅಲ್ಲಿಗೆ ಹೋಗುವುದಿಲ್ಲ. ಸ್ವಲ್ಪ ಹಣ ಖರ್ಚಾಗುತ್ತದೆ ಅಷ್ಟೆ. ಆದರೆ ಆ

ಹಣವನ್ನು ಈಗ ಒದಗಿಸದೆ ಮುಂದೆ ದಾವಣಗೆರೆ ಬೆಳೆದಾದ ಮೇಲೆ ಸಮಸ್ಯೆ ಇನ್ನಷ್ಟು ಉಲ್ಬಣಗೊಂಡು ನಂತರ ದುಡ್ಡಿಲ್ಲ ಎನ್ನಬೇಕಾಗುತ್ತದೆ. ದಯಮಾಡಿಟ್ಟು ಈ ಯೋಜನೆಯನ್ನು ಈಗಲೇ ಕೈಗೆತ್ತಿಕೊಳ್ಳ ಬೇಕೆಂದು ನಾನು ಕೋರುತ್ತೇನೆ.

ಈ ಮೊದಲೇ ನಾನು ಹೇಳಿದಂತೆ ನಗರಸಭೆಗಳಿಗೆ ಶೇಕಡ ೧೦ ರಷ್ಟು ಗ್ರಾಂಟನ್ನು ಕೊಡಲಾಗುತ್ತಿದ್ದು ಈ ಸಲ ೧೭.೫ ಪರ್ಸೆಂಟ್ ಕೊಡುವಂತೆ ಹೇಳಿದ್ದಾರೆ ಈ ಆಕ್ಟ್ರಾಯ್ ಎನ್ನುವುದು ಇದ್ದಿದ್ದರೆ ನಮ್ಮ ನಗರಸಭೆಯ ಸಂಗ್ರಹ ೨.೫ ಕೋಟಿ ಆಗುತ್ತಿತ್ತು, ಆದರೆ ನೀವು ಅದಕ್ಕೆ ಬದಲಾಗಿ ಕೊಡುತ್ತಿರುವುದು ೧ ಕೋಟಿ ಮಾತ್ರ ಇದರಿಂದ ಸಂಬಳ ಕೊಡುವುದಕ್ಕೇ ಆಗುತ್ತಿಲ್ಲ. ಅಭಿವೃದ್ಧಿ ಕೆಲಸಗಳು ನಡೆಯುತ್ತಿಲ್ಲ. ಈಗ ಪನು ೧೭.೫ ಪರ್ಸೆಂಟ್ ಗ್ರಾಂಟ್ ಕೊಡಬೇಕೆಂದಿದ್ದೀರಿ ಅದರಿಂದ ಏನೂ ಪಯೋಗ ಇಲ್ಲ, ಕನಿಷ್ಟ ೩೦ ಪರ್ಸೆಂಟಾದರೂ ಕೊಟ್ಟರೆ ಅವುಗಳ ಪರಿಸ್ಥಿತಿ ಸುಧಾರಿಸಬಹುದು. ಇಲ್ಲದಿದ್ದರೆ ಆಕ್ಟ್ರಾಯ್ ರಿ ಇಂಟ್ರಡ್ಯೂಸ್ ಮಾಡಿಬಿಡಿ ಬೇರೆ ಹಣವನ್ನು ನಿಮ್ಮಿಂದ ಕೇಳುವುದಿಲ್ಲ. ಹಣ ಇಲ್ಲದಿದ್ದರೆ ನಗರಸಭೆಗಳು ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ತಾವು ಈ ಕಡೆ ಗಮನಹರಿಸಿ ಆಕ್ಟ್ರಾಯ್ ಅನ್ನು ಇಂಟ್ರಡ್ಯೂಸ್ ಮಾಡಬೇಕೆಂದು ಇಲ್ಲದಿದ್ದರೆ ಅನುದಾನವನ್ನು ಜಾಸ್ತಿ ಮಾಡಬೇಕೆಂದು ಕೋರುತ್ತೇನೆ

ಮತ್ತೊಂದು ಅಧ್ಯಕ್ಷರೇ, ನಾನು ಮೊದಲೇ ಹೇಳಿದಂತೆ ಮುನಿಸಿಪಾಲಿಟಿಯ ಅಸೆಸ್‌ಮೆಂಟ್ ಏನು ಭ್ರಷ್ಟಾಚಾರದ ದ್ವಾರ ನಡೆದಿದೆ ಅದನ್ನು ಅಮೂಲಾಗ್ರವಾಗಿ ಸರಿಪಡಿಸಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಬೇಕಾಗಿದೆ. ಇಷ್ಟು ಓಪನಾಗಿ ಭ್ರಷ್ಟಾಚಾರ ನಡೆಯುತ್ತಿರುವುದನ್ನು ಕಂಡು ನನಗೆ ದುಃಖವಾಗುತ್ತಿದೆ ಮತ್ತು ಇದರಿಂದ ಸರ್ಕಾರಕ್ಕೂ ಒಳ್ಳೆಯ ಹೆಸರನ್ನು ತಂದಂತಾಗುವುದಿಲ್ಲ. ನಾಗರಿಕರಿಗಾಗುತ್ತಿರುವ ಅನ್ಯಾಯವನ್ನು ತಪ್ಪಿಸಬೇಕಾಗಿದೆ.

ನಂತರ ವೆಹಿಕಲ್ಸ್ ಟ್ಯಾಕ್ಸ್ ಮೊದಲಿನಿಂದ ಬಹಳ ಕಡಿಮೆ ಇತ್ತು ಅದನ್ನು ಹೆಚ್ಚು ಮಾಡುತ್ತೇವೆಂದು ಹೇಳಿದ್ದಾರೆ ಹೆಚ್ಚು ಮಾಡಿ ಕೊಡಬೇಕು. ಇನ್ನು ನಗರಾಭಿವೃದ್ಧಿ ಮಂಡಳಿ ಮತ್ತು ನಗರ ಯೋಜನಾ ಪ್ರಾಧಿಕಾರ ಇವನ್ನು ಮಾಡುವ ಉದ್ದೇಶವೇನೆಂದರೆ ಜನಗಳಿಗೆ ಹೆಚ್ಚು ಅನುಕೂಲ ಮಾಡಿಕೊಡಬೇಕು ಆ ಮೂಲಕ ಅವರ ವಸತಿ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ಇದನ್ನು ಮಾಡಿದ್ದಾರೆ. ಹಿಂದೆ ನಗರ ಸಭೆಯವರು ನಿವೇಶನಗಳನ್ನು ಮಾಡಿಕೊಡುತ್ತಿದ್ದರು ಇದರಿಂದಾಗಿ ನಗರ ಸಭೆಗಳಲ್ಲಿರತಕ್ಕಂತಹವರಿಗೆ ತೊಂದರೆಯಾಗುತ್ತದೆಂದು ಇದಕ್ಕೆ ಪ್ರತ್ಯೇಕ ವ್ಯವಸ್ಥೆಯನ್ನು ಮಾಡಬೇಕೆಂದು ದಿವಂಗತ ದೇವರಾಜ ಅರಸ್‌ರವರ ಕಾಲದಲ್ಲಿ ಈ ನಗರಾಭಿವೃದ್ಧಿ ಮಂಡಲಿಗಳನ್ನು ಮಾಡಿದರು ಈ ನಗರಾಭಿವೃದ್ಧಿ ಮಂಡಲಿ ಮತ್ತು ನಗರ ಯೋಜನಾ ಪ್ರಾಧಿಕಾರ ಬೇರೆ ಬೇರೆಯಾದ ಮೇಲೆ ನಗರಾಭಿವೃದ್ಧಿ ಪ್ರಾಧಿಕಾರದವರು ಯೋಜನೆಯನ್ನು ತಯಾರು ಮಾಡುತ್ತಾರೆಯೇ ಎಂದು ನೋಡಿದರೆ ಯಾವ ಯೋಜನೆಯೂ ಕಾಣುತ್ತಿಲ್ಲ. ೨-೩ ಎಕರೆ ಪ್ರದೇಶವನ್ನು ತೆಗೆದುಕೊಂಡು ಅವರ ಮನಸ್ಸಿಗೆ ಬಂದ ಹಾಗೆ ಗೆರೆಗಳನ್ನು ಹಾಕಿ ಅದನ್ನು ಸಭೆಯ ಮುಂದೆ ಇಟ್ಟು ಅದಕ್ಕೆ ಒಪ್ಪಿಗೆಯನ್ನು ಕೊಡುತ್ತಾರೆ. ಇದಕ್ಕೇನೂ ಮಾಸ್ಟರ್ ಪ್ಲಾನ್ ಎಂದು ಏನೂ ಇಲ್ಲ, ಅಲ್ಲಿಂದ ಇಲ್ಲಿಯವರೆಗೆ ರೋಡ್ ಹೋಗುತ್ತದೆ ನಂತರ ೫೦೦ ಅಡಿ ೧೦೦೦ ಅಡಿ ಮುಂದೆ ಹೋದರೆ ಅಲ್ಲಿ ರೋಡ್ ಇರುವುದಿಲ್ಲ. ಅದು ಬೇರೆಯವರ ಜಾಗವಾಗಿದ್ದು ಅವರೂ ಕೂಡ ತಮಗೆ ಇಷ್ಟ ಬಂದ ಹಾಗೆ ಸೈಟ್ ಮಾಡುತ್ತಾರೆ. ೨-೩ ಎಕರೆಯನ್ನು ತುಂಡು ತುಂಡು ಮಾಡಿ ಪ್ಲಾನ್ ಅಪ್ರೂವಲ್ ಮಾಡಿಕೊಡುವುದರ ಮೂಲಕ ಸೈಟ್‌ಗಳನ್ನು ಮಾರಿಕೊಳ್ಳುತ್ತಿದ್ದಾರೆ. ಸಾರ್ವಜನಿಕರ ಉಪಯೋಗಕ್ಕೆ ಅಂದರೆ ಮಾರ್ಕೆಟ್‌ಗಾಗಲೀ, ಬಸ್ ನಿಲ್ದಾಣಕ್ಕಾಗಲೀ ಅಥವಾ ಶಾಲೆಗಳಿಗಾಗಲೀ ಇನ್ನಿತರೆ ಅನುಕೂಲಕ್ಕಾಗಲೀ ದೇವಸ್ಥಾನಗಳಿಗಾಗಲೀ ಅಲ್ಲಿ ಏನೂ ವ್ಯವಸ್ಥೆಯಿಲ್ಲ ಮತ್ತು ರಸ್ತೆಗಳು ಕೂಡ ಚಿಕ್ಕದಾಗಿರುತ್ತವೆ. ನಮ್ಮ ಹಿರಿಯರು ನಗರ ಸಭೆಯಲ್ಲಿ ಆಡಳಿತ ನಡೆಸುತ್ತಿದ್ದಾಗ ನಗರವನ್ನು ಎಷ್ಟು ಸುಂದರವಾಗಿ ಅಭಿವೃದ್ಧಿ ಪಡಿಸಿದ್ದಾರೆಂಬುದನ್ನು ತಾವು ನೋಡಬಹುದು, ಟೌನ್ ಪ್ಲಾನಿಂಗ್‌ನವರು ಇನ್ನೂ ಹೆಚ್ಚು ಅನುಕೂಲವನ್ನು ಸಾರ್ವಜನಿಕರಿಗೆ ಮಾಡಿಕೊಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡು ಕೆಲಸ ಮಾಡಬೇಕೆಂದು ಇದನ್ನು ಮಾಡಿದ್ದೀರಿ. ಆದರೆ ಇವತ್ತು ಸಾವಿರಾರು ಎಕರೆ ಜಮೀನಿನಲ್ಲಿ ಶಾಲೆಗೆ ಸ್ಥಳವಿಲ್ಲ, ಮಾರ್ಕೆಟಿಗೆ ಸ್ಥಳವಿಲ್ಲ ಆಟದ ಮೈದಾನವಿಲ್ಲ ಇಲ್ಲವೇ ಬೇರೆ ಯಾವುದೇ ಅನುಕೂಲವಿಲ್ಲದೇ ಇರತಕ್ಕಂತಹ ರೀತಿಯಲ್ಲಿ ಪ್ಲಾನ್ ಅನ್ನು ಅಪ್ರೂವ್ ಮಾಡಿಕೊಟ್ಟಿದ್ದಾರೆ ಎಲ್ಲೋ ಮೂಲೆಯಲ್ಲಿ ಇದು ಪಾರ್ಕ್ ಎಂದು ತೋರಿಸಿರುತ್ತಾರೆ. ಪಾರ್ಕ್‌ಗೆಂದು ಮೀಸಲಿಟ್ಟಿದ್ದ ಜಾಗದಲ್ಲೂ ಸೈಟ್ ಮಾಡಿ-

ಕೊಡುತ್ತಾರೆ ಜನ ಅದನ್ನು ತೆಗೆದುಕೊಳ್ಳುತ್ತಾರೆ. ನಮ್ಮ ಯೋಜನಾ ಪ್ರಾಧಿಕಾರದ ಅಧ್ಯಕ್ಷರಿಗೆ, ನಗರಾಭಿವೃದ್ಧಿ ಅಧ್ಯಕ್ಷರಿಗೆ ತಾವು ಹೇಳಬೇಕು ಎಲ್ಲೆಲ್ಲಿ ಸಾರ್ವಜನಿಕರ ಉಪಯೋಗಕ್ಕೆಂದು ಮೀಸಲಿಟ್ಟಿದ್ದೀರಿ ಆ ಸ್ಥಳದಲ್ಲಿ ಒಂದು ಗುರುತು ಮಾಡಿ ಬೇರೆಯವರಿಗೆ ಗೊತ್ತಾಗಲಿ ಇದು ಪಾರ್ಕ್ ಅಥವಾ ಮೈದಾನಕ್ಕೆ ಮೀಸಲಾಗಿದೆ ಎಂದು. ಈ ಸ್ಥಳ ಶಾಲೆಗೆ ಅಥವಾ ಇನ್ನಿತರೇ ಸಾರ್ವಜನಿಕರ ಉಪಯೋಗಕ್ಕೋಸ್ಕರ ಮೀಸಲಿಟ್ಟಿರತಕ್ಕಂಥಾದ್ದು ಇದನ್ನು ನೀವು ತೆಗೆದುಕೊಳ್ಳಬಾರದು ಎಂದು ಅವರಿಗೆ ಗೊತ್ತಾಗುತ್ತದೆ. ಆದರೆ ಅದಕ್ಕೆ ಕಲ್ಲನ್ನು ಹಾಕಿ ಏರ್ಪಾಟು ಮಾಡುವಂತಹ ವ್ಯವಸ್ಥೆ ನಡೆದಿದೆ. ನಂದಿನಿ ಲೇ ಔಟ್‌ನಲ್ಲಿ ಸಾವಿರಾರು ಮನೆಗಳನ್ನು ಹೊಡೆದು ಹಾಕಿದರು, ಅದರ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಅಲ್ಲಿ ಬರತಕ್ಕಂತಹ ಮನೆಗಳನ್ನು ಅಧಿಕಾರಿಗಳು ಬರತಕ್ಕ ಮನೆಗಳನ್ನು ತಡೆದಿದ್ದರೆ ಅದನ್ನು ಒಡೆಯತಕ್ಕಂತಹ ಪ್ರಸಂಗ ಬರುತ್ತಿರಲಿಲ್ಲ. ಅವೊತ್ತು ಅದನ್ನು ತಡೆಯಲಿಲ್ಲ ಇವತ್ತು ಹೊಡೆಯಬೇಕಾಯಿತು. ಅದೇ ರೀತಿ ಇನ್ನು ಮುಂದೆ ನಮ್ಮ ನಗರದಲ್ಲಿ ನಡೆಯುವ ಸಂಭವ ಉಂಟಾಗಬಹುದು. ದಯಮಾಡಿಟ್ಟು ಇದರ ಪೂರ್ಣ ಪರಿಶೀಲನೆ ಮಾಡುವುದಕ್ಕೆ ಅಧಿಕಾರಿಗಳನ್ನು ನೇಮಿಸಿ, ಅಲ್ಲಿ ಏನು ತಪ್ಪಾಗಿದೆ ಅದನ್ನು ಸರಿಪಡಿಸುವುದಕ್ಕೆ ಸಾಧ್ಯವಾದರೆ ಸರಿಪಡಿಸತಕ್ಕಂತಹ ವ್ಯವಸ್ಥೆಯನ್ನು ಮಾಡಬೇಕು.

ಅಧ್ಯಕ್ಷರೇ, ಇನ್ನು ಕೊಳಚೆ ನಿರ್ಮೂಲನೆ ವಿಚಾರ. ಕೊಳಚೆ ಪ್ರದೇಶ ಕೊಳಚೆ ಪ್ರದೇಶ ಎಂದು ನಾವು ಹೇಳುತ್ತೇವೆ, ಆದರೆ ನಮ್ಮ ದೇಶದಲ್ಲಿ ಕೊಳಚೆ ಪ್ರದೇಶ ಆಗುವುದಕ್ಕೆ ಕಾರಣ ಏನು? ನಮ್ಮ ದೇಶದಲ್ಲಿರತಕ್ಕಂಥ ಒಂದು ವ್ಯವಸ್ಥೆಯೇ ಇದಕ್ಕೆ ಕಾರಣ. ಇವತ್ತು ಬರಗಾಲ ಬಿದ್ದಿರತಕ್ಕಂಥ ಪ್ರದೇಶದ ಜನ ನಗರಗಳಿಗೆ ವಲಸೆ ಬಂದರೆ ಅವರು ಎಲ್ಲಿ ಜೀವನ ಮಾಡಬೇಕು? ನಮ್ಮ ದೇಶದ ಪ್ರಜೆಗಳು, ನಮ್ಮ ರಾಜ್ಯದ ಪ್ರಜೆಗಳು ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹೋಗುವುದಕ್ಕೆ ಕಾರಣ ಏನು? ದಾವಣಗೆರೆಗಾಗಲೀ, ಬೆಂಗಳೂರಿಗಾಗಲೀ, ಮೈಸೂರಿಗಾಗಲೀ ಅಥವಾ ಹುಬ್ಬಳ್ಳಿಗಾಗಲೀ ಅಥವಾ ಮತ್ತಾವುದೇ ದೊಡ್ಡ ನಗರಗಳಿಗಾಗಲೀ ಅವರು ವಲಸೆ ಬರುವ ಉದ್ದೇಶ. ಅವರು ವಾಸಿಸುವ ಸ್ಥಳಗಳಲ್ಲಿ ಅವರಿಗೆ ಕೆಲಸ ಇಲ್ಲ, ನಗರಗಳಿಗೆ ಹೋದರೆ ಏನಾದರೂ ಕೆಲಸ ಸಿಗುತ್ತದೆ, ಜೀವನ ಮಾಡಬಹುದು ಎಂಬ ಉದ್ದೇಶ ಇಟ್ಟುಕೊಂಡು, ಹೆಂಡತಿ ಮಕ್ಕಳ ಸಮೇತ ಅವರು ವಲಸೆ ಬರುತ್ತಾರೆ. ಈ ರೀತಿ ಬಂದಂಥವರು, ಸರಕಾರಿ ಜಮೀನಿನಲ್ಲಾಗಲೀ ನಗರಸಭೆ ಜಮೀನಿನಲ್ಲಾಗಲೀ ಅಥವಾ ಎಲ್ಲಿ ಜಾಗ ಇರುತ್ತದೆ ಅಲ್ಲಿ ಷೆಡ್ ಹಾಕಿಕೊಳ್ಳುತ್ತಾರೆ. ಅದು ಕೊಳಚೆಯಾಗುತ್ತದೆ. ಅವರು ಅಲ್ಲೇ ಪಾತ್ರೆ ತೊಳೆಯುವುದು, ಬಟ್ಟೆ ಒಗೆಯುವುದು ಸ್ನಾನ ಮಾಡುವುದು ಮಾಡುತ್ತಾರೆ, ನೀರು ಹೋಗುವುದಕ್ಕೆ ಸರಿಯಾದ ವ್ಯವಸ್ಥೆ ಇರುವುದಿಲ್ಲ. ನೀರು ಹೋಗದೆ ಅದು ಕೊಳಚೆಯಾಗುತ್ತದೆ. ದಾವಣಗೆರೆಯಲ್ಲಿ ಸುಮಾರು 20 ಕೊಳಚೆ ಪ್ರದೇಶಗಳು ಇವೆ. ಸರಕಾರಿ ಜಾಗದಲ್ಲಿ, ಖಾಸಗಿಯವರ ಜಾಗದಲ್ಲಿ, ನಗರಸಭೆಯ ಜಾಗದಲ್ಲಿ ಇವೆ. ಹಿಂದೆ ಇದ್ದಂಥ ಕೊಳಚೆ ನಿರ್ಮೂಲನಾ ಮಂಡಲಿ ಅಧ್ಯಕ್ಷರು ಸ್ವಲ್ಪಮಟ್ಟಿಗೆ ಕೆಲಸ ಮಾಡಿದರು. ಮಾಡಲಿಲ್ಲ ಎಂದು ಹೇಳುವುದಿಲ್ಲ.

ಅಧ್ಯಕ್ಷರು.—ಮಾನ್ಯ ಪಂಪಾಪತಿಯವರೇ ತಾವು ಮುಕ್ತಾಯ ಮಾಡಿ. 25 ಮಿನಿಟ್ ಆಯಿತು.

ಶ್ರೀ ಪಂಪಾಪತಿ.—ನಾವು ಮಾತನಾಡುವಾಗ ನಮಗೂ ಹೆಚ್ಚಿನ ಅವಕಾಶ ಕೊಡಬೇಕು.

ಅಧ್ಯಕ್ಷರು.—ಹಾಗೆ ಕೊಡುವುದಕ್ಕೆ ಆಗುವುದಿಲ್ಲ. ಎಲ್ಲರಿಗೂ ಅವಕಾಶ ಕೊಡಬೇಕೆಂದು ಹೆಚ್ಚು ದಿವಸ ಡಿಮ್ಯಾಂಡ್ ಸಲುವಾಗಿ ಚರ್ಚೆ ಮಾಡಲು ಇಟ್ಟಿದ್ದೇವೆ. ಇನ್ನೂ ಮಾತನಾಡುವ ಜನ ಆ ಕಡೆಯೂ ಇದ್ದಾರೆ. ಈ ಕಡೆಯೂ ಇದ್ದಾರೆ.

ಶ್ರೀ ಪಂಪಾಪತಿ.—ನೀವು ಮಾತನಾಡಬೇಡಿ ಎಂದರೆ ನಾನು ಕುಳಿತುಕೊಳ್ಳುತ್ತೇನೆ.

ಅಧ್ಯಕ್ಷರು.—ಆದಷ್ಟು ಮುಗಿಸಿರಿ, ಎಲ್ಲಾ ಡಿಮ್ಯಾಂಡ್ ಮೇಲೂ ನಿಮಗೆ ಅವಕಾಶ ಕೊಡುತ್ತೇನೆ ಈಗ ಮುಗಿಸಿರಿ.

ಶ್ರೀ ಪಂಪಾಪತಿ.—ಆಯಿತು, ತಾವು ಹೇಳಿದ ಹಾಗೆ ಇನ್ನು ಕಾಲು ಗಂಟೆಯೊಳಗೆ ಮುಗಿಸಿ ಬಿಡುತ್ತೇನೆ. ಆ ಕೊಳಚೆ ನಿರ್ಮೂಲನಾ ಮಂಡಲಿ ಅಧ್ಯಕ್ಷರು ಈಗ ಇಲ್ಲ. ಈ ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುವ ಜನರಿಗೆ ನಾವು ಏನು ಅನುಕೂಲ ಒದಗಿಸಿದ್ದೇವೆ ಎಂಬುದನ್ನು ಯೋಚನೆ ಮಾಡಬೇಕು. ತಾನು ಕೊಳಚೆಯಲ್ಲಿರಬೇಕೆಂದು ಯಾವ ಮನುಷ್ಯನೂ ಯೋಚನೆ ಮಾಡುವುದಿಲ್ಲ. ಆದರೆ ಅನಿವಾರ್ಯವಾಗಿ ಇವತ್ತು ಆ ಸ್ಥಳದಲ್ಲಿ ಅವರು ವಾಸ ಮಾಡುತ್ತಿದ್ದಾರೆ. ಅಂತಹ ಸ್ಥಳಗಳಲ್ಲಿ ವಾಸ

ಮಾಡತಕ್ಕಂಥ ಜನರಿಗೆ ನಾವು ಅಗತ್ಯವಾದಂಥ ಸೌಲಭ್ಯಗಳನ್ನು ಒದಗಿಸಿದ್ದೇವೋ ಇಲ್ಲವೋ ಎಂಬುದನ್ನು ನೋಡಬೇಕು. ಅಗತ್ಯವಾದುದು ಏನು ಎಂದರೆ, ಮೊದಲು ನೀರು ಅಮೇಲೆ ಸ್ವಚ್ಛತೆ ಸೌಲಭ್ಯಗಳು, ಆ ನಂತರ ದೀಪ, ರಸ್ತೆ ಇತ್ಯಾದಿಗಳನ್ನು ಒದಗಿಸಬೇಕು. ಅವರಿಗೆ ೪೦ × ೫೦ ಅಡಿ ರಸ್ತೆಯೇ ಬೇಕಿಲ್ಲ. ಒಂದು ಐದು ಅಡಿ ರಸ್ತೆ ಇದ್ದರೂ ಸಾಕು. ಆದರೆ ಆ ರಸ್ತೆಯಾದರೂ ಸರಿಯಾಗಿರ ಬೇಕಲ್ಲ. ಆ ಜನರಿಗೆ ಮಲಭಾದೆ ಬಂದಾಗ ಅವರು ಎಲ್ಲಿಗೆ ಹೋಗಬೇಕು? ಬಹಳ ಕಷ್ಟ ಇದೆ ಸುಲಭ ಶೌಚಾಲಯಗಳನ್ನು ಎಲ್ಲಾ ಕಡೆಗೆ ಕೊಡುವ ಯೋಚನೆ ಇದೆ ಎಂದು ಹೇಳುತ್ತಿದ್ದಾರೆ. ಆದರೆ ದಾವಣಗೆರೆಗೆ ಕೊಟ್ಟಿಲ್ಲ. ಏತಕ್ಕೆ ಕೊಟ್ಟಿಲ್ಲವೋ ಗೊತ್ತಿಲ್ಲ ಕೊಳಚೆ ನಿರ್ಮೂಲನೆ ಮಾಡಬೇಕಾದರೆ ಅವರನ್ನು ಅಲ್ಲಿಂದ ಓಡಿಸಿ ಬಿಟ್ಟರೆ ಆಗುವುದಿಲ್ಲ ಆ ಸ್ಥಳದಲ್ಲಿಯೇ ಸಾಧ್ಯವಾದಷ್ಟು ಹಣ ಖರ್ಚುಮಾಡಿ ಅವರಿಗೆ ಬೇಕಾದಂಥ ಅನುಕೂಲಗಳನ್ನು ಒದಗಿಸಬೇಕು. ಅದನ್ನು ಅಭಿವೃದ್ಧಿ ಪಡಿಸಬೇಕು. ಇವತ್ತು ಎಕ್ಸ್‌ಟೆನ್‌ಷನ್‌ಗಳಲ್ಲಿ ಒಂದು ದಿವಸ ನೀರು ಬರಲಿಲ್ಲ ಎಂದರೆ ಅಧ್ಯಕ್ಷರಿಗೆ ಫೋನ್ ಮಾಡುತ್ತಾರೆ, ಕಮಿಷನರ್‌ವರಿಗೆ ಫೋನ್ ಮಾಡುತ್ತಾರೆ, ಎಂಜಿನಿಯರ್‌ಗೆ ಫೋನ್ ಮಾಡುತ್ತಾರೆ. ಆದರೆ ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುವ ಜನಕ್ಕೆ ವರ್ಷಾನುಗಟ್ಟಲೆಯಿಂದ ಕುಡಿಯುವುದಕ್ಕೆ ನೀರಿಲ್ಲ. ಯಾವ ಅನುಕೂಲತೆಯೂ ಇಲ್ಲ. ದಯವಿಟ್ಟು ಇದನ್ನು ತಾವು ಮಾಡಿಸಿಕೊಡಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು —ಮಾನ್ಯ ಪಂಪಾಪತಿಯವರೇ ದಯವಿಟ್ಟು ಮುಗಿಸಿರಿ. ನಾವು ಜನತಾದವರಿಗೆ ಇಷ್ಟು ಕಾಂಗ್ರೆಸ್‌ನವರಿಗೆ ಇಷ್ಟು, ಸಿಪಿಐ (ಎಂ) ನವರಿಗೆ ಇಷ್ಟು, ಸಿಪಿಐ ನವರಿಗೆ ಇಷ್ಟು, ಬಿಜೆಪಿ ಯವರಿಗೆ ಇಷ್ಟು ಇಂಡಿಪೆಂಡೆಂಟ್ಸ್‌ಗೆ ಇಷ್ಟು ಎಂದು ಟೈಮ್ ಫಿಕ್ಸ್ ಮಾಡಬೇಕಾಗುತ್ತದೆ. ತಾವು ೩೦ ಮಿನಿಟ್ ತಗೆದುಕೊಂಡಿದ್ದೀರಿ, ಎಲ್ಲರಿಗೂ ಅವಕಾಶ ಮಾಡಿಕೊಡಬೇಕು. ತಾವು ದಯವಿಟ್ಟು ಮುಗಿಸಿರಿ.

ಶ್ರೀ ಪಂಪಾಪತಿ.—ಎಲ್ಲರಿಗೂ ಅವಕಾಶ ಮಾಡಿಕೊಡಿ, ಯಾರು ಬೇಡ ಎಂದು ಹೇಳಿದರು. ಮೂರು ದಿವಸದಿಂದ ಚರ್ಚೆ ನಡೆಯುತ್ತಿದೆ, ನಾನು ನೋಡುತ್ತಾ ಇದ್ದೇನೆ, ನಿನ್ನೆ ಕೆಲವರು ಒಂದು ಗಂಟೆ ಮಾತನಾಡಿದರು, ಇವತ್ತು ಎರಡು ಗಂಟೆ ಕಾಲ ಮಾತನಾಡಿದರು. ಆದರೆ ನಾವು ಮಾತನಾಡುವಾಗ ಈ ರೀತಿ ಮಾಡುವುದು ಸರಿಯಲ್ಲ.

ಅಧ್ಯಕ್ಷರು —ಅವಕಾಶ ಕೊಟ್ಟರೆ ಇಡೀ ಒಂದು ದಿವಸ ನೀವೇ ಮಾತನಾಡುತ್ತೀರಿ, ಆದರೆ ಉಳಿದವರು ಎಲ್ಲಿಗೆ ಹೋಗಬೇಕು ?

ಶ್ರೀ ಪಂಪಾಪತಿ.—ಅದನ್ನು ನೀವು ಮಾಡಿಲ್ಲ, ಕೆಲವರು ಮೂರು ಗಂಟೆಗಳ ಕಾಲ ಮಾತ ನಾಡಿದರು, ನಾನು ಮಾತನಾಡುವುದಕ್ಕೆ ಶುರು ಮಾಡಿ ೧೫ ನಿಮಿಷ ಆಯಿತು.

ಅಧ್ಯಕ್ಷರು. ನಿಮ್ಮೊಬ್ಬರಿಗೇ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ, ಬೇಗ ಮುಗಿಸಿ, ನೀವು ಮಾತನಾಡುವುದಕ್ಕೆ ಶುರು ಮಾಡಿ ಅರ್ಧ ತಾಸು ಆಯಿತು.

ಶ್ರೀ ಪಂಪಾಪತಿ.—ಮಾತನಾಡುವಾಗ ನೀವು ಹೀಗೆ ಮಾಡಿದರೆ, ನಾನು ಏನೂ ಮಾತ ನಾಡುವುದಕ್ಕೆ ಹೋಗುವುದಿಲ್ಲ. ಕೆಲವರು ಮಾತನಾಡಿದರೆ ವೇದವಾಕ್ಯ, ಮೇಲಿನಿಂದ ಇಳಿಯುತ್ತದೆ.

ಅಧ್ಯಕ್ಷರು.—ನೀವು ಹೇಳುವುದೂ ವೇದವಾಕ್ಯ, ಎಲ್ಲರೂ ಹೇಳುವುದೂ ವೇದವಾಕ್ಯ. ಇಲ್ಲಿರುವಂತಹ ಸದಸ್ಯರು ಏನು ಹೇಳಿದರೂ ಅದಕ್ಕೆ ಬೆಲೆ ಇದೆ, ಮಹತ್ವ ಇದೆ.

ಶ್ರೀ ಪಂಪಾಪತಿ.—ನಾವೇನು ಆರಿಸಿ ಬಂದಿಲ್ಲವೇ ?

ಅಧ್ಯಕ್ಷರು.—ಇನ್ನು ತಮಗೆ ಅವಕಾಶ ಕೊಡುವುದಕ್ಕೆ ಆಗುವುದಿಲ್ಲ.

೧-೦೦ ಪಿ. ಎಂ.

ಶ್ರೀ ಪಂಪಾಪತಿ.—ನಮಗೂ ಒಂದು ಗಂಟೆ ಕಾಲ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು.—ಅದು ಸಾಧ್ಯವಿಲ್ಲ. ನಾನು ಎಲ್ಲಾ ಪಕ್ಷದವರಿಗೂ ಸಮನಾಗಿ ಸಮಯವನ್ನು ಹಂಚಬೇಕಾಗಿದೆ.

ಶ್ರೀ ಪಂಪಾಪತಿ.—ನಾವು ಮಾತನಾಡುವಾಗಲೇ ನೀವು ಹೆಚ್ಚು ಸಮಯ ಕೊಡುವುದಿಲ್ಲ. ಅದಕ್ಕೆ ಕಾರಣವೇನು ?

ಅಧ್ಯಕ್ಷರು.—ಕೊಟ್ಟ ಸಮಯದಲ್ಲಿಯೇ ಎಲ್ಲವನ್ನೂ ಹೇಳಿ ಮುಗಿಸಬೇಕು. ಶ್ರೀ ಫರ್ನಾಂಡೀಸ್ ಅವರು ಮತ್ತು ಶ್ರೀಮತಿ ಮುಕ್ತರ್ ಉನ್ನಿಸ್ ಅವರು ಇಪ್ಪತ್ತು ನಿಮಿಷಗಳ ಅವಧಿಯಲ್ಲಿಯೇ ಎಲ್ಲವನ್ನೂ ಹೇಳಿ ಮುಗಿಸಲಿಲ್ಲವೇ ? ಅದೇ ರೀತಿ ನೀವೂ ಸಹ ಹೇಳಿ ಮುಗಿಸಿ.

ಶ್ರೀ ಯು. ಭೂಪತಿ.—ಅವರು ಹಿರಿಯ ಸದಸ್ಯರು. ಆದ್ದರಿಂದ ನಮಗಿಂತ ಅವರಿಗೆ ನೀವು ಹೆಚ್ಚು ಪ್ರಾಧಾನ್ಯತೆಯನ್ನು ಕೊಡಬೇಕಾಗುತ್ತದೆ.

ಅಧ್ಯಕ್ಷರು.—ನಿಮ್ಮ ಕಡೆಯಿಂದ ಶ್ರೀ ಕೆ. ಬಿ. ಶಾಣಪ್ಪನವರು, ಶ್ರೀ ಭೂಪತಿಯವರು ಹಾಗೂ ಪಂಪಾಪತಿ ಅವರು ಮಾತನಾಡುತ್ತಾರೆಂದು ೩ ಜನರ ಹೆಸರನ್ನು ಕೊಟ್ಟಿದ್ದೀರಿ. ಆದ್ದರಿಂದ ಎಲ್ಲರಿಗೂ ಮಾತನಾಡಲು ನಾನು ಅವಕಾಶ ಮಾಡಿಕೊಡಬೇಕಾಗಿದೆ. ಈಗ ತಾವು ಮುಕ್ತಾಯ ಮಾಡುತ್ತೀರೋ ಅಥವಾ ಬೇರೆಯವರನ್ನು ಕರೆಯಲೇ ?

ಶ್ರೀ ಯು. ಭೂಪತಿ.—ನಾವು ಮೂರು ಜನರ ಹೆಸರನ್ನು ಕೊಟ್ಟಿಲ್ಲ. ಎಲ್ಲೋ ತಪ್ಪಾಗಿ ಬರೆದುಕೊಂಡಿದ್ದಾರೆ.

ಅಧ್ಯಕ್ಷರು.—ಆಯಿತು, ತಾವು ಮುಕ್ತಾಯ ಮಾಡಿ. ನಾನು ಎಲ್ಲ ಪಕ್ಷದವರಿಗೂ ಮಾತನಾಡಲು ಅವಕಾಶ ಮಾಡಿಕೊಡಬೇಕಾಗಿದೆ.

ಶ್ರೀ ಪಂಪಾಪತಿ.—ಮಾತನಾಡಲು ಅವಕಾಶ ಇದೆ ಎಂದು ನಾವು ಇಲ್ಲಿ ಬರುವುದು. ಇಲ್ಲದಿದ್ದರೆ ಏತಕ್ಕೆ ಇಲ್ಲಿಗೆ ಬರಬೇಕು ? ಜನರ ಕಷ್ಟ ಸುಖಗಳ ಬಗ್ಗೆ ಮಾತನಾಡುವುದು ಬೇಡವೇ ? ಅದು ನಮ್ಮ ಹಕ್ಕು.

ಅಧ್ಯಕ್ಷರು.—ನಿಮಗೆ ಮಾತನಾಡಲು ಇಷ್ಟವಿಲ್ಲದಿದ್ದರೆ ಕುಳಿತುಕೊಳ್ಳಿ.

ಶ್ರೀ ಪಂಪಾಪತಿ.—ಆ ರೀತಿ ತಾವು ಹೇಳುವುದು ಸರಿಯಲ್ಲ. ಬೇರೆಯವರಿಗೆ ಅವಕಾಶ ಕೊಟ್ಟಂತೆ ನಮಗೂ ಅವಕಾಶ ಕೊಡಬೇಕು.

ಅಧ್ಯಕ್ಷರು.—ತಾವು ಮುಕ್ತಾಯ ಮಾಡಿ, ಇಲ್ಲದಿದ್ದರೆ ನಾನು ಬೇರೆಯವರನ್ನು ಕರೆಯುತ್ತೇನೆ?

ಶ್ರೀ ಪಂಪಾಪತಿ.—ಕೊಳಚೆ ಪ್ರದೇಶಗಳ ಜನರಿಗೆ ಯಾವ ಅನುಕೂಲವನ್ನು ಸಹ ಮಾಡಿಕೊಟ್ಟಿಲ್ಲ ಆದ್ದರಿಂದ ಅಲ್ಲಿನ ಜನರಿಗೆ ಎಲ್ಲಾ ಅನುಕೂಲಗಳನ್ನು ಒದಗಿಸಲು ಕೊಳಚೆ ನಿರ್ಮೂಲನಾ ಮಂಡಳಿಗೆ ಹೆಚ್ಚು ಹಣವನ್ನು ತಾವು ಒದಗಿಸಬೇಕು.

ಇನ್ನು ಗೃಹನಿರ್ಮಾಣ ಮಂಡಳಿ ಬಗ್ಗೆ ಹೇಳಬೇಕೆಂದರೆ ದಾವಣಗೆರೆ ಎಂಬ ಒಂದು ನಗರ ಇದೆ ಎಂಬುದು ಇವರಿಗೆ ಗೊತ್ತಿಲ್ಲ. ಅಲ್ಲಿಗೆ ಒಂದು ಸಲ ಬನ್ನಿ ಎಂದು ಮಾನ್ಯ ಮಂತ್ರಿಗಳನ್ನು ಕರೆದೆ. ಆದರೆ ಅವರು ಬಂದಿಲ್ಲ. ಕಳೆದ ೫ ವರ್ಷಗಳಿಂದ ಅಲ್ಲಿನ ಜನರಿಗೆ ಒಂದು ಮನೆಯನ್ನೂ ಸಹ ಕಟ್ಟಿಲ್ಲ. ಇದರಿಂದ ಹೊರಗಡೆಯಿಂದ ಬರುವ ಜನರಿಗೆ ಅಲ್ಲಿ ವಾಸ ಮಾಡಲು ಮನೆಗಳು ಸಿಗುತ್ತಿಲ್ಲ. ಇದೇ ಕಾರಣದಿಂದ ಸರ್ಕಾರದ ಅಧಿಕಾರಿಗಳು ಅಲ್ಲಿಗೆ ಬರಲು ಇಷ್ಟಪಡುವುದಿಲ್ಲ. ಬಾಡಿಗೆ ಮನೆಗಳು ಸಿಕ್ಕಿದರೂ ಸಹ ಬಾಡಿಗೆ ಬಹಳ ಜಾಸ್ತಿ ಕೊಡಬೇಕು. ಆದ್ದರಿಂದ ತಾವು ಅಲ್ಲಿ ಮನೆಗಳನ್ನು ಕಟ್ಟಿಸಬೇಕಾಗಿತ್ತು. ತಾವು ಮನೆಗಳನ್ನು ಕಟ್ಟಿಸಲು ಜಾಗ ಕೇಳಿದ್ದರೆ ಅಲ್ಲಿನ ನಗರಾಭಿವೃದ್ಧಿ ಮಂಡಳಿಯವರು ಕೊಡುತ್ತಿದ್ದರು ಹುಡ್ಕೋ ನೆರವು ಪಡೆದು ಗೃಹ ನಿರ್ಮಾಣ ಮಂಡಳಿ ಮೂಲಕ ಅಲ್ಲಿ ಏತಕ್ಕೆ ಮನೆಗಳನ್ನು ಕಟ್ಟಿಸಲಿಲ್ಲ ? ನಿಮಗೆ ಏನು ತೊಂದರೆ ಇತ್ತು ? ಅಲ್ಲಿ ಕಮ್ಯುನಿಸ್ಟ್ ಪಾರ್ಟಿಯವರು ಇದ್ದಾರೆಂಬ ಕಾರಣದಿಂದ ಮನೆಗಳನ್ನು ಕಟ್ಟಿಸಬಾರದು ಎಂಬುದು ತಮ್ಮ ಇಚ್ಛೆ ಆಗಿದೆಯೇ ? ಅದು ಬೆಳೆಯುತ್ತಿರುವ ನಗರ. ಆದ್ದರಿಂದ ಅಲ್ಲಿ ಹೆಚ್ಚು ಮನೆಗಳನ್ನು ಕಟ್ಟಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತಾವು ಅಲ್ಲಿಗೆ ಒಂದು ಸಲ ಪ್ರವಾಸದ ವೇಳೆ ಬಂದು ಅಲ್ಲಿನ ಜನರ ಕಷ್ಟಗಳನ್ನು ತಿಳಿದುಕೊಂಡು, ಅದನ್ನು ನಿವಾರಣೆ ಮಾಡಬೇಕು. ಇಲ್ಲಿಯವರೆಗೆ ಅಲ್ಲಿ ಮನೆಗಳನ್ನು ಕಟ್ಟಿಸಿಲ್ಲ. ಇನ್ನು ಮುಂದೆಯಾದರೂ ಅಲ್ಲಿ ಹೆಚ್ಚು ಮನೆಗಳನ್ನು ಕಟ್ಟಿಸಿ ಅಲ್ಲಿನ ಜನರಿಗೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಲೋಕೋಪಯೋಗಿ ಇಲಾಖೆ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ದಾವಣಗೆರೆ ಮತ್ತು ಭದ್ರಾವತಿ ನಡುವಿನ ರಸ್ತೆ ಬಹಳ ಕೆಟ್ಟು ಹೋಗಿದೆ. ನೀರಾವರಿ ನಾಲೆ ಪಕ್ಕದಲ್ಲಿ ಈ ರಸ್ತೆ ಇರುವುದರಿಂದ ಮತ್ತು ನೂರಾರು ಬಸ್‌ಗಳು ಓಡಾಡುವುದರಿಂದ ಆ ರಸ್ತೆ ಬಹಳ ಕೆಟ್ಟು ಹೋಗಿದೆ. ಇದರ ಜೊತೆಗೆ ಇದೇ ರಸ್ತೆ ಪಕ್ಕದಲ್ಲಿ ಸಕ್ಕರೆ ಕಾರ್ಖಾನೆ ಇರುವುದರಿಂದ ನೂರಾರು ಕಬ್ಬಿನ ಲಾರಿಗಳು ಸಹ ಅಲ್ಲಿ ಓಡಾಡುತ್ತವೆ. ಅಲ್ಲಿ ಅನೇಕ ಅಪಘಾತಗಳು ಸಹ ಆಗುತ್ತವೆ. ಆದ್ದರಿಂದ ಅದನ್ನು ತಪ್ಪಿಸಲು ಆ ರಸ್ತೆಯನ್ನು ಅಗಲ ಮಾಡಬೇಕು ಮತ್ತು ರಿಪೇರಿ ಸಹ ಮಾಡಿಸಬೇಕೆಂದು ಹೇಳುತ್ತೇನೆ.

ಅದೇ ರೀತಿಯಲ್ಲಿ ಶಿವಮೊಗ್ಗದಿಂದ ಒಂದು, ಹರಿಹರದ ಮೂಲಕ ಇನ್ನೊಂದು ಇದೆ. ನಾನು ಅದನ್ನು ನೋಡಿದ್ದೇನೆ. ನಾನು ಹೊಸದುರ್ಗದಿಂದ ಬೆಂಗಳೂರಿಗೆ ಬರುವಾಗ ನಾನು ನೋಡಿದ್ದೇನೆ. ವಿಶಾಲವಾದ ರಸ್ತೆಗಳು ಇರುವ ಕಡೆ ಸಂಚಾರ ಕಡಿಮೆ ಇದೆ. ಅನುಕೂಲತೆ ಇಲ್ಲದೇ ಇರುವ ಕಡೆ ಸಂಚಾರ ಜಾಸ್ತಿ ಇದೆ. ಏತಕ್ಕೆ ಹೀಗಾಗುತ್ತದೆ ? ಈ ಎರಡು ರಸ್ತೆಗಳ ಬಗ್ಗೆ ತಕ್ಕ ಕಾರ್ಯಕ್ರಮ ಕೈಗೊಂಡು ಅಭಿವೃದ್ಧಿಪಡಿಸಬೇಕೆಂದು ಹೇಳುತ್ತೇನೆ.

ಇನ್ನು ನಾಲ್ಕನೆಯ ಹೆದ್ದಾರಿ ದಾವಣಗೆರೆ. ಇದು ನಗರದ ಮಧ್ಯದಲ್ಲಿ ಹಾದುಹೋಗುತ್ತದೆ. ಇದು ಸರಿಯಲ್ಲ. ನಗರದ ಹೊರಭಾಗದಲ್ಲಿ ರಸ್ತೆ ಮಾಡಬೇಕು. ಹರಿಹರ ದಾವಣಗೆರೆ ಮಾರ್ಗ ಮಾಡಲು ಸುಮಾರು ೮-೯ ವರ್ಷವಾಯಿತು. ಅಲ್ಲಿ ಕೆಲಸ ಇನ್ನೂ ಪೂರೈಸಿಲ್ಲ. ಅವನ್ನು ಜಾಗ್ರತೆ ಪೂರೈಸಬೇಕೆಂದು ಹೇಳುತ್ತೇನೆ. ಈ ಮಾರ್ಗದಲ್ಲಿ ಅನೇಕ ಅಪಘಾತಗಳು ಆಗುತ್ತವೆ. ಅದನ್ನು ತಪ್ಪಿಸಬೇಕು. ನಗರದ ಹೊರಗಡೆ ರಸ್ತೆಗಳನ್ನು ಮಾಡಿ, ಆ ಜನರಿಗೆ ಆಗತಕ್ಕಂಥ ತೊಂದರೆಯನ್ನು ತಪ್ಪಿಸಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಏನಾಗಬೇಕು ಸರ್ಕಾರಕ್ಕೆ, ಕೇಳಬಿಡಿ.

ಶ್ರೀ ಪಂಪಾಪತಿ.—ಈ ಕೆಲಸಗಳನ್ನು ಜಾಗ್ರತೆ ಪೂರೈಸಬೇಕು. ಆ ಕಡೆ ವಾಹನವನ್ನು ಹೋಗುವ ಹಾಗೆ ಮಾಡಬೇಕು. ಇನ್ನು ನಮ್ಮ ಭಾಗದಲ್ಲಿ ಎರಡು ಲೆವೆಲ್ ಕ್ರಾಸ್ ಬರುತ್ತವೆ. ಅಲ್ಲಿ ಆಗಾಗ್ಗೆ ಅಪಘಾತಗಳು ಆಗುತ್ತಿವೆ. ನೀವು ಸೇತುವೆಗಳನ್ನು ಏನು ಮಾಡಿದ್ದೀರಿ, ಅದರ ಪಕ್ಕದಲ್ಲೇ ರಸ್ತೆ ಮಾಡುವುದಕ್ಕೆ ಸಾಧ್ಯವಿದೆ. ಇದನ್ನು ತಾವು ನೋಡಿದರೆ ಗೊತ್ತಾಗುತ್ತದೆ. ಏಕೆಂದರೆ ಅವಸರವಾಗಿ ಹೋಗುವವರು ಇರುತ್ತಾರೆ, ಆಸ್ಪತ್ರೆಗೆ ಹೋಗುವವರು ಇರುತ್ತಾರೆ. ನಾನು ನಿಮಗೆ ಬ್ರಿಡ್ಜ್ ಮಾಡಬೇಕೆಂದು ಕೇಳುವುದಿಲ್ಲ. ಅದರ ಪಕ್ಕದಲ್ಲಿಯೇ ರಸ್ತೆಯನ್ನು ಮಾಡುವುದಕ್ಕೆ ಅನುಕೂಲವಿದೆ. ಇದರಿಂದ ನೇರ ರಸ್ತೆಯನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ಎರಡು ಲೆವೆಲ್ ಕ್ರಾಸ್‌ಗಳನ್ನು ತಪ್ಪಿಸಿ ಹೋಗುವುದಕ್ಕೆ ಸಾಧ್ಯವಿದೆ. ಅದು ಕಡಿಮೆ ಖರ್ಚಿನಲ್ಲಿ ಆಗುತ್ತದೆ. ದೊಡ್ಡ ದೊಡ್ಡ ಬ್ರಿಡ್ಜ್‌ಗಳನ್ನು ಕಟ್ಟುವುದಕ್ಕೆ ಕೋಟಿಗಟ್ಟಲೆ ಹಣವನ್ನು ಖರ್ಚು ಮಾಡಿದ್ದಾರೆ. ಇಲ್ಲಿ ಸುಮಾರು ೫-೬ ಕಿ.ಮೀ. ಹೊಸ ರಸ್ತೆ ಮಾಡಬೇಕು. ಆದ್ದರಿಂದ ಅದನ್ನು ಕೂಡ ನಾವು ಮಾಡಿ, ಜನರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಅನುಕೂಲ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಈ ಸಂದರ್ಭದಲ್ಲಿ ನೀರಾವರಿ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ಪಿ.ಡಬ್ಲ್ಯೂ.ಡಿ. ಮಂತ್ರಿಗಳು ಸಾಮಾನ್ಯವಾಗಿ ಜನರಿಗೆ ಅನುಕೂಲ ಆಗತಕ್ಕಂಥ ಕೆಲಸವನ್ನು ಹೆಚ್ಚು ಜವಾಬ್ದಾರಿಯನ್ನು ವಹಿಸಿಕೊಂಡು ಅಭಿವೃದ್ಧಿಪಡಿಸಬೇಕು. ಈ ಹಣವನ್ನು ಮೋಸ ಮಾಡುವವರ ಮೇಲೆ ಕ್ರಮ ಕೈಗೊಂಡು ಮತ್ತು ಹೊಸದಾಗಿ ಅಸೆಸ್‌ಮೆಂಟ್ ಮಾಡಿ ನಗರಕ್ಕೆ ಹೆಚ್ಚು ಆದಾಯ ಬರುವಂತೆ ತಾವು ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಇಲಾಖೆ, ನಗರಾಭಿವೃದ್ಧಿ ಹಾಗೂ ಗೃಹ ನಿರ್ಮಾಣ ಇಲಾಖೆಗಳ ಮೇಲೆ ಬಂದಿರತಕ್ಕಂಥ ಬೇಡಿಕೆಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಹಾಗೆಯೇ ಕೆಲವು ಸೂಕ್ತವಾದ ಸಲಹೆಗಳನ್ನು ಈ ಸಂದರ್ಭದಲ್ಲಿ ಕೊಡುವುದಕ್ಕೆ ಇಚ್ಛೆಪಡುತ್ತೇನೆ. ನಿನ್ನೆಯಿಂದ ಅನೇಕ ಮಾನ್ಯ ಸದಸ್ಯರು ಈ ಕಡೆಯಿಂದಲೂ ಮತ್ತು ಆ ಕಡೆಯಿಂದಲೂ ಅನೇಕ ಸೂಚನೆಗಳನ್ನು ಕೊಟ್ಟಿದ್ದಾರೆ. ಮತ್ತು ವಿವರ

ಗಳನ್ನೂ ಹೇಳಿದ್ದಾರೆ. ಆದುದರಿಂದ ನಾನು ಹೆಚ್ಚು ವಿವರಗಳನ್ನು ಹೇಳಲಿಕ್ಕೆ ಹೊರಟರೆ ಬಹಳ ಸಮಯಾವು ಬೇಕಾಗುತ್ತದೆ. ಸಮಯ ಕಡಿಮೆ ಇರುವುದರಿಂದ ಕೇವಲ ಕೆಲವು ಸೂಕ್ತವಾದ ಸಲಹೆಗಳನ್ನು ಹೇಳುತ್ತೇನೆ. ನಮ್ಮ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಅನೇಕ ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ಅದರಲ್ಲೂ ವಿಶೇಷವಾಗಿ ನಗರಾಭಿವೃದ್ಧಿ ಕಾರ್ಯಗಳು ಆಗಿವೆ. ಮಾನ್ಯ ಚಂದ್ರಶೇಖರ್‌ರವರು ದಕ್ಷ ಆಡಳಿತಗಾರರು, ಅವರು ಅಭಿವೃದ್ಧಿ ಬಗ್ಗೆ ಒಂದು ಪಟ್ಟಿಯನ್ನೇ ಕೊಟ್ಟಿದ್ದಾರೆ. ಅದರ ಬಗ್ಗೆ ನಾನು ವಿಶೇಷವಾಗಿ ಹೇಳಬಯಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಸಾರ್ಕ್ ಸಮ್ಮೇಳನ ನಡೆದಿದ್ದು ತಮಗೆ ಗೊತ್ತೇ ಇದೆ. ಈ ಸಾರ್ಕ್ ಸಮ್ಮೇಳನ ಬಂದಿದ್ದರಿಂದ ಬೆಂಗಳೂರು ನಗರದ ಸೌಂದರ್ಯ ಇಮ್ಮಡಿಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಆದರೆ ಅಲ್ಲಿ ಇಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನಗರ ಸಭೆಗಳಲ್ಲಿ ಕೆಲವು ಲೋಪದೋಷಗಳು ಕಾಣುತ್ತಾ ಇವೆ. ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿ ಅನೇಕ ರಸ್ತೆಗಳಿವೆ. ಕೆಲವು ಕಡೆ ಆ ರಸ್ತೆಗಳನ್ನು ಉಪಯೋಗಿಸತಕ್ಕಂಥ ಸ್ಥಿತಿಯಲ್ಲಿಲ್ಲ. ಇದಕ್ಕೆ ಕಾರಣ, ಅನೇಕ ಕಂಟ್ರಾಕ್ಟರ್ಸ್ ಕಬ್ಬನ್‌ಪಾರ್ಕ್ ಮುಂತಾದ ಕಡೆ ಅಂದರೆ ಚೆನ್ನಾಗಿರುವ ಕಡೆ ಪ್ರತಿವರ್ಷ ಟಾರ್ ಹಾಕಿ ರಸ್ತೆಗಳನ್ನು ಮಾಡುತ್ತಾರೆ. ಆದರೆ ಅತೀ ಅವಶ್ಯಕವಾದ ಕಡೆ ಮಾಡುವುದಿಲ್ಲ. ವೆಸ್ಟ್ ಆಫ್ ಕಾರ್ಡ್ ರೋಡ್‌ನಲ್ಲಿ ಸಾಮಾನ್ಯವಾಗಿ ಪ್ರಯಾಣ ಮಾಡಿದರೆ ಕಾರು ಮುಂತಾದ ವಾಹನಗಳು ಹೋದರೆ ನಟ್ ಬೋಲ್ಟ್ ಉಳಿಯುವುದಿಲ್ಲ; ಹಲವಾರು ಹಳ್ಳಗಳು ಅಲ್ಲಿ ಬಿದ್ದಿವೆ. ಇಂತಹ ಕಡೆ ರಸ್ತೆಯನ್ನು ಮಾಡುವುದಕ್ಕೆ ಆದ್ಯತೆ ಕೊಡುವುದಿಲ್ಲ; ಆದರೆ ಬೇರೆ ಕಡೆ ಆದ್ಯತೆ ಕೊಡುತ್ತಾರೆ. ಈ ರೀತಿ ಕಂಟ್ರಾಕ್ಟರ್ಸ್ ಅನುಕೂಲಕ್ಕೋಸ್ಕರ ಹೆಚ್ಚು ಲಾಭ ಸಿಗಬೇಕು ಎನ್ನುವ ಕಾರಣದಿಂದ ಅತೀ ಅವಶ್ಯಕವಾಗಿ ಆಗಬೇಕಾದ ಕಡೆ ಕೆಲಸಗಳನ್ನು ಮಾಡುವುದನ್ನು ಬಿಟ್ಟು ಎಲ್ಲಿ ರಸ್ತೆಗಳು ಚೆನ್ನಾಗಿವೆ ಅಲ್ಲಿ ಮಾಡತಕ್ಕಂಥ ಮನೋಭಾವವನ್ನು ಮೊದಲು ಹೋಗಲಾಡಿಸಬೇಕು. ಇದರ ಬಗ್ಗೆ ಹೆಚ್ಚು ಗಮನಹರಿಸಬೇಕು ಎಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ನಾನು ಕಳೆದ ಸಾರಿ ಹೇಳುತ್ತಿದ್ದೆ, ಈ ರೀತಿ ಹಳ್ಳಕೊಳ್ಳಗಳು ಇದ್ದಾಗ ಒಂದು ಸಲ ಮಳೆ ಬಿದ್ದಾಗ ಬೆಂಗಳೂರು ನಗರದಲ್ಲಿ ಯಾವುದೇ ವಹಿಕಲ್ಸ್ ಮೂವ್ ಆಗಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಹಳ್ಳಕೊಳ್ಳಗಳನ್ನು ರಿಪೇರಿ ಮಾಡುವುದಕ್ಕೆ ಮೊಬೈಲ್ ಯೂನಿಟ್ ಇಟ್ಟುಕೊಂಡರೆ ಒಳ್ಳೆಯದು, ರಸ್ತೆಯಲ್ಲಿ ಎಲ್ಲೆಲ್ಲಿ ಹಳ್ಳಕೊಳ್ಳಗಳು ಆಗಿರುತ್ತವೆ ಅಲ್ಲಿ ತಕ್ಷಣ ಪ್ಯಾಚಪ್ ಮಾಡುವುದಕ್ಕೆ ಮೊಬೈಲ್ ಯೂನಿಟ್ ಇರಬೇಕು. ೪ ಡಿವಿಜನ್ ಮಾಡಿ ಮೊಬೈಲ್ ಯೂನಿಟ್ ಇದ್ದರೆ ಹೆಚ್ಚು ಸಮರ್ಪಕವಾಗಿ ಹಳ್ಳಕೊಳ್ಳಗಳನ್ನು ಮುಚ್ಚಬಹುದು. ಆದುದರಿಂದ ತಕ್ಷಣ ಇದರ ಕಡೆ ಗಮನಹರಿಸಿ ಮೊಬೈಲ್ ಯೂನಿಟ್ ಮಾಡಬೇಕು ಎಂದು ನಾನು ಸಲಹೆ ನೀಡುತ್ತೇನೆ.

ಇವತ್ತಿನ ದಿವಸ ಬೆಂಗಳೂರು ನಗರ ಹೆಚ್ಚು ಜನಸಂಖ್ಯೆಯ ಒತ್ತಡದಿಂದ ಇಕಲಾಜಿಕಲ್ ಬ್ಯಾಲೆನ್ಸನ್ನು ಕಳೆದುಕೊಳ್ಳುತ್ತಿದೆ. ಹಿಂದೆ ಯಾವ ರೀತಿ ಇದನ್ನು ಏರ್ ಕಂಡೀಷನ್ ಸಿಟಿ ಎಂದು ಬೆಂಗಳೂರು ನಗರವನ್ನು ಕರೆಯುತ್ತಿದ್ದರೋ ಆ ಮಾತು ತಪ್ಪಾಗುತ್ತಿದೆ. ಪಾರ್ಥೇನಿಯಂ ಕಳೆ ಇಡೀ ಬೆಂಗಳೂರು ನಗರದ ಸೌಂದರ್ಯವನ್ನು ಹಾಳು ಮಾಡುತ್ತಿದೆ. ಇದರಿಂದ ಜನ ಆರೋಗ್ಯ ಹಾಳಾಗುತ್ತಿದೆ ಎಂದು ಡಾಕ್ಟರ್ಸ್ ಹೇಳುತ್ತಾರೆ. ಈ ವಿಚಾರದಲ್ಲಿ ನಾನು ಪದೇ ಪದೇ ಹೇಳುತ್ತಾ ಇದ್ದೇನೆ. ಮಾನ್ಯ ಗುಂಡೂರಾಯರ ಕಾಲದಲ್ಲಿ ಪಾರ್ಥೇನಿಯಂ ಕಳೆಯನ್ನು ಕಿತ್ತೊಗೆಯಲು ಮಾಡಿದ ಪ್ರಚಾರಕ್ಕೆ ಖರ್ಚು ಮಾಡಿದಂಥ ಹಣವನ್ನು ಸಮರ್ಪಕವಾಗಿ ಉಪಯೋಗಿಸಿದ್ದರೆ ಒಂದು ಪಾರ್ಥೇನಿಯಂ ಗಿಡವೂ ಇಲ್ಲದಂತೆ ನಾಶ ಮಾಡಬಹುದಾಗಿತ್ತು. ಒಂದು ಸಣ್ಣ ಉದಾಹರಣೆಯನ್ನು ಕೊಡುವುದಾದರೆ, ಮಳೆ ಬಂದರೆ ಅದು ಬಹಳ ಚೆನ್ನಾಗಿ ಬೆಳೆಯುತ್ತದೆ, ಅದಕ್ಕೆ ಗೊಬ್ಬರ ಏನೂ ಬೇಕಾಗಿಲ್ಲ, ತೇವಾಂಶ ಇದ್ದರೆ ಸಾಕು ಬಹಳ ಚೆನ್ನಾಗಿ ಸುಲಭವಾಗಿ ಬೆಳೆಯುತ್ತದೆ. ಅದನ್ನು ನಾಶ ಪಡಿಸಲಿಕ್ಕೆ ನಾನು ಒಂದು ಫಾರ್ಮುಲಾ ಹೇಳಿದ್ದೆ. ನಮ್ಮ ನಗರ ಸಭೆಯ ಅಧ್ಯಕ್ಷರಿಗೂ ಕೂಡ ನಾನು ಒಂದು ಹೇಳಿಕೆ ಮೂಲಕ ಲಿಖಿತ ಮೂಲಕ ಫಾರ್ಮುಲಾ ಕೊಟ್ಟಿದ್ದೆ. ಆ ಫಾರ್ಮುಲಾ ಏನೆಂದರೆ ಇವತ್ತು ಮಳೆ ಬಂದಂಥ ಸಂದರ್ಭದಲ್ಲಿ ೧೫ ದಿವಸ ಟೈಂ ಕೊಟ್ಟು ಕೆಲಸವಿಲ್ಲದೇ ಇರತಕ್ಕಂಥ ಹುಡುಗರನ್ನು ನಿಯೋಜಿಸಬೇಕು. ಇವತ್ತಿನ ದಿವಸ ಅನೇಕ ಕೆಲಸವಿಲ್ಲದೇ ಇರತಕ್ಕ ಬಡ ಹುಡುಗರು ಗೋಣೀಚೀಲವನ್ನು ಹೆಗಲ ಮೇಲೆ ಹಾಕಿಕೊಂಡು ಕಸದ ತೊಟ್ಟಿಗಳಲ್ಲಿ ಪ್ಲಾಸ್ಟಿಕ್ ಪೇಪರ್ ಮುಂತಾದ ವಸ್ತುಗಳನ್ನು ಹೆಕ್ಕುತ್ತಾ ಇರುತ್ತಾರೆ. ಗೊಬ್ಬರದ ವಾಸನೆಯನ್ನು ತಡೆದುಕೊಂಡು ಪೇಪರ್‌ಗಳನ್ನು ಹೆಕ್ಕುತ್ತಾ ಇರುತ್ತಾರೆ. ಆ ಪೇಪರ್ ಬೆಲೆ ಕೆ.ಜಿ. ಗೆ ೪೫ ಪೈಸೆ. ಅವರು ಬೆಳಗ್ಗೆಯಿಂದ ಸಾಯಂಕಾಲದವರೆಗೂ ದುಡಿದರೂ ೫-೬ ರೂಪಾಯಿ ದೊರೆಯಬಹುದು. ಆದ್ದರಿಂದ ಮಾನ್ಯ ಸಚಿವರು, ನಗರಸಭೆಯವರು ಆದೇಶ

ನೀಡಿದ ಪಕ್ಷದಲ್ಲಿ ಪಾರ್ಥೇನಿಯಂ ಕಳೆಯನ್ನು ತೆಗೆಯಲು ಇಂತಹವರನ್ನು ನೇಮಿಸಬಹುದು. ಒಬ್ಬ ಮನುಷ್ಯ ದಿನಕ್ಕೆ ಮಿನಿಮಂ ೧೦–೧೨ ರೂಪಾಯಿ, ೧೫–೨೦ ರೂಪಾಯಿಗಳನ್ನು ಸಂಪಾದನೆ ಮಾಡಬಹುದು. ಒಬ್ಬ ಹುಡುಗ ಒಂದು ಪಾರ್ಥೇನಿಯಂ ಕಳೆಯನ್ನು ಬುಡ ಸಹಿತ ಕಿತ್ತುಕೊಟ್ಟರೆ ೨೫ ಪೈಸೆ ಅಥವಾ ಒಂದು ರೂಪಾಯಿ ಕೊಡುತ್ತೇವೆ ಎಂದು ಹೇಳಲಿ. ಇದಕ್ಕೆ ಒಂದು ಸಮಿತಿ ಮಾಡಿ ಇಷ್ಟು ಕೊಡಬಹುದು ಎಂದು ಅವರೇ ತೀರ್ಮಾನ ಮಾಡಲಿ, ಅದನ್ನು ಕೊಂಡುಕೊಳ್ಳುತ್ತೇವೆ ಎಂಬ ಘೋಷಣೆಯನ್ನು ಪೇಪರಿನಲ್ಲಿ ಹಾಕಿದರೆ ಕೆಲಸವಿಲ್ಲದೇ ಇರತಕ್ಕ ಹುಡುಗರು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವುದಕ್ಕೋಸ್ಕರ ಬರುತ್ತಾರೆ. ನಿಮ್ಮ ಮನೆಯ ಕಾಂಪೌಂಡ್‌ನಲ್ಲಿ ಪಾರ್ಥೇನಿಯಂ ಗಿಡ ಇದ್ದರೆ ಗೋಡೆ ಹಾರಿ ಬಂದು ಕಿತ್ತುಕೊಂಡು ಹೋಗುತ್ತಾರೆ. ಮಳೆಗಾಲದಲ್ಲಿ ೩ ತಿಂಗಳ ಕಾಲ ಈ ಕೆಲಸ ಆದರೆ ೨–೩ ವರ್ಷಗಳಲ್ಲಿ ಇಡೀ ಬೆಂಗಳೂರಿನಲ್ಲಿ ಪಾರ್ಥೇನಿಯಂನ ಒಂದು ಕಳೆಯೂ ಇಲ್ಲದಂತಾಗುತ್ತದೆ. ಈ ಸಲಹೆಯನ್ನು ಮಾನ್ಯ ಸಚಿವರು ಒಪ್ಪುವುದಾದರೆ, ಇದನ್ನು ಕಾರ್ಯರೂಪಕ್ಕೆ ತರುವುದಾದರೆ ಬೆಂಗಳೂರು ನಗರದ ಸೌಂದರ್ಯ ಹೆಚ್ಚಿ ಇಮ್ಮಡಿಸಿ ಇಕಲಾಜಿಕಲ್ ಬ್ಯಾಲೆನ್ಸನ್ನು ಮೇಂಟೈನ್ ಮಾಡಬಹುದು ಎಂದು ನಾನು ಹೇಳುತ್ತೇನೆ.

ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯ್ತಿಗಳು ಅಸ್ತಿತ್ವಕ್ಕೆ ಬಂದಮೇಲೆ, ಲೋಕೋಪಯೋಗಿ ಇಲಾಖೆ ನಿರ್ವಹಿಸುತ್ತಿದ್ದ ಬಹುಪಾಲು ಕೆಲಸಗಳು ಜಿಲ್ಲಾ ಪರಿಷತ್ತಿಗೆ ವರ್ಗವಾಗಿವೆ, ಇವತ್ತು ನಮ್ಮ ನಂಜನಗೂಡು ಮತ್ತು ಹುಲ್ಲಳ್ಳಿ ಮಧ್ಯೆ ಸುಮಾರು ವಾಹನಗಳ ಓಡಾಡುತ್ತಿವೆ. ಸಾವಿರಾರು ಜನ ಬಸುಗಳಲ್ಲಿ ಪ್ರಯಾಣ ಮಾಡುತ್ತಾರೆ. ಆದರೆ, ಇವತ್ತು ಆ ರಸ್ತೆಯಲ್ಲಿ ಒಂದು ವಾಹನ ಕೂಡ ಹೋಗುವುದಕ್ಕೆ ಆಗುವುದಿಲ್ಲ ಜಿಲ್ಲಾ ಪರಿಷತ್‌ಗೆ ಹೋಗಿ ಕೇಳಿದರೆ, ಲೋಕೋಪಯೋಗಿ ಇಲಾಖೆಯವರನ್ನು ಹೋಗಿ ಕೇಳಿ ಎಂದು ಹೇಳುತ್ತಾರೆ. ಈ ವಿಚಾರದಲ್ಲಿ ಕ್ರಮಬದ್ಧವಾದ ಆದೇಶವನ್ನು ನೀಡಿಲ್ಲದೇ ಇರುವುದರಿಂದ ರಸ್ತೆಗಳ ದುರಸ್ತಿಯಾಗದೇ, ವಾಹನಗಳು ಹೋಗುವುದಕ್ಕೆ ಅನುಕೂಲ ಇಲ್ಲದೇ ಜನರಿಗೆ ತೊಂದರೆಯಾಗಿದೆ. ಇವತ್ತು ಜಿಲ್ಲಾ ಪರಿಷತ್ತು ಬಂದಮೇಲೆ ಲಂಚ ಎನ್ನುವುದು ಕಡಿಮೆಯಾಗಿದೆ. ಜೆ. ಇ. ಗಳನ್ನು ಮತ್ತು ಎ. ಇ.ಗಳನ್ನು ಶಾಸಕರುಗಳು ೩ ತಿಂಗಳಿಗೆ, ೬ ತಿಂಗಳಿಗೆ ಒಮ್ಮೆ ನೋಡುತ್ತಿದ್ದರು.

ಶ್ರೀ ಯು. ಭೂಪತಿ.—ಲಂಚ ಕಡಿಮೆಯಾಗಿಲ್ಲ. ಜಾಸ್ತಿಯಾಗಿದೆ.

ಶ್ರೀ ಡಿ. ಟಿ. ಜಯಕುಮಾರ್.—ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯ್ತಿ ಪ್ರಧಾನರುಗಳು ಎಡಬಿಡದೇ ಅಧಿಕಾರಿಗಳನ್ನು ಕೆಲಸ ಕಾರ್ಯಗಳ ಬಗ್ಗೆ ಪ್ರಶ್ನೆ ಮಾಡುತ್ತಿರುವುದರಿಂದ ಕೆಲಸಗಳು ಆಗುತ್ತಿವೆ. ಇವತ್ತು ೮೫ ಪರ್ಸೆಂಟ್ ಕೆಲಸಗಳು ಚೆನ್ನಾಗಿ ನಡೆಯುತ್ತವೆ. ಲೋಕೋಪಯೋಗಿ ಇಲಾಖೆಗೆ ಸಾಕಷ್ಟು ಹಣ ಇಲ್ಲದೆ, ಕಾಮಗಾರಿ ಕೆಲಸಗಳು ನಡೆಯುತ್ತಿಲ್ಲ ಕೆಲಸ ನಿಂತು ಹೋಗಿದೆ. ಆದಷ್ಟು ಹೆಚ್ಚು ಹಣಕೊಟ್ಟು ಲೋಕೋಪಯೋಗಿ ಕೆಲಸವನ್ನು ತೀವ್ರವಾಗಿ ಮಾಡಿಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಗೃಹ ನಿರ್ಮಾಣದ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಪ್ರತಿಯೊಬ್ಬ ಮನುಷ್ಯನಿಗೂ ಒಂದು ಸೂರು ಬೇಕು. ಆಹಾರ ಬಟ್ಟೆ ಎಷ್ಟು ಮುಖ್ಯವೋ ಹಾಗೆ ಸೂರು ಕೂಡ ಅಷ್ಟೇ ಮುಖ್ಯ. ಇವತ್ತು ಗೃಹ ನಿರ್ಮಾಣದ ಬಗ್ಗೆ ಪ್ರಗತಿಯನ್ನು ಸಾಧಿಸುವುದಕ್ಕೆ ಆಗುತ್ತಿಲ್ಲ ಬಡ ಜನರಿಗೆ ಐ. ಆರ್. ಡಿ. ಪಿ ಎನ್. ಆರ್. ಇ. ಪಿ. ಯೋಜನೆ ಮೂಲಕ ಮನೆ ಕಟ್ಟಿಸಿಕೊಡತಕ್ಕ ಕಾರ್ಯಗಳು ನಡೆಯುತ್ತಿವೆ. ಆದರೆ ಬರೀ ಪಟ್ಟಣ ಪ್ರದೇಶಗಳಲ್ಲಿ ಮಾತ್ರ ಮನೆಗಳನ್ನು ಕಟ್ಟಿಸಿಕೊಡತಕ್ಕ ಕಾರ್ಯ ನಡೆಯುತ್ತಿದೆ. ಹಳ್ಳಿಗಾಡಿನಲ್ಲಿ ಹೋಬಳಿ ಮಟ್ಟದಲ್ಲಿ ಜಿಲ್ಲಾಪರಿಷತ್ ಮಟ್ಟದಲ್ಲಿ ೨೦೦–೩೦೦ ಮನೆಗಳನ್ನು ಕಟ್ಟುವುದರ ಮೂಲಕ ಬಡವರಿಗೆ ಮಧ್ಯಮ ವರ್ಗದವರಿಗೆ ಮನೆಗಳನ್ನು ಕಟ್ಟಿಸಿಕೊಡತಕ್ಕ ಕಾರ್ಯಕ್ರಮವನ್ನು ರೂಪಿಸಬೇಕು. ಸಾಧ್ಯವಾದರೆ ವಿಶ್ವಬ್ಯಾಂಕಿನಿಂದ ಹಣ ತೆಗೆದುಕೊಂಡು ಗ್ರಾಮೀಣ ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಪಟ್ಟಣದಲ್ಲಿರತಕ್ಕವರು ಮಾತ್ರ ಒಳ್ಳೆಯ ಮನೆಗಳಲ್ಲಿ ವಾಸ ಮಾಡಬೇಕೆ? ಹಳ್ಳಿ ರೈತರನ್ನು ಮುಂದುವರಿಸಬೇಕು. ಹಳ್ಳಿಗಳನ್ನು ಉದ್ಧಾರ ಮಾಡಬೇಕೆಂದು ಮಾತನಾಡುತ್ತೇವೆ. ಹಳ್ಳಿ ಉದ್ಧಾರವಾದರೆ ಮಾತ್ರ ದೇಶ ಉದ್ಧಾರವಾಗುತ್ತದೆಂದು ಹೇಳುತ್ತೇವೆ. ಆದರೆ, ಈ ತಾರತಮ್ಯ ಏತಕ್ಕೆ ಇದನ್ನು ಹೋಗಲಾಡಿಸುವ ಬಗ್ಗೆ ಮಾನ್ಯ ಗೃಹ ನಿರ್ಮಾಣಮಂತ್ರಿಗಳು ಆಸಕ್ತಿ

ವಹಿಸಿ, ಹಳ್ಳಿಗಳಲ್ಲಿ ಹೆಚ್ಚು ಹೆಚ್ಚು ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಇನ್ನು ನಗರಗಳಲ್ಲಿ ಇತ್ತೀಚೆಗೆ ಪಾರ್ಕುಗಳು ಕಡಿಮೆಯಾಗುತ್ತಿವೆ. ಮೈಸೂರಿನಲ್ಲಿ ಚೆಲುವಾಂಬ ಪಾರ್ಕು ಇತ್ತು. ನಂಜನಗೂಡಿನಲ್ಲಿ ಬ್ರಿಟಿಷರ ಕಾಲದಿಂದ ಸಂಭಾಷ್ ಪಾರ್ಕ್ ಎಂದು ಇದೆ. ಅದರಲ್ಲಿ ಇವತ್ತು ಒಂದು ಗಿಡವೂ ಇಲ್ಲ. ಮುನಿಸಿಪಾಲಿಟಿಯವರು ಹಿಂದೆ ಪಾರ್ಕ್‌ಗಳನ್ನು ಚೆನ್ನಾಗಿ ಮೆಂಟೆಯಿನ್ ಮಾಡುತ್ತಿದ್ದರು. ಈಗ ಮಾಡುತ್ತಿಲ್ಲ. ಇದರ ಬಗ್ಗೆ ತಾವು ಸೂಕ್ತ ಆದೇಶ ಕೊಡಬೇಕೆಂದು ಹೇಳುತ್ತೇನೆ. ಇವತ್ತು ಮುನಿಸಿಪಾಲಿಟಿಗಳಿಗೆ ಮುಖ್ಯವಾಗಿರತಕ್ಕ ಕೊರತೆ ಏನೆಂದರೆ, ಆಕ್ಟ್ರಾಯಿ ನಿಂತುಹೋದಮೇಲೆ ಸಾಕಷ್ಟು ವರಮಾನ ಇಲ್ಲದೇ ತೊಂದರೆಗೆ ಒಳಗಾಗಿವೆ. ಬರತಕ್ಕಂಥ ವರಮಾನ ಇರತಕ್ಕ ಸಿಬ್ಬಂದಿ ಸಂಬಳಕ್ಕೆ ಸಾಕಾಗುತ್ತಿಲ್ಲ. ಇದರಿಂದಾಗಿ ಸ್ಥಳೀಯ ಸಂಸ್ಥೆಗಳಿಗೆ ಬರತಕ್ಕ ವರಮಾನ ಏನಿದೆ ಇದು ಅಲ್ಲಿರತಕ್ಕ ಸಿಬ್ಬಂದಿ ವರ್ಗದವರಿಗೆ ಸಂಬಳವನ್ನು ಕೊಡುವುದಕ್ಕೂ ಸಾಲುತ್ತಿಲ್ಲ. ಆದ್ದರಿಂದ ನಾನು ತಮ್ಮ ಮೂಲಕ ಸರ್ಕಾರದಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನುಮುಂದೆ ಪ್ರಜಾಸಂಖ್ಯೆಗನುಗುಣವಾಗಿ ಅಥವಾ ಪಟ್ಟಣ ಕೇಂದ್ರದ ಸಂಖ್ಯೆಗನುಗುಣವಾಗಿ ಹೆಚ್ಚು ಹೆಚ್ಚು ಹಣವನ್ನು ಕೊಡುವುದರ ಮೂಲಕ ಪಟ್ಟಣದಲ್ಲಿ ತಾವು ಕೊಡುತ್ತಿರುವ ಸೌಲಭ್ಯಗಳಂತೆಯೆ ಇವರಿಗೂ ಸೌಲಭ್ಯಗಳನ್ನು ಒದಗಿಸಲು ವ್ಯವಸ್ಥೆ ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಂಡು ಇಷ್ಟು ಸಲಹೆಗಳನ್ನು ನೀಡಲು ನನಗೆ ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಲ್. ಉಸ್ತಾದ್ (ಬಿಜಾಪುರ).—ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಈ ನಗರಾಭಿವೃದ್ಧಿ, ರಸ್ತೆಗಳು ಹಾಗೂ ಕಟ್ಟಡಗಳ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಕಾರ್ಪೋರೇಷನ್‌ಗಳು. ಮುನಿಸಿಪಾಲಿಟಿಗಳು ಹಿಂದೆ ಯಾವ ಪ್ರಕಾರ ಕೆಲಸವನ್ನು ಬಹಳ ಸುಗಮವಾಗಿ ಮಾಡುತ್ತಿದ್ದುವೋ ಅದೇ ಪ್ರಕಾರ ಇವತ್ತು ಅವು ತಮ್ಮ ಕೆಲಸಗಳನ್ನು ಮಾಡುವುದನ್ನು ನಾವು ನೋಡುತ್ತಿಲ್ಲ. ಇದು ಏತಕ್ಕೆ ಎಂದು ನಾವು ಇದನ್ನು ಕೂಲಂಕುಷವಾಗಿ ವಿಚಾರ ಮಾಡಿದರೆ ಮೊದಲು ಈ ಮುನಿಸಿಪಾಲಿಟಿಗಳಿಗೆ ಬಹಳ ಇನ್‌ಕಂ ಇತ್ತು. ಆಕ್ಟ್ರಾಯ್ ಮೂಲಕ ಏನು ಆದಾಯ ಬರುತ್ತಿತ್ತೋ ಅದು ಬಂದ್ ಆದನಂತರ ರಾಜ್ಯದಲ್ಲಿರತಕ್ಕ ಬಹಳಷ್ಟು ಮುನಿಸಿಪಾಲಿಟಿಗಳು ಏನೇನೂ ಕೆಲಸವನ್ನು ಮಾಡುವುದಕ್ಕೆ ಹೆತ್ತಿಲ್ಲ ಸ್ಕೂಲ್ ಕಟ್ಟಡಗಳ ಕೆಲಸವಾಗಲಿ, ಕುಡಿಯುವ ನೀರಿನ ಸರಬರಾಜಿನ ವ್ಯವಸ್ಥೆಯಾಗಲಿ, ರಸ್ತೆಗಳ ಕೆಲಸವಾಗಲಿ ಮೊದಲು ಇದ್ದಂಥ ಮುನಿಸಿಪಾಲಿಟಿಗಳು ಏನು ಕೆಲಸಗಳನ್ನು ಮಾಡಿದ್ದುವೊ ಆ ಕೆಲಸಗಳನ್ನು ಇವತ್ತು ಮೇಂಟೇನ್ ಮಾಡುವುದಕ್ಕೆ ಆಗುತ್ತಿಲ್ಲ. ಆದ್ದರಿಂದ ನನ್ನ ಸೂಚನೆ ಸರ್ಕಾರಕ್ಕೆ ಏನೆಂದರೆ ಈ ಮುನಿಸಿಪಾಲಿಟಿಗಳು ಚೆನ್ನಾಗಿ ಕೆಲಸಮಾಡಬೇಕಾದರೆ ಆಕ್ಟ್ರಾಯ ವ್ಯವಸ್ಥೆಯನ್ನು ಪುನಃ ಸ್ಟಾರ್ಟ್ ಮಾಡಬೇಕು. ಏಕೆಂದರೆ ನಮ್ಮ ಬಿಜಾಪುರ ಮುನಿಸಿಪಾಲಿಟಿಯ ಬಗ್ಗೆ ಒಂದು ಮಾತನ್ನು ಹೇಳುವುದಾದರೆ ಕಳೆದ ೪ ತಿಂಗಳುಗಳಿಂದ ಅದರ ಸ್ವೀಪರ್ಸ್‌ಗೆ ಸಂಬಳವನ್ನು ಕೊಡುವುದಕ್ಕೆ ಅವರಲ್ಲಿ ಹಣ ಇಲ್ಲ. ಅವರಿಗೆ ಕೊಡಬೇಕಾದ ಹಣದಲ್ಲಿ ಅವರ ಹಿಂದಿನ ಬಾಕಿಯನ್ನು ಮುರಿದುಕೊಂಡು ಕೊಟ್ಟಮೇಲೆ ಅವರು ತಮ್ಮ ಸಿಬ್ಬಂದಿಗೆ ಸಂಬಳವನ್ನು ಕೊಡುವುದಕ್ಕೆ ಹಣ ಇಲ್ಲ.

ಮಾನ್ಯ ಅಧ್ಯಕ್ಷರೆ ಇನ್ನು ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ ಕಳೆದ ಸಾರಿ ನಾನು ಇಲ್ಲಿಯೇ ಇದ್ದುಕೊಂಡು ಹೋಳಿ ಹುಣ್ಣಿಮೆಯನ್ನು ಮಾಡಿದ್ದೆ. ಏಕೆಂದರೆ ನಮ್ಮಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆ ಇದೆ. ಅಲ್ಲಿಯ ಜನರು ಹಗಲೂ, ರಾತ್ರಿ ಎನ್ನದೆ ಕೊಡಗಳನ್ನು ತೆಗೆದುಕೊಂಡು ನೀರಿಗಾಗಿ ಬಹಳ ದೂರ ಹೋಗಿ ತರುತ್ತಿದ್ದುದನ್ನು ನಾನು ನೋಡಿದ್ದೆ. ಇವತ್ತೂ ಅದೇ ಪರಿಸ್ಥಿತಿ ಇದೆಯೆಂದು ಹೇಳಬಹುದು. ಆದರೆ ಅವತ್ತು ಇದ್ದಷ್ಟು ನೀರಿನ ಬವಣೆಯನ್ನು ನಾನು ಹುಟ್ಟಿದಾಗಿನಿಂದಲೂ ನೋಡಿರಲಿಲ್ಲ. ಆದ್ದರಿಂದ ನಾನು ಇವತ್ತು ಈ ಸರ್ಕಾರದಲ್ಲಿ ಅಂ ಮುಖ್ಯವಾಗಿ ಕೇಳಿಕೊಳ್ಳುವುದೇನೆಂದರೆ ನಮ್ಮಲ್ಲಿ ಏನೇನು ಕುಡಿಯುವ ನೀರಿನ ಯೋಜನೆಗಳಿವೆ ಅವೆಲ್ಲವನ್ನೂ ಪೂರೈಸಿಕೊಡಬೇಕೆಂದು ಒತ್ತಾಯಿಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಚಾರವನ್ನು ಹೇಳುವುದಾದರೆ ೧೯೫೬ರಲ್ಲಿ ರೀ ಆರ್ಗನೈಸೇಷನ್ ಆಯಿತು. ಆದರ ಪ್ರಕಾರ ನಮ್ಮ ಜಿಲ್ಲೆ ಮಹಾರಾಷ್ಟ್ರದ ಬಾರ್ಡರ್‌ನಲ್ಲಿದೆ. ನನಗೆ ತಿಳಿದಮಟ್ಟಿಗೆ ಸೊಲ್ಲಾಪುರದಲ್ಲಿ ಕುಡಿಯುವ ನೀರಿನ ಸರಬರಾಜು ಬಹಳ ಚೆನ್ನಾಗಿದೆ. ನಾವು

ಮಹಾರಾಷ್ಟ್ರದಲ್ಲೇ ಇದ್ದಿದ್ದರೆ ಚೆನ್ನಾಗಿರುತ್ತಿತ್ತೇನೋ ಎಂದು ಒಂದೊಂದು ಸಾರಿ ಅನಿಸುತ್ತದೆ. ಸೊಲ್ಲಾಪುರ ಮತ್ತು ಬಿಜಾಪುರಗಳು ಬಹಳ ಹತ್ತಿರ ಇವೆ. ನಾನು ಸರ್ಕಾರದವರನ್ನು ಕೇಳಿಕೊಳ್ಳುವುದೇನೆಂದರೆ ಇವತ್ತು ನಾವು ನಮ್ಮ ಹೊಟ್ಟೆಗೆ ಅನ್ನವನ್ನು ಕೊಡಿ, ಉಡುವುದಕ್ಕೆ ಬಟ್ಟೆಯನ್ನು ಕೊಡಿ ಎಂದು ಕೇಳುವುದಿಲ್ಲ. ಕುಡಿಯುವುದಕ್ಕೆ ನೀರನ್ನು ಕೊಡಿ ಎಂದು ನಾವು ಕೇಳುತ್ತಿದ್ದೇವೆ.

ಇನ್ನು ಎರಡನೆಯದಾಗಿ, from Kolhar barrage to Bijapur one additional pipe line ಸಲುವಾಗಿ ಈಗಾಗಲೇ ನಮ್ಮ ಇಂಜನಿಯರ್‌ಗಳು ಟೆಂಟೇಟೀವ್ ಪ್ಲಾನ್‌ನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದಾರೆ. ಅದರ ವೆಚ್ಚ ೧೨ ಕೋಟಿ ರೂಪಾಯಿಗಳು.

ಇನ್ನು ಮೂರನೆಯದಾಗಿ ೩ ಎಲಿವೇಟೆಡ್ ರಿಸರ್ವಾಯರ್ ನಮ್ಮ ಬಿಜಾಪುರ ನಗರದ ಸಲುವಾಗಿ ಈ ಸರ್ಕಾರದಲ್ಲಿ ಪೆಂಡಿಂಗ್ ಇದೆ. ಇದನ್ನೂ ಕೂಡ ಆದಷ್ಟುಬೇಗ ಮಾಡಿಸಿಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ ಈಗ ನೀರಿನ ಬಗ್ಗೆ ಹೇಳಿದ್ದಾಯಿತು ಎರಡನೆಯದಾಗಿ ರೋಡ್‌ಗಳ ಬಗ್ಗೆ ಹೇಳುವುದಾದರೆ ನನ್ನ ಮನೆ ಮಹದೇವ ಗುಡ್ಡ ರಸ್ತೆಯಲ್ಲಿದೆ. ಅಲ್ಲಿಗೆ ನಡೆದುಕೊಂಡು ಹೋಗಬೇಕಾದರೂ ಸರ್ಕಸ್ ಮಾಡಿಕೊಂಡು ನಡೆದು ಹೋಗಬೇಕು. ಆ ರೀತಿ ಇರುತ್ತದೆ. ಬಸ್‌ಸ್ಟ್ಯಾಂಡ್ ಪಕ್ಕದ ರಸ್ತೆಯೂ ಸಹ ಅದೇ ಪ್ರಕಾರವಾಗಿ ಇದೆ. ಇದನ್ನು ನೋಡಿದರೆ ಸರ್ಕಾರ ಇದೆಯೋ ಸತ್ತಿದೆಯೋ ಎಂದು ಹೇಳಬೇಕಾಗಿದೆ. ಮುನಸಿಪಾಲಿಟಿಗಳು ಏನೂ ಕೆಲಸ ಮಾಡುತ್ತಿಲ್ಲ, ಎಂ. ಎಲ್. ಎ ಗಳಾಗಿ ನಾವು ಬಿಜಾಪುರದ ಪರಿಸ್ಥಿತಿಯನ್ನು ವಿಧಿಯಿಲ್ಲದೆ ಹೇಳಬೇಕಾಗಿದೆ.

ಇನ್ನು ಸ್ಕೂಲ್ ಬಿಲ್ಡಿಂಗ್ಸ್ ಬಗ್ಗೆ ಹೇಳುವುದಾದರೆ ಎಲ್ಲಾ ಸ್ಕೂಲ್ ಬಿಲ್ಡಿಂಗ್ಸ್‌ಗಳು ಬಿದ್ದು ಹೋಗಿವೆ. ಇವೊತ್ತಿನ ದಿವಸ ಬಿಜಾಪುರದಲ್ಲಿರುವ ಸ್ಕೂಲ್ ಬಿಲ್ಡಿಂಗ್‌ಗೋಸ್ಕರವಾಗಿ ಒಂದು ಪೈಸೆಯನ್ನೂ ಕೂಡ ಕೊಟ್ಟಿಲ್ಲ ಸ್ಕೂಲ್ಸ್ ಬೆಟರ್‌ಮೆಂಟ್‌ನವರು ದುಡ್ಡು ಕೂಡಿಸಿ ಖರ್ಚು ಮಾಡಿ ರಿಪೇರಿ ಮಾಡಲಿಕ್ಕೆ ಹತ್ತಿದ್ದಾರೆ. ಮಾನ್ಯ ಮಂಜುನಾಥ್‌ರವರು ಶಿಕ್ಷಣ ಸಚಿವರಾಗಿದ್ದಾಗ ಗೌವರ್ನಮೆಂಟ್ ಬಿಲ್ಡಿಂಗ್ಸ್ ಯಾವ ರೀತಿ ಇದೆ ಎಂದು ನಕಾಶೆಯನ್ನೂ ಕೂಡ ಕೊಡಲಾಗಿತ್ತು, ಈವತ್ತಿನವರೆಗೂ ಒಂದು ಪೈಸೆಯನ್ನೂ ಸಹ ಕೊಟ್ಟಿಲ್ಲ ಆದ್ದರಿಂದ ಬಿಜಾಪುರ ಸ್ಕೂಲ್ ಬಿಲ್ಡಿಂಗ್‌ಗಳ ರಿಪೇರಿಗಾಗಿ ಕೆಲವೊಂದು ಹಣವನ್ನು ಬಿಡುಗಡೆ ಮಾಡಬೇಕೆಂದು ಕಳಕಳಿಯಿಂದ ಕೇಳಿ ಕೊಳ್ಳುತ್ತೇನೆ.

ಇನ್ನು ೧೯೮೪ನೇ ಇಸವಿಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಪಾರ್ಲಿಮೆಂಟ್ ಎಲೆಕ್ಷನ್ ನಡೆದ ಸಂದರ್ಭದಲ್ಲಿ ನಮ್ಮ ಬಿಜಾಪುರ ಜಿಲ್ಲೆಗೆ ಪ್ರಚಾರಕ್ಕಾಗಿ ಬಂದಿದ್ದರು ಆ ಸಂದರ್ಭದಲ್ಲಿ ಅವರೇ ಇದೇನು ರೋಡುಗಳು ಹೀಗಿದೆ, ನೀರು ಸರಬರಾಜು ಹೀಗಿದೆ ಎಂದೆಲ್ಲಾ ಕೇಳಿದ್ದರು. ಒಂದು ಪಕ್ಷ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಸ್ವರ್ಗವನ್ನೇ ಕಾಣಿಸುತ್ತೇವೆಂದು ಹೇಳಿದ್ದರು. ಇದು ಎಲ್ಲಾ ಪತ್ರಿಕೆಗಳಲ್ಲೂ ಬಂದಿದೆ, ನಮ್ಮ ಜಿಲ್ಲೆಗೆ ಬಂದಾಗ ಬರಗಾಲ. ೧೯೮೪ನೇ ಇಸವಿಯಲ್ಲಿ ತಾವು ಏನು ಹೇಳಿದ್ದಿರಿ ಅದನ್ನು ಮತ್ತೆ ಜ್ಞಾಪಿಸಿಕೊಳ್ಳಿ, ತಾವೇ ಮುಖ್ಯ ಮಂತ್ರಿಗಳಾಗಿದ್ದೀರಿ, ಆ ಸಂದರ್ಭದಲ್ಲಿ ರೋಡ್ಸ್ ಮತ್ತು ನೀರಿನ ಸಲುವಾಗಿ ಕೇಳಿಕೊಂಡಿದ್ದೆವು. ಈವತ್ತಿನವರೆಗೂ ಒಂದು ಪೈಸೆಯನ್ನು ಬಿಡುಗಡೆ ಮಾಡಿಲ್ಲ. ಹಿಂದೆ ಮುಖ್ಯ ಮಂತ್ರಿಗಳಾಗಿದ್ದ ಗುಂಡೂರಾಯರು ಹೆಲಿಕ್ಯಾಪ್ಟರ್‌ನಲ್ಲಿ ಓಡಾಡುತ್ತಾರೆ ಅವರಿಗೆ ರಸ್ತೆಯಲ್ಲಿ ಓಡಾಡಿದ್ದರೆ ತಿಳಿಯುತ್ತಿತ್ತು ಎಂದೆಲ್ಲ ಹೇಳಿದ್ದೀರಿ, ತಾವು ಏನು ನುಡಿದಿದ್ದೀರಿ ಅದರಂತೆ ನಡೆದುಕೊಳ್ಳಿ.

ಇನ್ನು ಮನೆಗಳ ಬಗ್ಗೆ ಹೇಳುವುದಾದರೆ ಕೊಳಚೇ ಪ್ರದೇಶಗಳು ಏತಕ್ಕೆ ಆಗುತ್ತವೆ ಎನ್ನುವ ಬಗ್ಗೆ ಮಾನ್ಯ ಪಂಪಾಪತಿಯವರು ಬಹಳ ಚೆನ್ನಾಗಿ ಹೇಳಿರುತ್ತಾರೆ. ಬಿಜಾಪುರ ಬಹಳ ಐತಿಹಾಸಿಕ ನಗರ. ಇಲ್ಲಿ ಹಿಸ್ಟಾರಿಕಲ್ ಬಿಲ್ಡಿಂಗ್‌ಗಳು ಬಹಳವಾಗಿ ಇವೆ. ಗೋಳಗುಮ್ಮಟದಂಥ ಚರಿತ್ರಾರ್ಹವಾದ ಕಟ್ಟಡಗಳು ಇರುತ್ತವೆ, ಅವುಗಳನ್ನು ನೋಡಲು ಫಾರಿನರ್ಸ್ ಬಹಳವಾಗಿ ಬರುತ್ತಾರೆ, ಅಲ್ಲಿ ಏನಾಗಿದೆ. ಎಂದರೆ ಕೋಟೆ ಗೋಡೆ ಮಗ್ಗುಲಲ್ಲಿ ಸ್ಲಮ್ಸ್ ಪೂರ್ತಿಯಾಗಿ ಬೆಳೆದಿದೆ. ಈ ಸ್ಲಮ್ಸ್‌ನ್ನು ಹೋಗಲಾಡಿಸುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಯಾರು ಸ್ಲಮ್‌ನಲ್ಲಿ ಇದ್ದಾರೋ ಅವರನ್ನು ಗುರುತಿಸಿ ಅವರ ಹೆಸರನ್ನು ತೆಗೆದುಕೊಂಡು ಸರ್ಕಾರದವರು ಜಮೀನನ್ನು ಅಕ್ವಾಯರ್ ಮಾಡಿ ಅವರಿಗೆ ಕಟ್ಟಡಗಳನ್ನು ಕಟ್ಟಿಸಿ ಹಂಚಬೇಕು, ಆ ರೀತಿ ಮಾಡದಿದ್ದರೆ ಕೊಳಚೇ ಪ್ರದೇಶಗಳನ್ನು ನಿರ್ಮೂಲ ಮಾಡಲು ಸಾಧ್ಯವಾಗುವುದಿಲ್ಲ. ಕೆಲವೊಂದು ಏರಿಯಾಗಳನ್ನು ಸ್ಲಮ್ಸ್ ಏರಿಯಾ ಎಂದು

ಕ್ಲೀರ್ ಮಾಡಿದ್ದಾರೆ. ಆದರಲ್ಲೂ ಗೋಳಗುಪ್ಪಟ ಪಕ್ಕದಲ್ಲಿರುವ ಸ್ಲಂನ್ನಿನ ಕೆಲವು ಜನರಿಗೆ ಮನೆಗಳನ್ನು ಕೊಟ್ಟಿದ್ದಾರೆ, ಉಳಿದವರು ಹಾಗೆಯೇ ಇದ್ದಾರೆ. ಆದ್ದರಿಂದ ಕೊಳಚೆ ಪ್ರದೇಶಗಳಲ್ಲಿ ಇರುವವರನ್ನು ಗುರುತಿಸಿ ಅವರಿಗೆ ಊರ ಹೊರಗಡೆ ಇರುವ ಲ್ಯಾಂಡ್‌ನ್ನು ಅಕ್ವೈರ್ ಮಾಡಿ ಮನೆ ಗಳನ್ನು ಕಟ್ಟಿಸಿಕೊಡುವ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಎರಡನೆಯದಾಗಿ ಹುಡ್ಕೋ ಯೋಜನೆಯು ಮುಖಾಂತರ ಸೋಲಾಪುರದಲ್ಲಿ ಒಂಭೈನೂರು ಮನೆ ಗಳನ್ನು ಕಟ್ಟಿಸಿರುತ್ತಾರೆ. ಆ ಮನೆಗಳು ಏನು ಇವೆ ಅವುಗಳಿಗೆ ನೀರಿನ ಸೌಕರ್ಯವನ್ನು ಮಾಡಿಲ್ಲ. ರಸ್ತೆಗಳನ್ನು ಮಾಡಿಸಿಲ್ಲ ಎಲೆಕ್ಟ್ರಿಸಿಟಿಯನ್ನು ಸಪ್ಲೆ ಮಾಡಿಲ್ಲ. ಈ ರೀತಿಯಿರುವುದರಿಂದ ಜನರು ಅಲ್ಲಿಗೆ ಹೋಗದೆ ಅವು ಹಾಳು ಬಿದ್ದಿವೆ. ಇನ್ನು ಆರು ತಿಂಗಳು ಹೀಗೆಯೇ ಇದ್ದರೆ ಆ ಮನೆಗಳು ಬಿದ್ದು ಹೋಗುವ ಪರಿಸ್ಥಿತಿಗೆ ಬರುತ್ತದೆ. ಆದ್ದರಿಂದ ಮಾನ್ಯ ಸಚಿವರಲ್ಲಿ ನಾನು ತೀವ್ರವಾಗಿ ಕೇಳಿಕೊಳ್ಳುವು ದೇನೆಂದರೆ ಆ ಮನೆಗಳ ಎಲೆಕ್ಟ್ರಿಸಿಟಿ, ನೀರು ರಸ್ತೆ ವ್ಯವಸ್ಥೆ ಇದೆಲ್ಲವನ್ನು ಮಾಡಿಸಿ ಪ್ರೊಜೆಷನ್ ಕೊಡ ಬೇಕೆಂದು ಸರ್ಕಾರವನ್ನು ಕಳಕಳಿಯಿಂದ ಕೇಳಿ ಕೊಳ್ಳುತ್ತೇನೆ. ನಮ್ಮ ಬಿಜಾಪುರದಲ್ಲಿ ಊರಿನ ಹೊರ ಗಡೆ ಬಡಾವಣೆಗಳು ಬರಲಿಕ್ಕೆ ಹತ್ತಿವೆ, ಅದರ ಬಗ್ಗೆ ಬಹಳ ಕಾಳಜಿ ವಹಿಸಬೇಕು ಏಕೆಂದರೆ ನಮ್ಮಲ್ಲಿ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಇದೆ. ಅದನ್ನೇನೋ ಅರಸರ ಕಾಲದಲ್ಲಿ ಮಾಡಿದರು. ನನ್ನನ್ನು ಕೇಳಿದರೆ ವರ್ಕ್ ಮಾತ್ರ ನಿಲ್ ಇವತ್ತಿನವರೆಗೆ ಏನೂ ಕಾರ್ಯ ಮಾಡಿಲ್ಲ. ಇಷ್ಟು ಸೈಟು ಹಂಚಿದ್ದೇವೆಂದು ಪುಸ್ತಕದಲ್ಲಿ ಮಾತ್ರ ಕೊಟ್ಟಿದ್ದಾರೆ. ಯಾವುದೇ ಪಕ್ಷದ ಸರ್ಕಾರ ಇರಲಿ, ಅಲ್ಲಿ ಪಾರ್ಟಿ ಮನುಷ್ಯರಿಗೆ ಕಾರ್... ಮನೆ ಭತ್ಯೆ ಸಲುವಾಗಿ ಇಟ್ಟಿದ್ದಾರೆಯೇ ಹೊರತು ಯಾವ ಕಾರ್ಯವನ್ನು ಮಾಡಿಲ್ಲ ಅಲ್ಲಿ ಯಾರನ್ನು ಬೇಕಾದರೂ ಕೂರಿಸಿ. ನಿಮ್ಮ ಪಕ್ಷದವರನ್ನೇ ಕೂರಿಸಿ. ಆದರೆ ಯಾರು ಚೆನ್ನಾಗಿ ಕೆಲಸ ಮಾಡುತ್ತಾರೆಯೋ ಅಂಥವರನ್ನು ಹಾಕಿ ಎಂದು ಕೇಳಿ ಕೊಳ್ಳುತ್ತೇನೆ. ಒಂದೊಂದು ಸಾರಿ ನನಗೆ ಸಂಶಯ ಬರುತ್ತದೆ, ನಮ್ಮ ಬಿಜಾಪುರ ನಗರಕ್ಕೆ ಸರ್ಕಾರದ ಕಾಂಟ್ರಿಬ್ಯೂಷನ್ ಏನು ಇದೆ ಎಂದು. ಕೊಲ್ಹಾರದಿಂದ ಹಿಡಿದು ಬಿಜಾಪುರದವರೆಗೆ ಪೈಪ್‌ಲೈನ್ ಆಗಿದ್ದು ನಮ್ಮ ಸರ್ಕಾರದಲ್ಲಿ ಅಂದರೆ ಕಾಂಗ್ರೆಸ್ ಸರ್ಕಾರ ಇದ್ದಾಗ, ಅದೇ ರೀತಿ, ಡ್ರೈನೇಜ್ ಆದದ್ದು, ಸಿವಿಲ್ ಹಾಸ್ಪಿಟಲ್ ಆದದ್ದು ಕೂಡ ನಮ್ಮ ಕಾಂಗ್ರೆಸ್ ಸರ್ಕಾರ ಇದ್ದಾಗ, ಇವತ್ತು ತಾವು ಏನು ಮಾಡಿದ್ದೀರಿ ? ತಮ್ಮ ಕೊಡುಗೆ ಏನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಏನು ಮಾಡಿದ್ದೀರಿ ಎಂದರೆ ಬೊಂಬಡಿ ಹೊಡೆಯುವುದಕ್ಕೆ ಹತ್ತಿದ್ದಾರೆ.

ಶ್ರೀ ಎಂ. ಎಲ್. ಉಸ್ತಾದ್.—ನಾನು ಮುಖ್ಯವಾಗಿ ಒಂದೇ ಒಂದು ಕೆಲಸ ಮಾಡಿ ಕೊಡುವ ಸಲುವಾಗಿ ಒತ್ತಾಯಿಸುತ್ತೇನೆ. ಇದುವರೆಗೆ ನೀರಿನ ಸಲುವಾಗಿ ಯಾರೂ ಏನೂ ಮಾಡಿದ್ದಿಲ್ಲ, ಕುಡಿಯುವುದಕ್ಕೆ ನೀರನ್ನು ಸರಬರಾಜು ಮಾಡಿಕೊಟ್ಟು ಶಭಾಶ್‌ಗಿರಿ ತೆಗೆದುಕೊಳ್ಳಿ. ಅದು ಬಿಟ್ಟು ಸುಳ್ಳು-ಪೊಳ್ಳು ಭರವಸೆಗಳನ್ನು ಕೊಡುತ್ತಿದ್ದಾರೆಯೇ ಹೊರತು ಬೇರೆ ಏನೂ ಆಗಿಲ್ಲ.

ಅಧ್ಯಕ್ಷರು.—ಮಾನ್ಯ ಚಂದ್ರಶೇಖರ್‌ರವರೇ ಚೆನ್ನಾಗಿ ಕೆಲಸ ಮಾಡಿ ಶಭಾಶ್‌ಗಿರಿ ತೆಗೆದುಕೊಳ್ಳಿ.

ಶ್ರೀ ಎಂ. ಎಲ್. ಉಸ್ತಾದ್.—ನಾವು ನಮ್ಮ ಹೊಟ್ಟೆಗೆ ಕೂಳು ಬೇಡುವುದಿಲ್ಲ, ಬಟ್ಟೆ ಬೇಡು ವುದಿಲ್ಲ. ಕುಡಿಯುವುದಕ್ಕೆ ನೀರು ಒಂದನ್ನು ಮಾತ್ರ ಬೇಡುತ್ತೇವೆ. ಮಾನ್ಯ ಸಚಿವರು ನಮ್ಮ ಬಿಜಾಪುರವನ್ನೆಲ್ಲ ತಿರುಗಾಡಿ ನೋಡಿದ್ದಾರೆ. ದಿನೇ ದಿನೇ ಜನಸಂಖ್ಯೆ ಬೆಳೆಯುತ್ತಿದೆ. ೧೯೧೧ ರಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿ ಒಂದು ಕೆರೆಯು ನಿರ್ಮಾಣವಾಗಿತ್ತು, ಆಗ ನಮ್ಮಲ್ಲಿ ೩ ಸಾವಿರ ಜನಸಂಖ್ಯೆ ಇತ್ತು ಇವತ್ತಿನ ದಿವಸ ಎರಡು ಲಕ್ಷಕ್ಕೂ ಮಿಕ್ಕಿದೆ. ಆದ್ದರಿಂದ ನಮಗೆ ಮುಖ್ಯ ವಾಗಿ ಕುಡಿಯಲಿಕ್ಕೆ ನೀರನ್ನು ಮಾತ್ರ ತಪ್ಪದೆ ಕೊಡಿರಿ ಎಂದು ಕೇಳಿ ಕೊಳ್ಳುತ್ತೇನೆ. ಇನ್ನು ರಸ್ತೆಗಳ ಬಗ್ಗೆ ಹೇಳುವುದಾದರೆ, ನಾನು ಗುಲ್ಬರ್ಗಕ್ಕೆ ಹೋಗಿದ್ದೆ. ಸಿಂಧಗಿಯಿಂದ ಗುಲ್ಬರ್ಗಕ್ಕೆ ಹೋಗುವ ವರೆಗೆ ರಸ್ತೆ ಇದೆಯೋ ಇಲ್ಲವೋ ತಿಳಿಯುತ್ತಿಲ್ಲ. ಅದೇ ರೀತಿ ಇಂಟೀರಿಯರ್ ಪ್ರದೇಶಕ್ಕೆ ಹೋದರೆ ಕೇಳುವಂತೆಯೇ ಇಲ್ಲ. ಇಲ್ಲಿಯೂ ರಸ್ತೆ ಇತ್ತು ಎನ್ನುತ್ತಾರೆ. ಸೇತುವೆಗಳ ಬಗ್ಗೆ ಹೇಳುವುದಾದರೆ ನಮ್ಮ ಭಾಗದಲ್ಲಿ ಏನು ಸೇತುವೆಗಳನ್ನು ಮಾಡಿದ್ದಾರೆ ಅವೆಲ್ಲಾ ಬಿದ್ದು ಹೋಗಿವೆ, ಏನೇನೂ ಇಲ್ಲ. ಅದನ್ನು ಮಾಡಿದ ಇಂಜಿನಿಯರ್‌ಗಳು ಯಾರು ? ಪ್ಲಾನ್ ಮಾಡಿದವರು ಯಾರು ? ಅವರ ಸಲ ವಾಗಿ ಕೇಂದ್ರ ಸರ್ಕಾರದಿಂದ ಒಂದು ನೂರು ಕೋಟಿ ರೂಪಾಯಿ ಮಂಜೂರಾಗಿದ್ದು ೫೬ ಕೋಟಿ

ರೂಪಾಯಿ ರಿಲೀಸ್ ಆಗಿದೆ. ಆದರೆ ಯಾರು ಇಂಜನಿಯರ್‌ಗಳು ಮತ್ತು ಕಂಟ್ರಾಕ್ಟರುಗಳು ಕೂಡಿ ಕೆಲಸ ಮಾಡುತ್ತಾರೋ ಅವರಿಬ್ಬರೂ ಶಾಮೀಲಾಗಿ ಸೇತುವೆಗಳ ಪರಿಸ್ಥಿತಿ ಈ ರೀತಿ ಆಗಿದೆ. ಅವರುಗಳ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಅಧ್ಯಕ್ಷರಿಗೆವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಪ್ರಕಟಣೆ

ಸದಸ್ಯರಿಗೆ ಗೈರು ಹಾಜರಾಗಲು ಅನುಮತಿ ಕೋರಿಕೆ

ಅಧ್ಯಕ್ಷರು.—ವಿಧಾನಸಭಾ ಸದಸ್ಯರುಗಳಾದ ಶ್ರೀಮಂತಿ ವಿಜಯಲಕ್ಷ್ಮೀ ಬಂಡೀಸಿದ್ದೇಗೌಡರಿಗೆ ೧೩-೫-೮೮ರಿಂದ ೨೩-೫-೮೮ರವರೆಗೆ ಕೆಲವೊಂದು ಕಾರಣಗಳಿಂದ ವಿಧಾನ ಸಭೆಯ ಉಪವೇಶನಗಳಿಗೆ ಗೈರು ಹಾಜರಾಗಲು ಕೋರಿ ಪತ್ರ ಬರೆದಿದ್ದಾರೆ. ಮೇಲೆ ಸೂಚಿಸಿದಂಥ ಅವಧಿಯಲ್ಲಿ ಅವರಿಗೆ ಗೈರು ಹಾಜರಾಗಲು ಈ ಸದನವು ಒಪ್ಪಿಗೆ ನೀಡುತ್ತದೆಯೆ ?

(ಯಾವ ಸದಸ್ಯರೂ ವಿರೋಧ ವ್ಯಕ್ತಪಡಿಸಲಿಲ್ಲ)

ಶ್ರೀಮಂತಿ ವಿಜಯಲಕ್ಷ್ಮಿ ಬಂಡೀಸಿದ್ದೇಗೌಡರು ಗೈರುಹಾಜರಾಗಲು ಅನುಮಂತಿ ನೀಡಲಾಗಿದೆ.

ಈಗ ಇಲ್ಲಿಗೆ ಸಭೆಯನ್ನು ಮುಗಿಸೋಣ.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್.—ನಾನು ನನ್ನ ಹೆಸರನ್ನು ಕೊಟ್ಟು ಇದುವರೆಗೆ ಕಾಯು ಕುಳಿತಿದ್ದೇನೆ.

ಅಧ್ಯಕ್ಷರು.—ಸದನದ ಅಭಿಪ್ರಾಯದ ಪ್ರಕಾರ ಹೋಗಬೇಕಾಗುತ್ತದೆ. ಚರ್ಚೆ ಇವತ್ತಿಗೇನೂ ಮುಗಿಯುವುದಿಲ್ಲ. ಸೋಮವಾರವೂ ಮುಂದುವರಿಸುತ್ತೇವೆ. ನಿಮಗೂ ಅವಕಾಶ ಕೊಡುತ್ತೇನೆ. ನಿಮ್ಮ ಹೆಸರು ಪಟ್ಟಿಯಲ್ಲಿದೆ. ಸೋಮವಾರ ನಿಮಗೆ ಅವಕಾಶ ಕೊಡುತ್ತೇನೆ. ಈಗ ಸಭೆಯನ್ನು ಇಲ್ಲಿಗೆ ಮುಕ್ತಾಯಗೊಳಿಸಿ ಸೋಮವಾರ ಬೆಳಿಗ್ಗೆ ೧೧ ಗಂಟೆಗೆ ಮುಂದೂಡಲಾಗಿದೆ.

(ಸಭೆ ಮಧ್ಯಾಹ್ನ ಒಂದು ಗಂಟೆ ಮೂವತ್ತೈದು ನಿಮಿಷಕ್ಕೆ ಮುಕ್ತಾಯವಾಗಿ ೧೬ನೇ ಮೇ ೧೯೮೮ರ ಸೋಮವಾರ ಬೆಳಿಗ್ಗೆ ಹನ್ನೊಂದು ಗಂಟೆಗೆ ಸಮಾವೇಶಗೊಳ್ಳುವುದಾಗಿ ನಿಶ್ಚಯಿಸಿತು)

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.